ಸಂಪುಟ: 06 ಸಂಚಿಕೆ: 33 ಪುಟಗಳು: 08 ಶುಕ್ರವಾರ 17 ಏಪ್ರಿಲ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಜಗತ್ತು ಬದಲಾಗಬೇಕು ಎನ್ನುವವರು ಮೊದಲು ತಮ್ಮಿಂದಲೇ ಬದಲಾವಣೆಯಾಗಬೇಕು ಎಂಬುದನ್ನು ಅರಿತುಕೊಳ್ಳಬೇಕು.

## ಯೋಗೇಶ್ ಗೌಡ ಕೊಲೆ ಪ್ರಕರಣ: ಹತ್ಯೆಗೆ ಕಾರಣವಾದ ಅಂಶ, ವಿನಯ್ ಕುಲಕರ್ಣಿ ಪಾತ್ರ

• ಉದಯವಾಹಿನಿ, ಬೆಂಗಳೂರು

ಧಾರವಾಡ ಜಿಲ್ಲಾ ಪಂಚಾಯತ್ ಬಿಜೆಪಿ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ 17 ಮಂದಿ ದೋಷಿಗಳೆಂದು ನ್ಯಾಯಾಲಯ ಆದೇಶ ಮಾಡಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಈ ಮಹತ್ವದ ತೀರ್ಪನ್ನು ಬುಧವಾರ ಪ್ರಕಟಿಸಿದೆ. ಶಿಕ್ಷೆಯ ಪ್ರಮಾಣ ಎಷ್ಟು ಎಂಬುವುದು ಇನ್ನೂ ಪ್ರಕಟಗೊಂಡಿಲ್ಲ. ನ್ಯಾಯಾಲಯದ ತೀರ್ಪು ವಿನಯ್ ಕುಲಕರ್ಣಿ ರಾಜಕೀಯ ಜರ್ನಿಗೆ ದೊಡ್ಡ ಹೊಡೆತವಾಗಿದೆ. ಅಷ್ಟಕ್ಕೂ ಯೋಗೇಶ್ ಗೌಡ ಕೊಲೆಗೆ ಏನು ಕಾರಣ? ಇದರಲ್ಲಿ ವಿನಯ್ ಕುಲಕರ್ಣಿ ಪಾತ್ರ ಏನು ಎಂಬುದು ಬಹು ಮುಖ್ಯವಾಗಿದೆ.



**ಯೋಗೇಶ್ ಗೌಡ ಹಿನ್ನಲೆ ಏನು?:** ಯೋಗೇಶ್ ಗೌಡ ಸಾಮಾಜಿಕ ಕಾರ್ಯಕರ್ತರಾಗಿ ಹಾಗೂ ಬಿಜೆಪಿ ಮುಖಂಡನಾಗಿ ಗುರುತಿಸಿಕೊಂಡಿದ್ದರು. ಮೂಲತಃ ಧಾರವಾಡದ ಗೋವನಕೊಪ್ಪ ನಿವಾಸಿ. ಇವರ ಕೊಲೆ ಪ್ರಕರಣಕ್ಕೂ ಸುಮಾರು ನಾಲ್ಕು ವರ್ಷ ಮೊದಲು ಇವರ ಸಹೋದರನ ಉದಯ್ ಗೌಡ ಕೊಲೆಯಾಗಿತ್ತು. ಭೂ ವಿವಾದಕ್ಕೆ ಸಂಬಂಧಿಸಿದಂತೆ ಈ ಕೊಲೆ ನಡೆದಿತ್ತು.

**ದ್ವೇಷಕ್ಕೆ ಕಾರಣ ಏನು?:** ಯೋಗೇಶ್ ಗೌಡ ಹಾಗೂ ವಿನಯ್ ಕುಲಕರ್ಣಿ ನಡುವೆ ಕೆಲವೊಂದು ವಿಚಾರವಾಗಿ ಆಂತರಿಕ ಭಿನ್ನಾಭಿಪ್ರಾಯ ಇತ್ತು. ಯೋಗೇಶ್ ಗೌಡ ಧಾರವಾಡ ಜಿಲ್ಲಾ ಪಂಚಾಯತ್ ಬಿಜೆಪಿ ಸದಸ್ಯರಾಗಿದ್ದರು. ಇದೇ ಸಂದರ್ಭದಲ್ಲಿ ಕುಡಿಯೋ ನೀರಿನ ವಿಚಾರಕ್ಕೆ ಯೋಗೇಶ್ ಗೌಡ ಹಾಗೂ ವಿನಯ್ ಕುಲಕರ್ಣಿ ನಡುವೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಬಿಸಿ ಮಾತಿನ ವಿನಿಮಯ ಆಗಿತ್ತು.

**ಬಂಧನಕ್ಕೆ ಒಳಗಾಗಿದ್ದ ಯೋಗೇಶ್:** ಈ ಘಟನೆಯ ಬಳಿಕ ಮತ್ತೊಂದು ಪ್ರಕರಣದಲ್ಲಿ ಯೋಗೇಶ್ ಗೌಡ ವಿರುದ್ಧ ಪ್ರಕರಣ ದಾಖಲಾಗಿತ್ತು ಹಾಗೂ ಬಂಧನವಾಗಿತ್ತು. ಆದರೆ ಜೈಲಲ್ಲಿ ಇದ್ದೇ ಯೋಗೇಶ್ ಗೌಡ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು.

**ವಿನಯ್ ಕುಲಕರ್ಣಿಗೆ ಠಕ್ಕರ್:** ಜೈಲಿಂದ ಬಿಡುಗಡೆಯಾದ ಬಳಿಕ ಯೋಗೇಶ್ ಗೌಡ ಮತ್ತೆ ಸಕ್ರಿಯವಾಗಿದ್ದರು. ವಿವಿಧ ರೀತಿಯಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಅಲ್ಲದೆ, ಧಾರವಾಡ ಗ್ರಾಮೀಣ ಕ್ಷೇತ್ರದಿಂದ ವಿಧಾನಸಭೆ ಚುನಾವಣೆಗೆ ಅಖಾಡಕ್ಕಿಳಿಯಲು ಪ್ರಯತ್ನ ನಡೆಸುತ್ತಿದ್ದರು.

ಜಿಲ್ಲಾ ಪಂಚಾಯತ್‌ನಲ್ಲಿ ಇವರಿಬ್ಬರ ನಡುವಿನ ಮಾತಿನ ಚಕಮಕಿ ದ್ವೇಷಕ್ಕೆ ತಿರುಗಿತ್ತು. ಬಳಿಕ ಕಿಮ್ಸ್ ಡೈರೆಕ್ಟರ್ ಜೊತೆಗೆ ವಿನಯ್ ಕುಲಕರ್ಣಿ ಗಲಾಟೆ ಆಗಿತ್ತು. ಆ ಗಲಾಟೆಯ ವಿಡಿಯೋ ವೈರಲ್ ಆಗಿತ್ತು.

ಬಿಜೆಪಿ ಅದನ್ನು ರಾಜಕೀಯವಾಗಿ ಬಳಕೆ ಮಾಡಿತ್ತು. ಇದರ ಹಿಂದೆ ಯೋಗೇಶ್ ಗೌಡ ಪಾತ್ರ ಇದೆ ಎಂಬ ಗುಮಾನಿ ಇತ್ತು.



**ಕೊಲೆ ನಡೆದಿದ್ದು ಹೇಗೆ?:** ಯೋಗೇಶ್ ಗೌಡ ಕೊಲೆಗೆ ವ್ಯವಸ್ಥಿತವಾಗಿ ಸಂಚು ರೂಪಿಸಲಾಗಿತ್ತು. ರಾಜಕೀಯ, ಸಾಮಾಜಿಕ ಹೋರಾಟದ ಜೊತೆಗೆ ಯೋಗೇಶ್ ಗೌಡ ಪ್ರತಿನಿತ್ಯ ಜಿಮ್‌ನಲ್ಲಿ ಕಸರತ್ತು ನಡೆಸುತ್ತಿದ್ದರು. ಈ ವಿಚಾರ ಕೊಲೆಗಾರರಿಗೆ ತಿಳಿದಿತ್ತು. ಯೋಗೇಶ್ ಗೌಡ ಅವರನ್ನು ಹತ್ಯೆಕೋರರು ನಿತ್ಯ ಫಾಲೋ ಮಾಡುತ್ತಿದ್ದರು. ಅವರ ಚಲನವಲನದ ಬಗ್ಗೆ ಪೂರ್ಣ ಮಾಹಿತಿ ಪಡೆದುಕೊಳ್ಳುತ್ತಿದ್ದರು. ಇದಕ್ಕೆ ಒಂದು ತಂಡ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿತ್ತು. 2016 ಜೂನ್ ನಲ್ಲಿ ಜಿಮ್ ಕೆಳಗಡೆ ನ್ಯೂಸ್ ಪೇಪರ್ ಓದುತ್ತಿದ್ದಾಗ ಆರು ಮಂದಿಯ ತಂಡ ಏಕಾಏಕಿ ದಾಳಿ ನಡೆಸಿತ್ತು.

ಕಣ್ಣಿಗೆ ಖಾರದ ಪುಡಿ ಎರಚಿ ಮಾರಕಾಸ್ತ್ರಗಳಿಂದ ಹತ್ಯೆ ನಡೆಸಿತ್ತು. ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಆರಂಭಿಕವಾಗಿ ಆರು ಮಂದಿ ಆರೋಪಿಗಳನ್ನು ಸರೆಂಡರ್ ಮಾಡಲಾಗಿತ್ತು. ಬಳಿಕ ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ ನಡೆಸಲಾಗಿತ್ತು. ಜಮೀನು ವಿವಾದಕ್ಕೆ ಕೊಲೆ ನಡೆದಿದೆ ಎಂದು ಕೇಸ್ ಮುಗಿಸುವ ಪ್ರಯತ್ನ ನಡೆಸಲಾಗಿತ್ತು.

ಇದೇ ಸಂದರ್ಭದಲ್ಲಿ ಯೋಗೇಶ್ ಗೌಡ ಅವರ ಸಹೋದರ ಗುರುನಾಥ್ ಗೌಡ ಜೊತೆಗೆ ಪೊಲೀಸ್ ಅಧಿಕಾರಿಯೊಬ್ಬರು ಸಂಧಾನ ಮಾತುಕತೆಯ ಪ್ರಯತ್ನ ನಡೆಸಿದ್ದರು. ಇದರ ವಿಡಿಯೋ ರೆಕಾರ್ಡ್ ಮಾಡಿ ಸಾಕ್ಷಿ ನಾಶ ಕೇಸ್ ದಾಖಲು ಮಾಡಲಾಗಿತ್ತು. ಈ ಘಟನೆ ಬಳಿಕ ವಿನಯ್ ಕುಲಕರ್ಣಿ ವಿಚಾರಣೆ ನಡೆಸಲಾಗಿತ್ತು.

ಬಳಿಕ ಬಿಎಸ್ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರ ಮಾಡಿತ್ತು. ಸಿಬಿಐ ತನಿಖೆಯಲ್ಲಿ ಆರೋಪಿಗಳು ಹಾಗೂ ಸಾಕ್ಷಿಗಳ ವಿಚಾರಣೆ ನಡೆಸಲಾಗಿತ್ತು. ಪ್ರಕರಣದ ತನಿಖೆ ತೀವ್ರಗೊಂಡಂತೆ ನೈಜ ಆರೋಪಿಗಳ ಬಂಧನವಾಯಿತು.

ಪ್ರಕರಣದ ತನಿಖೆಯ ಸಂದರ್ಭದಲ್ಲಿ ಸಿಬಿಐಗೆ ಶಾಸಕ ವಿನಯ್ ಕುಲಕರ್ಣಿ ಪಾತ್ರವೂ ಸಾಬೀತಾಯಿತು. ಬಳಿಕ 2020 ರಲ್ಲಿ ಕುಲಕರ್ಣಿ ಬಂಧನವಾಗುತ್ತದೆ. ಕೊಲೆ ಪ್ರಕರಣದ ಆರೋಪದಡಿಯಲ್ಲಿ ಕುಲಕರ್ಣಿ ಅವರನ್ನು ಸಿಬಿಐ ಕಸ್ಟಡಿಗೆ ತೆಗೆದುಕೊಳ್ಳುತ್ತದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಸಲ್ಲಿಸಿದ ಚಾರ್ಜ್ ಶೀಟ್‌ನಲ್ಲಿ ಕೆಲವೊಂದು ಮಹತ್ವದ ವಿಚಾರಗಳನ್ನು ಉಲ್ಲೇಖ ಮಾಡಲಾಗಿದೆ. ಸಾಕ್ಷಿಗಳಿಗೆ ಬೆದರಿಕೆ, ಸಾಕ್ಷಿ ನಾಶ ಆರೋಪಗಳು ಚಾರ್ಜ್‌ಶೀಟ್‌ನಲ್ಲಿದೆ.

## ಸಚಿವ ಎಚ್‌ಡಿಕೆ ಎಡಿಜಿಪಿ ಖಟ್ಲೆ ಮಧ್ಯಸ್ಥಿಕೆಗೆ ನ್ಯಾ.ಓಕಾ ನೇಮಕ

• ಉದಯವಾಹಿನಿ, ಬೆಂಗಳೂರು

'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಲೋಕಾಯುಕ್ತ ಎಡಿಜಿಪಿ ಮತ್ತು ಎಸ್‌ಐಟಿ ಮುಖ್ಯಸ್ಥ ಎಂ.ಚಂದ್ರಶೇಖರ್ ನೀಡಿರುವ ದೂರಿಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣದ ರಾಜಿ ಸಂಧಾನಕ್ಕೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಭಯ ಶ್ರೀನಿವಾಸ ಓಕಾ ಅವರನ್ನು ನೇಮಕ ಮಾಡಿ ಹೈಕೋರ್ಟ್ ಆದೇಶಿಸಿದೆ. 'ನಮ್ಮ ವಿರುದ್ಧ ಸಂಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಎಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಮತ್ತು ಸುರೇಶ್ ಬಾಬು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. 'ನ್ಯಾ. ಎ.ಎಸ್.ಓಕಾ ಅವರ ನೇಮಕಕ್ಕೆ ಉಭಯ ಪಕ್ಷಗಾರರು ಒಪ್ಪಿಗೆ ಸೂಚಿಸಿದ್ದಾರೆ. ಇವರ ಗೌರವಧನ ಮತ್ತು ವೆಚ್ಚದ ಕುರಿತು ಪಕ್ಷಗಾರರು ನಿರ್ಧರಿಸಿಕೊಳ್ಳಬಹುದು. ಮಧ್ಯಸ್ಥಿಕೆ ಸ್ಥಳ ಮತ್ತು ಇತರ ಅಂಶಗಳನ್ನು ಆದೇಶದಲ್ಲಿ ಉಲ್ಲೇಖಿಸಲಾಗುವುದು' ಎಂದು ನ್ಯಾಯಪೀಠ ತಿಳಿಸಿತು. ಕುಮಾರಸ್ವಾಮಿ ಪರ ಪದಾಂಕಿತ ಹಿರಿಯ ವಕೀಲ ಹಷ್ಮತ್ ಪಾಷ ಹಾಗೂ ಚಂದ್ರಶೇಖರ್ ಪರ ಹೈಕೋರ್ಟ್ ವಕೀಲ ಹಿದಾಯತ್ ಉಲ್ಲಾ ಹಾಜರಿದ್ದರು.

## ವಚನಾನಂದ ಶ್ರೀಗೆ ಹರಿಹರ ಮಠ ತೊರೆಯಲು ಗಡುವು

• ಉದಯವಾಹಿನಿ, ಬೆಂಗಳೂರು

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಿಂದ ಉಚ್ಚಾಟಿತರಾಗಿರುವ ವಚನಾನಂದ ಸ್ವಾಮೀಜಿ ಏ.23ರ ಒಳಗೆ ಮಠದಿಂದ ಗೌರವಯುತವಾಗಿ ನಿರ್ಗಮಿಸಬೇಕು. ಇಲ್ಲವಾದರೆ ಸಾವಿರಾರು ಭಕ್ತರು ಮಠಕ್ಕೆ ಧಾವಿಸಿ ಹೊರಹಾಕುತ್ತೇವೆ ಎಂದು ಗುರುಪೀಠದ ಟ್ರಸ್ಟಿ ಎಚ್.ಎಸ್. ನಾಗರಾಜ್ ತಿಳಿಸಿದರು. 'ಟ್ರಸ್ಟ್ ತೀರ್ಮಾನವನ್ನು ಮೀರಿ ಸ್ವಾಮೀಜಿ ಮಠದಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಟ್ರಸ್ಟ್ ವಿರುದ್ಧ ಭಕ್ತರನ್ನು ಎತ್ತಿಕಟ್ಟುವ ಅವರ ಪ್ರಯತ್ನವೂ ಫಲ ನೀಡುವುದಿಲ್ಲ. ಸ್ವಯಂಪ್ರೇರಿತವಾಗಿ ಮಠವನ್ನು ತೊರೆಯದೇ ಇದ್ದರೆ ಮುಂದಿನ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು. 'ರಾಜ್ಯದಲ್ಲಿ ಚದುರಿ ಹೋಗಿರುವ ಸಮುದಾಯವನ್ನು ಧಾರ್ಮಿಕ ಹಾಗೂ ಸಾಮಾಜಿಕವಾಗಿ ಸಂಘಟಿಸುವ ಉದ್ದೇಶದಿಂದ 8 ವರ್ಷಗಳ ಹಿಂದೆ ವಚನಾನಂದ ಸ್ವಾಮೀಜಿ ಅವರನ್ನು ಗುರುಪೀಠಕ್ಕೆ ತರಲಾಗಿತ್ತು. ಮಠಕ್ಕೆ ಬರುವ ಭಕ್ತರಿಗೆ ಸ್ವಾಮೀಜಿ ಸಿಗುತ್ತಿರಲಿಲ್ಲ. ಅವರ ನಡವಳಿಕೆಯ ಬಗ್ಗೆ ಅನುಮಾನಗಳು ವ್ಯಕ್ತವಾಗಿವೆ. ಮಠದಿಂದ ಹೊರನಡೆದು ಅವರ ಇಷ್ಟದಂತೆ ಯೋಗ ಮಾಡಿಕೊಂಡಿರಲಿ' ಎಂದರು.

## ದೊರೆ ತಪ್ಪಿಗೆ ದಂಡ ಇಲ್ಲ ಕೆ.ಎನ್. ರಾಜಣ್ಣ ವ್ಯಂಗ್ಯ

• ಉದಯವಾಹಿನಿ, ಮಧುಗಿರಿ

ಮಧುಗಿರಿಯ ಕಾಂಗ್ರೆಸ್ ಶಾಸಕ ಕೆ.ಎನ್. ರಾಜಣ್ಣ ಮತ್ತೆ ಪಕ್ಷದ ಹೈಕಮಾಂಡ್ ನಿರ್ಧಾರದ ವಿರುದ್ಧ ಧ್ವನಿ ಎತ್ತಿದ್ದಾರೆ. ದಾವಣಗೆರೆ ಚುನಾವಣೆ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರ ವಿರುದ್ಧ ಹೈಕಮಾಂಡ್ ಕ್ರಮ ತೆಗೆದುಕೊಳ್ಳುತ್ತಿರುವ ಬಗ್ಗೆ ಅವರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೆಸರು ಹೇಳದೆ ವಾಗ್ದಾಳಿ ನಡೆಸಿದರು. ಕಾಂಗ್ರೆಸ್‌ಪಕ್ಷದಲ್ಲಿಶಿಸ್ತುಪಾಲನೆಹಾಗೂಮುಸ್ಲಿಂ ಸಮುದಾಯದ ನಾಯಕರ ವಿರುದ್ಧ ತೆಗೆದುಕೊಳ್ಳುತ್ತಿರುವ ಕ್ರಮದ ಬಗ್ಗೆ ಮಾತನಾಡಿದ ಅವರು, 'ರಾಹುಲ್ ಗಾಂಧಿ ಯಾರೆಂದು ಗೊತ್ತಿಲ್ಲ ಎಂದು ಹೇಳಿದ್ದ ಸದ್ಗುರು ಜಗ್ಗಿ ವಾಸುದೇವ್ ಜತೆ ವೇದಿಕೆ ಹಂಚಿಕೊಂಡವರು ಯಾರು' ಎಂದು ಖಾರವಾಗಿ ಪ್ರಶ್ನಿಸಿದರು.

'ಕಾಂಗ್ರೆಸ್ ಪಕ್ಷದ ನಾಯಕ ಗೊತ್ತಿಲ್ಲ ಎನ್ನುವ ಜಗ್ಗಿ ವಾಸುದೇವ್ ಜತೆ ವೇದಿಕೆ ಹಂಚಿಕೊಂಡಾಗ ಪಕ್ಷದ ಶಿಸ್ತು ಮೀರುವುದಿಲ್ಲವೆ' ಎಂದು ರಾಜಣ್ಣ ಪ್ರಶ್ನಿಸಿದರು. 'ದೊರೆ ಮಾಡಿದ್ದಕ್ಕೆ ದಂಡ ಇಲ್ಲ' ಎಂಬ ಗಾದೆ ಮಾತನ್ನೂ ಅವರು ಹೇಳಿದರು.

**ದೇಶದ ರಾಜಕೀಯ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಏ.16 ಮೂರು ದಿನಗಳ ಕಾಲ ಸಂಸತ್ತಿನ ವಿಶೇಷ ಅಧಿವೇಶನ ನಡೆಯುತ್ತಿದೆ. ಕೇಂದ್ರ ಸರ್ಕಾರವು ಸಂವಿಧಾನ (131ನೇ ತಿದ್ದುಪಡಿ) ಮಸೂದೆ, ಕೇಂದ್ರ ಪ್ರದೇಶಗಳ ಕಾನೂನುಗಳು (ತಿದ್ದುಪಡಿ) ಮಸೂದೆ ಮತ್ತು ಸೀಮಾ ನಿರ್ಣಯ ಮಸೂದೆಯೊಂದಿಗೆ ಮಹಿಳಾ ಮೀಸಲಾತಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದೆ. ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಬಹುನಿರೀಕ್ಷಿತ ಮಹಿಳಾ ಮೀಸಲಾತಿ ಮಸೂದೆಯ ಕುರಿತು ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಮಹಿಳಾ ಸಬಲೀಕರಣದ ಒಂದು "ಐತಿಹಾಸಿಕ ಹೆಜ್ಜೆ" ಎಂದು ಬಣ್ಣಿಸಿದರು.**

ಮಹಿಳಾ ಮೀಸಲಾತಿ ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ಮಂಡನೆ



3 ದಿನಗಳ ವಿಶೇಷ ಅಧಿವೇಶನ

# ಮಹಿಳಾ ಮೀಸಲು ಹೊಸ ಮೈಲುಗಲ್ಲು



• ಉದಯವಾಹಿನಿ, ಬೆಂಗಳೂರು

ಮಹಿಳಾ ಮೀಸಲಾತಿಯ ಅಗತ್ಯತೆಯನ್ನು ಒತ್ತಿ ಹೇಳಿದ ಪ್ರಧಾನಿ, ಈ ಮಹತ್ವದ ಕಾಯ್ದೆಯು 25 ರಿಂದ 30 ವರ್ಷಗಳ ಹಿಂದೆಯೇ ಜಾರಿಗೆ ಬರಬೇಕಿತ್ತು. ಆದರೆ, ಈಗ ನಮಗೆ ಆ ಅವಕಾಶ ಸಿಕ್ಕಿರುವುದು ನಮ್ಮ ಸೌಭಾಗ್ಯ. ದೇಶದ ಅಭಿವೃದ್ಧಿಯ ಪಥದಲ್ಲಿ ಮಹಿಳೆಯರಿಗೆ ನಿರ್ಧಾರ ತೆಗೆದುಕೊಳ್ಳುವ ಹಕ್ಕು ನೀಡುವುದು ಇಂದಿನ ಅಗತ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

'ಈ ಮಸೂದೆಯನ್ನು ಯಾರೂ ವಿರೋಧಿಸಿಲ್ಲ' ಇದಕ್ಕೆ ವ್ಯಕ್ತವಾಗುತ್ತಿರುವ ರಾಜಕೀಯ ವಿರೋಧಗಳ ಬಗ್ಗೆ ಪ್ರಸ್ತಾಪಿಸಿದ ಮೋದಿ, ನಾನು ಬಹುತೇಕ ಎಲ್ಲಾ ಪಕ್ಷಗಳ ನಾಯಕರನ್ನು ಭೇಟಿ ಮಾಡಿದ್ದೇನೆ. ಯಾರೂ ಕೂಡ ತಾತ್ವಿಕವಾಗಿ ಈ ಮಸೂದೆಯನ್ನು ವಿರೋಧಿಸಿಲ್ಲ. ಆದರೆ, ಕೆಲವು ರಾಜಕೀಯ ಹಿತಾಸಕ್ತಿಗಳಿಂದಾಗಿ ಅಪಸ್ವರ ಕೇಳಿಬರುತ್ತಿದೆ.



ನಾವೆಲ್ಲರೂ ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟಿನಿಂದ ಇದನ್ನು ಜಾರಿಗೊಳಿಸಿದರೆ, ದೇಶಕ್ಕೆ ಸಲ್ಲಿಸಿದ ಅತ್ಯುತ್ತಮ ಸೇವೆಗಾಗಿ ಇತಿಹಾಸ ನಮ್ಮನ್ನು ಸದಾ ನೆನಪಿಸಿಕೊಳ್ಳುತ್ತದೆ, ಎಂದು ಮನವಿ ಮಾಡಿದರು. 'ರಾಜಕೀಯ ಬಣ್ಣ ಬಳಿಯುವುದು ಬೇಡ' ಮಹಿಳಾ ಮೀಸಲಾತಿ ಮಸೂದೆಯು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸೀಮಿತವಾದ ವಿಜಯವಲ್ಲ. ಇದು ಇಡೀ ರಾಷ್ಟ್ರಕ್ಕೆ ಸಿಗುವ ಸಾಮೂಹಿಕ ಯಶಸ್ಸು. ಈ ಮಸೂದೆಗೆ ರಾಜಕೀಯ ಬಣ್ಣ ಬಳಿಯುವುದು ಬೇಡ. ಮಹಿಳೆಯರ ಶಕ್ತಿಯನ್ನು ಗುರುತಿಸಿ, ಅವರಿಗೆ ನ್ಯಾಯ ಒದಗಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ, ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆಯ ಸದನದಲ್ಲಿ ತಿಳಿಸಿದರು.

ನಾವು ಭಾರತೀಯರು ರಾಷ್ಟ್ರಕ್ಕೆ ಹೊಸ ದಿಕ್ಕು ನೀಡಲು ಒಗ್ಗೂಡುತ್ತಿದ್ದೇವೆ. ನಮ್ಮ ಆಡಳಿತ ವ್ಯವಸ್ಥೆಯನ್ನು ಬಲಪಡಿಸಲು ನಾವು ಅರ್ಥಪೂರ್ಣ ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಆಡಳಿತ ವ್ಯವಸ್ಥೆಯನ್ನು ಬಲಪಡಿಸಲು ನಾವು ಅರ್ಥಪೂರ್ಣ ಪ್ರಯತ್ನ ಮಾಡುತ್ತಿದ್ದೇವೆ. ಭಾರತ ಪ್ರಜಾಪ್ರಭುತ್ವದ ತಾಯಿ. ಈ ಅಭಿವೃದ್ಧಿಯ ಪ್ರಯಾಣದಲ್ಲಿ ಹೊಸ ಆಯಾಮವನ್ನು ಸೇರಿಸಲು ನಮಗೆ ಪವಿತ್ರವಾದ ಅವಕಾಶ ನೀಡಲಾಗಿದೆ. ರಾಷ್ಟ್ರ ನಿರ್ಮಾಣದ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ದೇಶದ ಅರ್ಧದಷ್ಟು ಜನಸಂಖ್ಯೆಯಾದ ಮಹಿಳೆಯರನ್ನು ಸೇರಿಸಿಕೊಳ್ಳುವ ಅವಕಾಶ ನಮಗೆ ಸಿಕ್ಕಿರುವುದು ನಮ್ಮ ಅದೃಷ್ಟ, ಎಂದು ಪ್ರಧಾನಿ ಮೋದಿ ಅವರು ಹೇಳಿದ್ದಾರೆ.


**ಚಾಣಕ್ಯ ನಿಮ್ಮ ಕುತಂತ್ರ ನೋಡಿ ಶಾಕ್ ಆಗುತ್ತಿದ್ದ:** ತಮ್ಮ ಮಾತಿಗೆ ಅಮಿತ್ ಶಾ ಹಾಗೂ ಇತರ ಬಿಜೆಪಿ ಸಂಸದರು ನಗುತ್ತಿರುವುದನ್ನು ಗಮನಿಸಿದ ಪ್ರಿಯಾಂಕಾ ಗಾಂಧಿ, ನೀವೆಲ್ಲರೂ ಸಂಪೂರ್ಣವಾಗಿ ಪ್ಲಾನ್ ಮಾಡಿಕೊಂಡೇ ಬಂದಿದ್ದೀರಿ. ಇಂದು ಒಂದು ವೇಳೆ ಚಾಣಕ್ಯ ಬದುಕಿದ್ದರೆ, ಆತನೂ ಕೂಡ ನಿಮ್ಮ ಕುತಂತ್ರವನ್ನು ನೋಡಿ ಆಘಾತಕ್ಕೊಳಗಾಗುತ್ತಿದ್ದ (ಶಾಕ್ ಆಗುತ್ತಿದ್ದ) ಎಂದು ಚಾಟಿ ಬೀಸಿದರು. ಪ್ರಿಯಾಂಕಾ ಅವರ ಈ ಮಾತು ಕೇಳಿ ಅಮಿತ್ ಶಾ, ಕಿರಣ್ ರಿಜಿಜು ಸೇರಿದಂತೆ ಹಲವು ಬಿಜೆಪಿ ಸಂಸದರು ಜೋರಾಗಿ ನಕ್ಕರು.

**ಮಹಿಳೆಯರಿಗೆ ಸುಳ್ಳು ಬೇಗ ಗೊತ್ತಾಗುತ್ತದೆ!:** ಪ್ರಧಾನಿ ಮೋದಿಯವರ ಭಾಷಣವನ್ನು ಉಲ್ಲೇಖಿಸಿದ ಅವರು, ಮಹಿಳೆಯರಿಗೆ ಯಾರು ಸುಳ್ಳು ಹೇಳುತ್ತಿದ್ದಾರೆ ಎಂಬುದನ್ನು ಗ್ರಹಿಸುವ ಶಕ್ತಿ ಇರುತ್ತದೆ. ಹಾಗಾಗಿ ಬಿಜೆಪಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು. ಪ್ರಧಾನಿಯವರು ತಾವೇ ಮಹಿಳಾ ಮೀಸಲಾತಿಯ ಅತಿ ದೊಡ್ಡ ಬೆಂಬಲಿಗರು ಹಾಗೂ ಪ್ರತಿಪಾದಕರು ಎಂಬಂತೆ ಮಾತನಾಡಿದರು.

2023ರಲ್ಲಿ ರಾಹುಲ್ ಗಾಂಧಿ ಪತ್ರ ಬರೆದ ಬಳಿಕ ಈ ಮಸೂದೆ ಅಂಗೀಕಾರವಾದಾಗ, ಕಾಂಗ್ರೆಸ್ ತನ್ನ ಸಿದ್ಧಾಂತಕ್ಕೆ ಅನುಗುಣವಾಗಿ ಅದನ್ನು ಸಂಪೂರ್ಣವಾಗಿ ಬೆಂಬಲಿಸಿತ್ತು ಎಂದು ಸ್ಪಷ್ಟಪಡಿಸಿದರು.

### ನಿಮ್ಮ ಕುತಂತ್ರ ನೋಡಿ ಚಾಣಕ್ಯ ಶಾಕ್ ಆಗ್ತಿದ್ದ!

### ಅಮಿತ್ ಶಾಗೆ ಪ್ರಿಯಾಂಕಾ ಗಾಂಧಿ ಟಾಂಗ್



**ಈಗಿರುವ 543 ಸ್ಥಾನಗಳಲ್ಲೇ ಮೀಸಲಾತಿ ಏಕಿಲ್ಲ?**

ಪ್ರಸ್ತುತ ಲೋಕಸಭೆಯಲ್ಲಿರುವ 543 ಸ್ಥಾನಗಳಲ್ಲೇ ಶೇಕಡಾ 33ರಷ್ಟು ಮಹಿಳಾ ಮೀಸಲಾತಿಯನ್ನು ಏಕೆ ನೀಡಬಾರದು ಎಂದು ಪ್ರಶ್ನಿಸಿದ ವಯನಾಡು ಸಂಸದೆ, ಒಂದು ವೇಳೆ ಈ ಸಂವಿಧಾನ ತಿದ್ದುಪಡಿ ಮಸೂದೆ ಅಂಗೀಕಾರವಾದರೆ, ಈ ದೇಶದಲ್ಲಿ ಪ್ರಜಾಪ್ರಭುತ್ವವೇ ನಾಶವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

**ಮಹಿಳಾ ಹಕ್ಕುಗಳ ಇತಿಹಾಸ ಬಿಚ್ಚಿಟ್ಟ ಪ್ರಿಯಾಂಕಾ**

ಮಹಿಳಾ ಮೀಸಲಾತಿಯನ್ನು ಹಿಂದೆ ಯಾರು ತಡೆದರು, 30 ವರ್ಷಗಳ ಕಾಲ ಇದು ಹೇಗೆ ನೆನೆಗುದಿಗೆ ಬಿತ್ತು ಎಂಬುದರ ಬಗ್ಗೆ ಪ್ರಧಾನಿ ಬಹಳಷ್ಟು ಮಾತನಾಡಿದ್ದಾರೆ. ಆದರೆ ಇದರ ಐತಿಹಾಸಿಕ ಹಿನ್ನೆಲೆ ಆಡಳಿತ ಪಕ್ಷಕ್ಕೆ ಇಷ್ಟವಾಗದಿರಬಹುದು. 1928ರಲ್ಲಿ ಮೋತಿಲಾಲ್ ನೆಹರು ಅವರು ಸಿದ್ಧಪಡಿಸಿದ ವರದಿಯಲ್ಲಿ 19 ಮೂಲಭೂತ ಹಕ್ಕುಗಳನ್ನು ಪಟ್ಟಿ ಮಾಡಲಾಗಿತ್ತು. 1931ರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕರಾಚಿ ಅಧಿವೇಶನದಲ್ಲಿ ಮಹಿಳೆಯರ ಸಮಾನ ಹಕ್ಕುಗಳ ಕುರಿತು ನಿರ್ಣಯ ಅಂಗೀಕರಿಸಲಾಯಿತು. ಅಮೆರಿಕದಂತಹ ದೇಶಗಳು ಈ ಹಕ್ಕಿಗಾಗಿ 150 ವರ್ಷ ಕಾಯಬೇಕಾಯಿತು. ಆ ನಂತರ, ಪಂಚಾಯತ್ ಮತ್ತು ಮುನ್ಸಿಪಾಲಿಟಿ ಶೇ.33ರಷ್ಟು ಮೀಸಲಾತಿ ಜಾರಿಗೆ ತಂದಿದ್ದು ನನ್ನ ತಂದೆ, ಅಂದಿನ ಪ್ರಧಾನಿ ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಎಂಬುದು ಮರೆಯುವಂತಿಲ್ಲ ಎಂದು ನೆನಪಿಸಿದರು.

1 ಮಹಿಳಾ ಮೀಸಲಾತಿ ಮಸೂದೆ ಕುರಿತ ಚರ್ಚೆಯ ವೇಳೆ ಕಾಂಗ್ರೆಸ್ ವಯನಾಡು ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಮಾತು.

2 ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ 'ಚಾಣಕ್ಯ'ನ ಹೆಸರು ಉಲ್ಲೇಖಿಸಿ ಕಾಲೆಳೆದ ಪ್ರಿಯಾಂಕಾ.

3 ಪ್ರಿಯಾಂಕಾ ಅವರ ಈ ಮಾತಿಗೆ ಅಮಿತ್ ಶಾ ಸೇರಿದಂತೆ ಹಲವು ಬಿಜೆಪಿ ನಾಯಕರು ನಸುನಕ್ಕರು.

**ಮಸೂದೆಯ ಹಿನ್ನೆಲೆ ಮತ್ತು ವಿರೋಧವೇಕೆ?**

ಸಂವಿಧಾನ (131ನೇ ತಿದ್ದುಪಡಿ) ಮಸೂದೆಯ ಅಡಿಯಲ್ಲಿ, ಲೋಕಸಭೆಯ ಸದಸ್ಯ ಬಲವನ್ನು 543 ರಿಂದ 850 ಸ್ಥಾನಗಳಿಗೆ (ರಾಜ್ಯಗಳಿಗೆ 815 ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 35) ಹೆಚ್ಚಿಸಲು ಕೇಂದ್ರ ಸರ್ಕಾರ ಪ್ರಸ್ತಾಪಿಸಿದೆ. ಇದು ಕ್ಷೇತ್ರ ಮರುವಿಂಗಡಣೆ ಮತ್ತು ಮಹಿಳಾ ಮೀಸಲಾತಿ ಜಾರಿಗೆ ದಾರಿ ಮಾಡಿಕೊಡಲಿದೆ. ಆದರೆ, ಈ ಕ್ಷೇತ್ರ ಮರುವಿಂಗಡಣೆಯಿಂದ ಹಿಂದಿ ಭಾಷಿಕ ರಾಜ್ಯಗಳಿಗೆ (ಬಿಜೆಪಿ ಭದ್ರಕೋಟೆ) ಹೆಚ್ಚಿನ ಲಾಭವಾಗಲಿದ್ದು, ಜನಸಂಖ್ಯೆ ನಿಯಂತ್ರಿಸಿರುವ ದಕ್ಷಿಣ ಭಾರತದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯ ಕಡಿಮೆಯಾಗಲಿದೆ ಎಂದು ಪ್ರತಿಪಕ್ಷಗಳ ಆಡಳಿತವಿರುವ ದಕ್ಷಿಣದ ರಾಜ್ಯಗಳು ಇದನ್ನು ತೀವ್ರವಾಗಿ ವಿರೋಧಿಸುತ್ತಿವೆ.

## ಕರ್ನಾಟಕದ 5 ಜಿಲ್ಲೆ ಹೊರತುಪಡಿಸಿ ಎಲ್ಲಾ ಕಡೆ ಮುಂಗಾರು ಕೊರತೆ!

### ■ ಕುಡಿಯುವ ನೀರಿಗಾಗಿ 419.50 ಕೋಟಿ ರೂ. ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಲಭ್ಯ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಐದು ಜಿಲ್ಲೆಗಳನ್ನು ಹೊರತುಪಡಿಸಿ ಬೇರೆ ಎಲ್ಲಾ ಜಿಲ್ಲೆಗಳಲ್ಲಿ ಮುಂಗಾರು ಕೊರತೆ ನಿರೀಕ್ಷಿಸಲಾಗಿದ್ದು, ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.


ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧ ಸಭಾಂಗಣದಲ್ಲಿ ನಡೆದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿನ ಕುಡಿಯುವ ನೀರು ಪೂರೈಕೆ ಕುರಿತಾಗಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ಜರುಗಿತು. ಈ ವರ್ಷ ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆಗಸ್ಟ್ ತಿಂಗಳಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದ್ದು, ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಕಡಿಮೆ ನಿರೀಕ್ಷಿಸಲಾಗಿದೆ.

**ಕುಡಿಯುವ ನೀರಿಗೆ ತೊಂದರೆಯಾದರೆ ಜಿಲ್ಲಾಧಿಕಾರಿಗಳೇ ಹೊಣೆ**

ಕುಡಿಯುವ ನೀರಿಗೆ ತೊಂದರೆಯಾದರೆ ಆಯಾ ಜಿಲ್ಲಾಧಿಕಾರಿಗಳೇ ಇದಕ್ಕೆ ಹೊಣೆಯಾಗುತ್ತಾರೆ. ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ಅವರು ಸೂಚಿಸಿದರು.

**ವಾಡಿಕೆಗಿಂತ ಹೆಚ್ಚು ಬಿಸಿಗಾಳಿ:** ಈ ಬಾರಿ ಏಪ್ರಿಲ್-ಜೂನ್ ಅವಧಿಯಲ್ಲಿ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ ದಿನಗಳು ಕಂಡು ಬರುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ಯಾವ ರೀತಿಯ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು. ಹವಾಮಾನ ಇಲಾಖೆಯ ಮುನ್ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳು ಸೂಚನೆಗಳನ್ನು ನೀಡಬೇಕು ಎಂದರು.

**ಕುಡಿಯುವ ನೀರಿಗೆ ಅನುದಾನದ ಕೊರತೆಯಿಲ್ಲ:** ಸಾರ್ವಜನಿಕರಿಗೆ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕುಡಿಯುವ ನೀರು ಪೂರೈಕೆಯನ್ನು ಖಾತ್ರಿಪಡಿಸಲು ಯಾವುದೇ ಅನುದಾನದ ಕೊರತೆಯಿಲ್ಲ. ಜಿಲ್ಲಾಧಿಕಾರಿಗಳ ವರದಿ ಆಧಾರದಲ್ಲಿ ಅಗತ್ಯ ಅನುದಾನವನ್ನು ಒದಗಿಸಲು ಹಣಕಾಸು ಇಲಾಖೆಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದರು.



**114 ತಾಲ್ಲೂಕುಗಳ 598 ಗ್ರಾಮ ಪಂಚಾಯಯತ್ ಕುಡಿಯುವ ನೀರಿನ ಸಮಸ್ಯೆ**

ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ 213 ತಾಲ್ಲೂಕುಗಳನ್ನು ಹಾಗೂ 2410 ಗ್ರಾಮ ಪಂಚಾಯತ್‌ಗಳನ್ನು ಗುರುತಿಸಲಾಗಿದೆ. ಪ್ರಸ್ತುತ 114 ತಾಲ್ಲೂಕುಗಳ 598 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಟ್ಯಾಂಕರ್‌ಗಳ ಮೂಲಕ 137 ಗ್ರಾಮಗಳಿಗೆ ಒಟ್ಟು 129 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 585 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಇದರ ಮೂಲಕ 515ಗ್ರಾಮಗಳಿಗೆ ನೀರು ಪೂರೈಕೆ ಮಾಡಲಾಗುತ್ತಿರುವ ಬಗ್ಗೆ ಮುಖ್ಯಮಂತ್ರಿಗಳು ಮಾಹಿತಿ ಪಡೆದರು.

**ನೀರಿನ ಸಮಸ್ಯೆ ಎದುರಿಸುವ ಗ್ರಾಮಗಳ ಗುರುತಿಸುವಿಕೆ:** ಕಲಬುರಗಿ ಜಿಲ್ಲೆಯ 147 ಗ್ರಾಮ ಪಂಚಾಯತ್, ಬಾಗಲಕೋಟೆ 114, ಬೆಳಗಾವಿಯ 127, ಚಿಕ್ಕಮಗಳೂರಿನ 115, ಹಾವೇರಿಯ 138, ಮಂಡ್ಯ 130, ತುಮಕೂರಿನ 141 ಹಾಗೂ ಉತ್ತರಕನ್ನಡ ಜಿಲ್ಲೆಯ 125 ಗ್ರಾಮ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂದು ಗುರುತಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

**22 ಕೊಳವೆ ಬಾವಿಗಳು ಬಾಡಿಗೆಗೆ:** ಪ್ರಸ್ತುತ 27 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, 95 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಗುರುತಿಸಲಾಗಿದೆ. ಒಟ್ಟು 145 ವಾರ್ಡ್‌ಗಳಿಗೆ 57 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದ್ದು, ಬಾಡಿಗೆಗೆ 22 ಕೊಳವೆ ಬಾವಿಗಳನ್ನು ಪಡೆಯಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

**ಅಗತ್ಯ ಸಂದರ್ಭದಲ್ಲಿ ಕೊಳವೆ ಬಾವಿ ಕೊರೆಯಬಹುದು:** ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಟ್ಯಾಂಕರ್ ನೀರು ಪೂರೈಕೆ ಮಾಡಬೇಕು. ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯುವುದಕ್ಕೆ ಆದ್ಯತೆ ನೀಡಬೇಕು. ಅಗತ್ಯ ಸಂದರ್ಭದಲ್ಲಿ ಕೊಳವೆ ಬಾವಿ ಕೊರೆಯಬಹುದಾಗಿದೆ ಎಂದು ಮುಖ್ಯಮಂತ್ರಿಗಳು ಗುರುತಿಸಿದರು.

**ಕುಡಿಯುವ ನೀರಿಗೆ ಸಾಕಷ್ಟು ನೀರು ಜಲಾಶಯಗಳಲ್ಲಿ ಲಭ್ಯ**

ರಾಜ್ಯದ ಪ್ರಮುಖ 14 ಜಲಾಶಯಗಳಲ್ಲಿ ಪ್ರಸ್ತುತ 321.93 ಟಿ.ಎಂ.ಸಿ ನೀರು ಲಭ್ಯವಿದ್ದು, ಇದು ಒಟ್ಟು ಸಾಮರ್ಥ್ಯದ ಶೇ.36ರಷ್ಟಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 330.35 ಟಿ.ಎಂ.ಸಿ ನೀರು ಲಭ್ಯವಿತ್ತು. ಪ್ರಸುತ ಕುಡಿಯುವ ನೀರಿಗೆ ಸಾಕಷ್ಟು ನೀರು ಜಲಾಶಯಗಳಲ್ಲಿ ಲಭ್ಯವಿದೆ.

**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 91.06 ₹/L ಬಂಗಾರ: ₹15,557/Gram24ct ₹14,260/Gram22ct ಬೆಳ್ಳಿ: ₹270.00/Gram

# ಗುಂಡ್ಲುಪೇಟೆಯಲ್ಲಿ ಆಡಳಿತ ಪಕ್ಷದ ವಿರುದ್ಧ ಮಂಕಾದ ಬಿಜೆಪಿ

## ಕ್ಷೇತ್ರದಲ್ಲಿ ಆಡಳಿತ ಪಕ್ಷದ ವಿರುದ್ಧ ದುರ್ಬಲವಾಗಿರುವ ಬಿಜೆಪಿಗೀಗ ಅಸ್ತಿತ್ವ ಉಳಿವಿಗೆ ಕಾರ್ಯಕರ್ತರೆ ಅನಿವಾರ್ಯ

• ಉದಯವಾಹಿನಿ, ಗುಂಡ್ಲುಪೇಟೆ

ಕ್ಷೇತ್ರದಲ್ಲಿ ಆಡಳಿತ ಪಕ್ಷದ ವಿರುದ್ಧ ದುರ್ಬಲವಾಗಿರುವ ಬಿಜೆಪಿಗೀಗ ಅಸ್ತಿತ್ವ ಉಳಿವಿಗೆ ಕಾರ್ಯಕರ್ತರೆ ಅನಿವಾರ್ಯವಾಗಿದ್ದಾರೆ ಎಂಬುದು ರಾಜಕೀಯ ವಿಶ್ಲೇಷಕರ ಮನದಾಳದ ಮಾತಾಗಿದೆ. ಪ್ರಸ್ತುತವಾಗಿ ಕೈ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ನಾಯಕತ್ವದಲ್ಲಿ ಮುಂದೆ ಸಾಗುತ್ತಿರುವ ಪಕ್ಷಕ್ಕೂ ಸಹ ಕಾರ್ಯಕರ್ತರೆ ಅದಮ್ಯ ಶಕ್ತಿ, ಚೈತನ್ಯವಾಗಿದ್ದಾರೆ ಇದರ ನಡುವೆ ಪಕ್ಷದ ಅಸ್ತಿತ್ವ ಉಳಿವಿಗಾಗಿ ಹೋರಾಡುತ್ತಿರುವ ಬಿಜೆಪಿಯ ಕೆಲ ಕಾರ್ಯಕರ್ತರಿಗೆ ಶಕ್ತಿ ತುಂಬುವವರ ಇಲ್ಲದಂತಾಗಿದ್ದು ಗುಂಡ್ಲುಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ವಿಪಕ್ಷವೇ ಇಲ್ಲ ಎಂಬ ವಾತಾವರಣ ಸೃಷ್ಠಿಯಾಗುತ್ತಿದೆ. ಕ್ಷೇತ್ರದಲ್ಲಿನ ವರ್ತಮಾನಗಳನ್ನ ಗಮನಿಸುತ್ತಾ ಹೋದಲ್ಲಿ ಶಾಸಕ ಗಣೇಶ್ ಪ್ರಸಾದ್ ನಾಯಕತ್ವ ಪ್ರಾಬಲ್ಯ ಸಾಧಿಸಿದೆ ಎಂಬುದು ಸಾಭೀತಾಗುತ್ತಲಿದೆ ಎಂಬುದಕ್ಕೆ ಕ್ಷೀಣಿಸಿದ ವಿರೋಧ ಪಕ್ಷದ ನಾಯಕರ ದನಿ ಎಂಬುದೇ ಬಹುಮುಖ್ಯ ಕಾರಣವಾಗಿದೆ.ಶಾಸಕರಾಗಿ ಎಚ್.ಎಂ.ಗಣೇಶ್ ಪ್ರಸಾದ್ಆಯ್ಕೆಯಾದ ನಂತರದ ದಿನಗಳಲ್ಲಿ ಆಡಳಿತ ಪಕ್ಷದ ಒಂದಷ್ಟು ವಿಚಾರ, ನಿರ್ಧಾರಗಳನ್ನ ಪ್ರಶ್ನಿಸಿ ವಿರೋಧಿಸುತ್ತಾ ತಾಲ್ಲೂಕಿನಲ್ಲಿ ವಿಪಕ್ಷ ಬಿಜೆಪಿ ಸಕ್ರಿಯವಾಗಿದೆ ಎಂಬುದನ್ನ ಚಾಲ್ತಿಯಲ್ಲಿಡಲು ಹರಸಾಹಸ ಪಡುತ್ತಿರುವವರು ಬೆರಳೆಣಿಕೆಯಷ್ಟು ಕಾರ್ಯಕರ್ತರು ಮಾತ್ರ. ಬಿಜೆಪಿ ಅಧಿಕಾರದಲ್ಲಿದ್ದ ಸಂಧರ್ಭದಲ್ಲಿ ನಾಯಕತ್ವಕ್ಕೆ ಪೈಪೋಟಿ ನೀಡುತ್ತಿದ್ದವರು ಅದೃಶ್ಯರಾಗಿ ಹೋಗಿದ್ದಾರೆ. ಕ್ಷೇತ್ರದಲ್ಲಿ ಬಿಜೆಪಿ ಅಸ್ತಿತ್ವ ಉಳಿವಿಗೆ ಪ್ರಯಾಸಪಡುತ್ತಿರುವ ನಿಷ್ಠಾವಂತ ಕಾರ್ಯಕರ್ತರಿಗೆ ಬೆನ್ನೆಲುಬಾಗಿ ನಿಲ್ಲುವ ನಾಯಕತ್ವದ ಕೊರತೆ ಕಾಡತೊಡಗಿದೆ ಎಂಬುದು ಪಕ್ಷದ ಆಂತರಿಕ ವಲಯದಿಂದ ಮೇಲಿಂದ ಮೇಲೆ ಕೇಳಿಬರತೊಡಗಿದೆ, ಆಡಳಿತ ಪಕ್ಷದ ಚಾಣಾಕ್ಷ ನಡೆ ಮುಂದೆ ಮಂಕಾಗಿರುವ ಮೇಲ್ಪಂಕ್ತಿ ನಾಯಕರ ನಡೆಗೆ ಸ್ವಪಕ್ಷದ ಕಾರ್ಯಕರ್ತರೆ ತಿರುಗಿ ಬಿದ್ದಿರುವುದು ಇತ್ತೀಚಿಗೆ ವರದಿಯಾಗುತ್ತಲೆ ಇದೆ. ಪ್ರಸ್ತುತವಾಗಿ ಆಡಳಿತ ಪಕ್ಷದ ವಿರುದ್ಧ ಆರೋಪಿಸುವ ಬಿಜೆಪಿ ಕೆಲ ಕಾರ್ಯಕರ್ತರು ಮಾತ್ರ ಸಾಮಾಜಿಕ ಜಾಲತಾಣದಲ್ಲಿ ಕಟುವಾಗಿ ವಿರೋಧ ವ್ಯಕ್ತಪಡಿಸುತ್ತಿದ್ದಾರೆ, ಆದರೆ ಕಾಂಗ್ರೆಸ್ ಕಾರ್ಯಕರ್ತರ ಕೌಂಟರ್ ಅಟ್ಯಾಕ್‌ಗೆ ಎದೆಕೊಟ್ಟು ನಿಲ್ಲುತ್ತಿರುವವರ ಆತ್ಮಸ್ಥೈರ್ಯ ಕುಗ್ಗುವಂತಾಗುತ್ತಿರುವುದು ಸುಳ್ಳಲ್ಲ. ಪಟ್ಟಣದಲ್ಲಿ ಸಂಭವಿಸಿದ ಭೀಕರ ಅಪಘಾತ, ಟಿಪ್ಪರ್ ಹಾವಳಿ ಕೇರಳಿಗರ ಪಾರುಪತ್ಯದ ಕುರಿತಾಗಿ ದನಿ ಎತ್ತಿರುವುದು ಕೆಲ ಕಾರ್ಯಕರ್ತರಷ್ಟೇ ಪಕ್ಷದಲ್ಲಿ ಬಿಗಿ ಸ್ಥಾನಮಾನ ಪಡೆದವರು ಉಸಿರು ಎತ್ತದಿರುವುದು ಸಹ ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಗಿದೆ. ಚಿಕ್ಕತುಪ್ಪೂರು ಗೇಟ್ ಸಮೀಪ ಶಾಲಾ ಮಕ್ಕಳು ತೆರಳುತ್ತಿದ್ದ ವಾಹನಕ್ಕೆ ಟಿಪ್ಪರ್ ಡಿಕ್ಕಿ ಹೊಡೆದು ಜರ್ಜರಿತಗೊಳಿಸಿದ ಸಂದರ್ಭದಿಂದಿಡಿದು ಒಂದೇ ಕುಟುಂಬದ ನಾಲ್ವರು ಕೇರಳ ಮೂಲದವರು ಅಸುನೀಗಿದ್ದರತನಕ ಜೋರುದನಿಯಾಗಿ ನಿಂತಿದ್ದು ಕೆಲವೇ ಮಂದಿ ಬಿಜೆಪಿ ಕಾರ್ಯಕರ್ತರಷ್ಟೇ ಈ ಕಾರಣದಿಂದಲೇ ಅಧಿಕಾರವಿರುವಾಗ ಅಪೇಕ್ಷೆಗಳ ಸಾಕಾರಕ್ಕೆ ದುಂಬಾಲು ಬಿದ್ದಿದ್ದು ಬಿಟ್ಟರೆ ಪಕ್ಷ ಸಂಘಟನೆಗೆ ಶೂನ್ಯ ಕೊಡುಗೆ ಎಂಬುದು ಕಾರ್ಯಕರ್ತನ ನೋವಿನ ನುಡಿಯಾಗಿದೆ.

ಅಸ್ತಿತ್ವ ಉಳಿವಿಗೆ ಕಾರ್ಯಕರ್ತರ ಫೈಟ್

**ಸಂಘಟನಾ ಕೊರತೆ**
**ಕ್ಷೇತ್ರದಲ್ಲೀಗ ವಿಪಕ್ಷದಲ್ಲಿರುವ ಬಿಜೆಪಿಗೆ ಸಂಘಟನೆ ಕೊರತೆ ಆವರಿಸಿದೆಯೇ ಎಂಬ ಅನುಮಾನ ಮೂಡತೊಡಗಿದೆ, ಆಡಳಿತ ಪಕ್ಷದಲ್ಲಿರುವ ಸಮರ್ಥನ ನಾಯಕತ್ವದ ಶಕ್ತಿಗೆ ಬಿಜೆಪಿಗರ ಟೀಕೆ ಟಿಪ್ಪಣಿಗಳಿಗೆ ಶರವೇಗದಲ್ಲಿ ಸಿಗುವ ಉತ್ತರಗಳೇ ಸಾಕು ಎಂಬಂತಿದೆ.**

**ಸದ್ದುನಿಲ್ಲಿಸಿದ ಗಟ್ಟಿ ಧ್ವನಿಗಳು**
**ಬಿಜೆಪಿಯ ಸಮರ್ಥನೆ ಹಾಗೂ ಆಡಳಿತ ಪಕ್ಷದ ಕೆಲ ನಿರ್ಧಾರಗಳ ವಿರುದ್ಧ ನಾಗೇಂದ್ರ, ಮಂಜು ಶಿವಪುರ, ಮಹೇಂದ್ರ ಅಂಕಹಳ್ಳಿ, ಸುಬ್ಬು ಬಲಚವಾಡಿ, ಸಾಗರ್ ಅಗತಗೌಡನಹಳ್ಳಿ, ಮಹೇಂದ್ರ ಗರಗನಹಳ್ಳಿ ಇನ್ನೊಂದಷ್ಟು ಮಂದಿಯನ್ನ ಹೊರತುಪಡಿಸಿ ಬೇರೆ ಯಾವ ನಾಯಕರು ಸೊಲ್ಲೆತ್ತದೆ ಇರುವುದು ಸ್ಥಳೀಯವಾಗಿ ಬಾರಿ ಹಿನ್ನಡೆಯಾಗಿದೆ.**

**ಸ್ವಪಕ್ಷದ ವಿರುದ್ಧವೇ ತಿರುಗಿಬಿದ್ದ ಕಾರ್ಯಕರ್ತ :** ಮಲ್ಲಯ್ಯನಪುರ ಗೇಟ್ ಸಮೀಪ ಸಂಭವಿಸಿದ ಭೀಕರ ಅಪಘಾತದಲ್ಲಿ ಟಿಪ್ಪರ್ ಹೊಡೆತಕ್ಕೆ ಸಿಲುಕಿದ ಕೇರಳ ಮೂಲದ ಒಂದೇ ಕುಟುಂಬದ ನಾಲ್ವರು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಪಕ್ಷದಲ್ಲಿ ಜವಾಬ್ದಾರಿಯುತ ಸ್ಥಾನಮಾನಗಳನ್ನ ಅಲಂಕರಿಸಿರುವವರು ಮೌನಕ್ಕೆ ಶರಣಾಗಿದ್ದಾರೆ, ಅಕ್ರಮಗಳನ್ನ ವಿರೋಧಿಸಲು ಸಹ ನಿಶಕ್ತರಾದವರು ಯಾವ ಪುರುಷಾರ್ಥಕ್ಕೆ ಹುದ್ದೆಯಲ್ಲಿ ಮುಂದುವರಿಯುತ್ತಿದ್ದೀರಾ ಎಂದು ಪ್ರಶ್ನಿಸಿರುವ ಮಡಹಳ್ಳಿ ನಾಗೇಂದ್ರ ನೇರ ಆರೋಪ ಮಾಡಿರುವುದು ಸಂಚಲನ ಮೂಡಿಸಿದೆ. ಅನಧಿಕೃತ ಗಣಿಗಾರಿಕೆ, ಕ್ರಷರ್, ಕೇರಳ ಟಿಪ್ಪರ್‌ಗಳ ಕಾರುಬಾರಿನಲ್ಲಿ ತಮಗೂ ಪಾಲುದಾರಿಕೆ ಇದೆಯೇ ಎಂದು ಕುಟುಕಿದ್ದಾರೆ.


# ಸೂಕ್ತ ಸಮಯದಲ್ಲಿ ಅಚ್ಚರಿಯ ಅಭ್ಯರ್ಥಿ ಆಯ್ಕೆ

• ಉದಯವಾಹಿನಿ, ಕನಕಪುರ

ರಾಜ್ಯ ಸರ್ಕಾರ ಜನರ ವಿಶ್ವಾಸ ಕಳೆದುಕೊಂಡಿದ್ದು ತಿರಸ್ಕಾರಕ್ಕೆ ಗುರಿಯಾಗಿದೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು. ನಗರದಲ್ಲಿ ನಡೆದ ಪದಾಧಿಕಾರಿಗಳ ಆಯ್ಕೆ ನೇಮಕಾತಿ ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಮೂರು ವರ್ಷವಾಗಿದೆ. ಯಾವುದೇ ಅಭಿವೃದ್ಧಿ ಕೆಲಸ ಆಗದೆ ಜನರು ಕಾಂಗ್ರೆಸ್ ಮೇಲಿನ ಭರವಸೆ ಕಳೆದುಕೊಂಡಿದ್ದಾರೆ ಎಂದರು.

ಕನಕಪುರ ಕ್ಷೇತ್ರದಲ್ಲಿ ಜನರು ಈಗಲೂ ಜೆಡಿಎಸ್ ಪಕ್ಷವನ್ನು ಬೆಂಬಲಿಸುತ್ತಿದ್ದಾರೆ.ಅದಕ್ಕೆ ಕಳೆದ ಲೋಕಸಭಾ ಚುನಾವಣೆಯೇ ಸಾಕ್ಷಿ. ಪಕ್ಷವನ್ನು ಮತ್ತೆ ಇಲ್ಲಿ ತಳಮಟ್ಟದಿಂದ ಸಂಘಟಿಸಲಾಗುವುದು.


ಉದಯವಾಹಿನಿ ಚಿತ್ರ

ಅದಕ್ಕಾಗಿ ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡಿ ಕಾರ್ಯಕರ್ತರಿಗೆ ಜವಾಬ್ದಾರಿ ನೀಡಲಾಗುತ್ತಿದೆ. 131 ಮಂದಿಯನ್ನು ಆಯ್ಕೆ ಮಾಡಿ ಇಂದು ಪಕ್ಷದ ಜವಾಬ್ದಾರಿ ನೀಡಲಾಗಿದೆ ಎಂದು ಹೇಳಿದರು. ಸಭೆಯಲ್ಲಿದ್ದವರು ಕ್ಷೇತ್ರದ ಅಭ್ಯರ್ಥಿ ಬಗ್ಗೆ ಕೇಳಿದಾಗ, ಕನಕಪುರ ಕ್ಷೇತ್ರದ ಅಭ್ಯರ್ಥಿಯ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ಪಕ್ಷವು ಸೂಕ್ತ ಸಮಯದಲ್ಲಿ ಅಚ್ಚರಿಯ ವ್ಯಕ್ತಿಯನ್ನು ಆಯ್ಕೆ ಮಾಡಲಿದೆ. ಕ್ಷೇತ್ರದ ಜನತೆ ನಮ್ಮೊಂದಿಗಿದ್ದಾರೆ. ನೀವು ಧೈರ್ಯವಾಗಿ ಕೆಲಸ ಮಾಡಿ, ಯಾವುದಕ್ಕೂ ಭಯ ಪಡುವುದು ಬೇಡ ಎಂದರು.

ಜೆಡಿಎಸ್ ರಾಜ್ಯ ವಕ್ತಾರ ದೇವರಾಜು ಮತ್ತು ಜೆಡಿಎಸ್ ಜಿಲ್ಲಾಧ್ಯಕ್ಷ ಜಯಮುತ್ತು ಮಾತನಾಡಿ, ಮತದಾರರ ಪರಿಷ್ಕರಣೆ ಯಾವ ರೀತಿ ನಡೆಯುತ್ತದೆ. ರಾಜ್ಯದಲ್ಲಿ ಪರಿಷ್ಕರಣೆಯಿಂದ ಚುನಾವಣೆ ಮೇಲೆ ಯಾವ ರೀತಿ ಪ್ರಭಾವ ಬೀರಲಿದೆ. ಪರಿಷ್ಕರಣೆಯಲ್ಲಿ ಪಕ್ಷದ ಕಾರ್ಯಕರ್ತರ ಜವಾಬ್ದಾರಿ ಏನು ಎಂಬುದರ ಬಗ್ಗೆ ಮಾಹಿತಿ ನೀಡಿದರು. 131 ಪದಾಧಿಕಾರಿಗಳಿಗೆ ನೇಮಕಾತಿ ಪತ್ರವನ್ನು ನಿಖಿಲ್ ಕುಮಾರಸ್ವಾಮಿ ವಿತರಿಸಿದರು. ಕನಕಪುರ ಬಿಎಲ್‌ಎ-1 ಆಗಿ ಚಿನ್ನಸ್ವಾಮಿಯನ್ನು ನೇಮಕ ಮಾಡಲಾಯಿತು.


# ಚಂದಗಾಲು, ಮೇಳಾಪುರ ನಡುವೆ ಸೇತುವೆ

• ಉದಯವಾಹಿನಿ, ಶ್ರೀರಂಗಪಟ್ಟಣ

ತಾಲ್ಲೂಕಿನ ಚಂದಗಾಲು ಮತ್ತು ಮೇಳಾಪುರ ಗ್ರಾಮಗಳ ನಡುವೆ, ಬಸವನ ಮಂಟಿ ಕೊಲ್ಲಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲು ಉದ್ದೇಶಿಸಿದ್ದು, ಇನ್ನು 15 ದಿನಗಳಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ತಾಲ್ಲೂಕಿನ ಚಂದಗಾಲು ಗ್ರಾಮದಲ್ಲಿ 80 ಲಕ್ಷ ವೆಚ್ಚದ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಕೇಂದ್ರ ಸರ್ಕಾರ ರಾಜ್ಯದ ಪಾಲಿನ ಅನುದಾನವನ್ನು ಕೊಡುತ್ತಿಲ್ಲ. ಜಲ ಜೀವನ್ ಮಿಷನ್ ಯೋಜನೆಯ ಬಾಬು 30 ಸಾವಿರ ಕೋಟಿ ಬಾಕಿ ಇದೆ. ನರೇಗಾ ಯೋಜನೆಯ ಹೆಸರು ಬದಲಿಸಿದ ಬಳಿಕ ಅನುದಾನ ಸಂಪೂರ್ಣ ಸ್ಥಗಿತಗೊಂಡಿದೆ. ಆದರೂ ರಾಜ್ಯದ ಕಾಂಗ್ರೆಸ್ ಸರ್ಕಾರ ಕೊಟ್ಟಿರುವ ಭರವಸೆಗಳನ್ನು ಹಂತ ಹಂತವಾಗಿ ಈಡೇರಿಸುತ್ತಿದೆ ಎಂದರು.

ಶಾಸಕರು ಸಚಿವ ಸ್ಥಾನ ಬೇಕು ಎಂದು ಬೇಡಿಕೆ ಇಡುವುದು


ಉದಯವಾಹಿನಿ ಚಿತ್ರ

ತಪ್ಪಲ್ಲ. ಆದರೆ ಯಾರಿಗೆ ಸಚಿವ ಸ್ಥಾನ ನೀಡಬೇಕು ಎಂಬುದನ್ನು ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯಿಸಿದರು.

ವಿಧಾನಸಭೆ ಉಪ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಕೊಪ್ಪಳ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


# ರಂಗೇರಿದೆ ಪ್ರಾಥಮಿಕ ಶಾಲಾ ಶಿಕ್ಷಕರ ಚುನಾವಣೆ ಕಣ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯ ಕಣ ರಂಗೇರಿದೆ. ಏ.19ರಂದು ಮತದಾನ ನಡೆಯಲಿದ್ದು ಅಭ್ಯರ್ಥಿಗಳು ಶಿಕ್ಷಕ ಮತದಾರರ ಮನ ಗೆಲ್ಲಲು ನಾನಾ ರೀತಿಯ ಕಸರತ್ತು ನಡೆಸಿದ್ದಾರೆ. ಸಂದೇಶಗಳ ಮೂಲಕ, ಖುದ್ದಾಗಿ ಭೇಟಿ, ಔತಣ ಕೂಟಗಳು–ಹೀಗೆ ನಾನಾ ರೀತಿಯಲ್ಲಿ ಚುನಾವಣಾ ಪ್ರಚಾರ ಬಿರುಸಿನಿಂದ ನಡೆದಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 57 ನಿರ್ದೇಶಕ ಸ್ಥಾನಗಳು ಇವೆ. ಈ ಪೈಕಿ ಶಿಡ್ಲಘಟ್ಟ ತಾಲ್ಲೂಕಿನಲ್ಲಿ 9 ಸ್ಥಾನಗಳಿದ್ದು ಎಲ್ಲಾ ಸ್ಥಾನಗಳಿಗೂ ಅವಿರೋಧ ಆಯ್ಕೆ ನಡೆದಿದೆ. ಶಿಡ್ಲಘಟ್ಟ ಹೊರತುಪಡಿಸಿ 48 ನಿರ್ದೇಶಕ ಸ್ಥಾನಗಳಿಗೆ 107 ಅಭ್ಯರ್ಥಿಗಳು ಕಣದಲ್ಲಿ ಇದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಶೇ 33ರಷ್ಟು ಸ್ಥಾನಗಳು ಮಹಿಳೆಯರಿಗೆ ಮೀಸಲಿವೆ. ಕಳೆದ 15 ವರ್ಷಗಳಿಂದಲೂ ಈ ಮೀಸಲಾತಿಯಡಿ ಚುನಾವಣೆ ನಡೆಯುತ್ತಿದೆ.

ಈ ಪ್ರಕಾರ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಎಂಟು ಮಂದಿ ಪುರುಷರು,



ನಾಲ್ಕು ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿವೆ. 15 ಮಂದಿ ಪುರುಷರು ಮತ್ತು 7 ಮಂದಿ ಮಹಿಳೆಯರು ಕಣದಲ್ಲಿ ಸೆಣಸಾಟ ನಡೆಸುತ್ತಿದ್ದಾರೆ. ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಆರು ಪುರುಷ, ಮೂವರು ಮಹಿಳಾ ನಿರ್ದೇಶಕ ಸ್ಥಾನಗಳಿವೆ. ಈ 9 ಸ್ಥಾನಗಳಿಗೂ ಅವಿರೋಧ ಆಯ್ಕೆ ನಡೆದಿದೆ. ಚುನಾವಣೆ ನಡೆಸದೆಯೇ ಪರಸ್ಪರ ಒಮ್ಮತದ ಆಯ್ಕೆ ಈ ತಾಲ್ಲೂಕಿನಲ್ಲಿ ನಡೆದಿದೆ. ಗುಡಿಬಂಡೆ ತಾಲ್ಲೂಕಿನಲ್ಲಿ ಎರಡು ಸ್ಥಾನ ಪುರುಷರು, ಒಂದು ಸ್ಥಾನ ಮಹಿಳೆಗೆ ಮೀಸಲಾಗಿದೆ. ಆರು ಮಂದಿ ಪುರುಷರು, ಇಬ್ಬರು ಮಹಿಳೆಯರು ಸ್ಪರ್ಧೆಯಲ್ಲಿ ಇದ್ದಾರೆ. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಐದು ಪುರುಷ, ಎರಡು ಮಹಿಳಾ ಸ್ಥಾನಗಳಿವೆ. 11 ಪುರುಷರು ಮತ್ತು 4 ಮಂದಿ ಮಹಿಳೆಯರು ಸೆಣಸಾಟ ನಡೆಸಿದ್ದಾರೆ. ಚಿಂತಾಮಣಿ ತಾಲ್ಲೂಕಿನಲ್ಲಿ 9 ನಿರ್ದೇಶಕ ಸ್ಥಾನಗಳಿಗೆ 26 ಮಂದಿ ಮತ್ತು ನಾಲ್ಕು ನಿರ್ದೇಶಕಿ ಸ್ಥಾನಗಳಿಗೆ 7 ಮಂದಿ ಕಣದಲ್ಲಿ ಉಳಿದಿದ್ದಾರೆ. ಗೌರಿಬಿದನೂರು ತಾಲ್ಲೂಕಿನಲ್ಲಿ 9 ನಿರ್ದೇಶಕ ಸ್ಥಾನಗಳಿಗೆ 21 ಪುರುಷರು 4 ನಿರ್ದೇಶಕಿಯರ ಸ್ಥಾನಗಳಿಗೆ 8 ಮಹಿಳೆಯರು ಗೆಲುವಿಗಾಗಿ ಹೋರಾಟ ನಡೆಸುತ್ತಿದ್ದಾರೆ.

**ತಾಲ್ಲೂಕುಗಳಲ್ಲಿ ಗಮ್ಮತ್ತು:** ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಶಿಕ್ಷಕರು ಸಿಂಡಿಕೇಟ್‌ಗಳನ್ನು ಮಾಡಿಕೊಂಡು ಚುನಾವಣೆ ಎದುರಿಸುತ್ತಿದ್ದಾರೆ. ಕೆಲವು ತಾಲ್ಲೂಕುಗಳಲ್ಲಿ ಸಿಂಡಿಕೇಟ್‌ಗಳ ಸಂಖ್ಯೆ ಹೆಚ್ಚಿದ್ದರೆ ಕೆಲವು ತಾಲ್ಲೂಕುಗಳಲ್ಲಿ ಎರಡು ಸಿಂಡಿಕೇಟ್‌ಗಳ ನಡುವೆ ನೇರ ಸ್ಪರ್ಧೆ ಇದೆ. ಈ ಚುನಾವಣೆಯು ಶಿಕ್ಷಕರ ನಡುವೆ ಚರ್ಚೆ ಮತ್ತು ಜಿದ್ದಿನ ವಿಷಯವೂ ಆಗಿದೆ. ಚಿಂತಾಮಣಿ ತಾಲ್ಲೂಕಿನಲ್ಲಿ 13 ಸ್ಥಾನಗಳಿದ್ದು 33 ಅಭ್ಯರ್ಥಿಗಳು ಕಣದಲ್ಲಿ ಇದ್ದಾರೆ. ಗರಿಷ್ಠ ಅಭ್ಯರ್ಥಿಗಳು ಈ ತಾಲ್ಲೂಕಿನಲ್ಲಿ ಇದ್ದಾರೆ. ಆದ ಕಾರಣ ಸಿಂಡಿಕೇಟ್‌ಗಳ ಸಂಖ್ಯೆಯೂ ಇಲ್ಲಿ ಹೆಚ್ಚಿದೆ.

ಒಟ್ಟು 57 ನಿರ್ದೇಶಕ ಸ್ಥಾನಗಳು ಜಿಲ್ಲೆಯಲ್ಲಿ ಇವೆ. 50 ಮಂದಿ ಶಿಕ್ಷಕರಿಗೆ ಒಬ್ಬರಂತೆ ಕಾರ್ಯಕಾರಿ ಸಮಿತಿ ಸದಸ್ಯರು ಇರುತ್ತಾರೆ ಎನ್ನುತ್ತವೆ ಶಿಕ್ಷಕರ ಸಂಘದ ಮೂಲಗಳು ತಾಲ್ಲೂಕು ಸಂಘಗಳ ಚುನಾವಣೆಯ ನಂತರ ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಆಯ್ಕೆ ನಡೆಯಲಿದೆ.

**19ರಂದು ಮತದಾನ:** ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 2026–31ನೇ ಅವಧಿಯ ವಿವಿಧ ಹಂತಗಳ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸಲಾಗಿತ್ತು. ಮಂಗಳವಾರ ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನವಾಗಿತ್ತು. 19 ರಂದು ಬೆಳಿಗ್ಗೆ 8.30 ರಿಂದ ಸಂಜೆ 4.30 ರವರೆಗೆ ಚುನಾವಣೆ ನಡೆಯಲಿದೆ. ಅದೇ ದಿನ ಮತಗಳ ಎಣಿಕೆ ನಡೆದು ಫಲಿತಾಂಶ ಪ್ರಕಟಿಸಲಾಗುತ್ತದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಪದಾಧಿಕಾರಿಗಳ ಆಯ್ಕೆಗೆ ಅಧಿಸೂಚನೆಯು ಏ.22 ರಂದು ಪ್ರಕಟಣೆಯಾಗಲಿದೆ. 23, 24 ರಂದು ಬೆಳಿಗ್ಗೆ 11 ರಿಂದ ಸಂಜೆ 6 ಗಂಟೆಯವರೆಗೆ ನಾಮಪತ್ರ ಸಲ್ಲಿಸಬಹುದು. 25 ರಂದು ನಾಮಪತ್ರಗಳ ಪರಿಶೀಲನೆ, 26 ರಂದು ಸಂಜೆ 6ರವರೆಗೆ ನಾಮಪತ್ರಗಳನ್ನು ವಾಪಸ್ ಪಡೆಯಲು ಅವಕಾಶವಿದೆ. ಅಗತ್ಯವಾದರೆ 30 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 12ರವರೆಗೆ ಚುನಾವಣೆ ನಡೆಲಿದೆ. ಅದೇ ದಿನ ಮತಗಳ ಎಣಿಕೆ ನಡೆದು ಪದಾಧಿಕಾರಿಗಳ ಫಲಿತಾಂಶದ ಘೋಷಣೆ ಆಗಲಿದೆ.


# ಕುಕ್ಕರಹಳ್ಳಿ ಕೆರೆ ಪೂರ್ವದ ಜಲಾನಯನ ಪ್ರದೇಶ ಒಡಲಿಗೆ ಹರಿಯದು ಮಳೆನೀರು

• ಉದಯವಾಹಿನಿ, ಮೈಸೂರು

ಕುಕ್ಕರಹಳ್ಳಿ ಕೆರೆಯ ಜಲಾಯನ ಪ್ರದೇಶದ ಪೂರ್ವ ಭಾಗದಲ್ಲಿ ಬಿದ್ದ ಮಳೆ ನೀರು ಇನ್ನು ಜೀವನಾಡಿಗಳ 'ಜಲನಿಧಿ'ಯ ಒಡಲಿಗೆ ಸೇರದು. ಇಲ್ಲಿ ಬೀಳುವ 16 ಕೋಟಿ ಲೀಟರ್, ಅಂದರೆ; 1,569 ಕ್ಯುಸೆಕ್ ನೀರು ಚರಂಡಿ ಪಾಲಾಗುವ ಆತಂಕ ಜಲತಜ್ಞರಿಂದ ವ್ಯಕ್ತವಾಗಿದೆ. ರೈಲ್ವೆ ಕೆಳಸೇತುವೆ ನಿರ್ಮಾಣ ಯೋಜನೆಯು ಮಹಾರಾಜ ಕಾಲೇಜು ಮೈದಾನ, ಕ್ರಾಫರ್ಡ್ ಭವನ ಹಾಗೂ ಬೇಡನ್ ಪೊವೆಲ್ ಶಾಲಾ ಆವರಣದಲ್ಲಿ ಬೀಳುವ ಮಳೆ ನೀರು ಕೆರೆಗೆ ಸೇರದಂತೆ ಮಾಡಲಿದೆ. ಕಲಾಮಂದಿರದ ರಸ್ತೆ ಹಾಗೂ ರಮಾವಿಲಾಸ ರಸ್ತೆಯು ಎರಡು ಮೀಟರ್ ನಷ್ಟು ಕೆಳಕ್ಕೆ ತಗ್ಗಲಿದೆ. ಅಲ್ಲದೇ ರಸ್ತೆಯಂಚಿನಲ್ಲಿ ಗೋಡೆಗಳು ನಿರ್ಮಾಣ ಆಗುವುದರಿಂದ ನೀರು ಹರಿಯದು.

ಕೆಳ ಸೇತುವೆಯ ಬಲಬದಿ ನಿರ್ಮಿಸಲಾಗುವ ಚರಂಡಿಯಲ್ಲಿ ಹರಿಯುವ ಮಳೆ ನೀರು ದೇವಯ್ಯನ ಕೊಳಕ್ಕೆ ಸಮೀಪದಲ್ಲಿ ಹೋಗುವ ಕಾಲುವೆ ಪಾಲಾಗಲಿದೆ.

**ಜಲಾನಯನ ಪ್ರದೇಶದ ಕಡಿತ:** ಕೆರೆಯ ಉತ್ತರಕ್ಕೆ ಸಿಎಫ್‌ಟಿಆರ್‌ಐ, ಪಡುವಾರ ಹಳ್ಳಿ, ಪಶ್ಚಿಮಕ್ಕೆ ಮಾನಸಗಂಗೋತ್ರಿ, ಪೂರ್ಣಯ್ಯ ನಾಲೆ, ಪೂರ್ವಭಾಗದಲ್ಲಿ ಮಹಾರಾಜ ಕಾಲೇಜು ಮೈದಾನ – ಕ್ರಾಫರ್ಡ್ ಭವನ– ಬೇಡನ್ ಪೊವೆಲ್ ಶಾಲಾ ಆವರಣ ಸೇರುದಂತೆ ಐದು ಜಲಾನಯನ ಪ್ರದೇಶಗಳನ್ನು ಕುಕ್ಕರಹಳ್ಳಿ ಕೆರೆಯು ಹೊಂದಿತ್ತು.



ಉದ್ದೇಶಿತ ಕೆಳ ಸೇತುವೆ ಯೋಜನೆಯು ಕೆರೆಯ ಪೂರ್ವ ಭಾಗವನ್ನೇ ಸೀಳಿ ಹಾಕಲಿದೆ.


**ಬೀಳುವ ಮಳೆ ನೀರು ಎಷ್ಟು:** 'ಕೆರೆಯ ಪೂರ್ವ ಭಾಗದಲ್ಲಿ ಸುಮಾರು 50 ಎಕರೆ ಜಲಾಯನ ಪ್ರದೇಶ ಹೊಂದಿದ್ದು, ಈ ಭಾಗದಲ್ಲಿ 800 ಮಿ.ಮೀ ವಾರ್ಷಿಕ ಮಳೆ ಬೀಳುತ್ತದೆ. 16 ಕೋಟಿ ಲೀಟರ್ ನೀರು ಕೆರೆಯನ್ನು ಇನ್ನು ಸೇರುವುದಿಲ್ಲ. ಕ್ರಾಫರ್ಡ್ ಭವನ ಹಾಗೂ ಬೇಡನ್ ಪೊವೆಲ್ ಶಾಲಾ ಆವರಣದಲ್ಲಿ ಬಿದ್ದ ಮಳೆ ನೀರನ್ನು ಕೆರೆಗೆ ಹರಿಸುವ ಕಾಳಜಿಯನ್ನು ತೋರಬಹುದು. ಆದರೆ, ಮಹಾರಾಜ ಕಾಲೇಜು ಮೈದಾನದಲ್ಲಿ ಬಿದ್ದ ನೀರು ಶಾಶ್ವತವಾಗಿ ಚರಂಡಿ ಪಾಲಾಗಲಿದೆ ಎನ್ನುತ್ತಾರೆ ಮಳೆ ನೀರು ಕೊಯ್ದು ಬಗ್ಗೆ ಆಸಕ್ತಿ ಹೊಂದಿರುವ ಟೆಕಿ ರವಿಕೀರ್ತಿ.

# ನಮ್ಮ ನಡಿಗೆ ಗ್ರಾ.ಪಂ. ಕಡೆಗೆ

• ಉದಯವಾಹಿನಿ, ಮುಳಬಾಗಿಲು

ತಾಲ್ಲೂಕಿನ ತಿಮ್ಮರಾವುತ್ತನಹಳ್ಳಿ, ಮಲ್ಲನಾಯಕನಹಳ್ಳಿ ಗ್ರಾಮ ಪಂಚಾಯಿತಿಗಳಲ್ಲಿ ಶಾಸಕ ಸಮೃದ್ಧಿ ಮಂಜುನಾಥ್ ನೇತೃತ್ವದಲ್ಲಿ ನಮ್ಮ ನಡಿಗೆ ಗ್ರಾಮ ಪಂಚಾಯಿತಿಗಳ ಕಡೆಗೆ ಕಾರ್ಯಕ್ರಮ ನಡೆಸಿದರು. ತಹಶೀಲ್ದಾರ್ ವಿ.ಗೀತಾ, ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ ಎನ್.ವಿ.ಬಾಬು, ತಾಲ್ಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳ ಜೊತೆಗೂಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜನಸ್ಪಂದನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಸಾರ್ವಜನಿಕರ ಸಮಸ್ಯೆ ಆಲಿಸಿ, ಸ್ಥಳದಲ್ಲೇ ಕೆಲವು ಸಮಸ್ಯೆಗಳನ್ನು ಬಗೆಹರಿಸಿದರೆ, ಇನ್ನು ಕೆಲವು ಸಮಸ್ಯೆಗಳನ್ನು ಒಂದು ವಾರದಲ್ಲಿ ಪರಿಹರಿಸುವ ಭರವಸೆ ನೀಡಿದರು.

ಸಾರ್ವಜನಿಕರು ಕಂದಾಯ, ಬೆಸ್ಕಾಂ, ಬಸ್, ವಿಧವಾ ವೇತನ, ಅಂಗವಿಕಲ ವೇತನ, ಸರ್ವೆ, ಖಾತೆ, ರಸ್ತೆ, ಸ್ಮಶಾನ, ಸ್ಮಶಾನಕ್ಕೆ ರಸ್ತೆ, ವಸತಿ, ನಿವೇಶನ ಸೇರಿದಂತೆ ನಾನಾ ಬಗೆಯ ಸಮಸ್ಯೆಗಳ ಕುರಿತು ಶಾಸಕರಿಗೆ ಸರತಿ ಸಾಲಿನಲ್ಲಿ ನಿಂತು ಅಹವಾಲು ಸಲ್ಲಿಸಿದರು. ತಿಮ್ಮರಾವುತ್ತನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ 59 ಅರ್ಜಿ ಸಲ್ಲಿಕೆಯಾಗಿದ್ದು, 9 ಅರ್ಜಿಗಳನ್ನು ಸ್ಥಳದಲ್ಲೇ ಪರಿಹರಿಸಿದರು. ಜೊತೆಗೆ ಶವಸಂಸ್ಕಾರದ ಚೆಕ್, ವೈದ್ಯಕೀಯ ಚಿಕಿತ್ಸೆ ಪರಿಹಾರ ಹಾಗೂ


ಉದಯವಾಹಿನಿ ಚಿತ್ರ

ಮರಣ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಮಲ್ಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 87 ಅರ್ಜಿಗಳು, 13 ಮೌಖಿಕ ಬೇಡಿಕೆಗಳನ್ನು ಸಾರ್ವಜನಿಕರು ನೀಡಿದರು. ಇದರಲ್ಲಿ 20 ಅರ್ಜಿಗಳಿಗೆ ಸ್ಥಳದಲ್ಲೇ ಪರಿಹಾರ ನೀಡಲಾಯಿತು.

ಈ ವೇಳೆ ಶಾಸಕ ಸಮೃದ್ಧಿ ಮಂಜುನಾಥ್ ಮಾತನಾಡಿ, ಸಾರ್ವಜನಿಕರು ತಮ್ಮ ಕೆಲಸಕ್ಕಾಗಿ ಪ್ರತಿನಿತ್ಯ ತಾಲ್ಲೂಕು ಕೇಂದ್ರಗಳಿಗೆ ಅಲೆದಾಡುವುದನ್ನು ತಪ್ಪಿಸುವ ಸಲುವಾಗಿ ನಮ್ಮ ನಡೆ ಗ್ರಾಮ ಪಂಚಾಯಿತಿಗಳ ಕಡೆಗೆ ಹಾಗೂ ಜನಸ್ಪಂದನ ಕಾರ್ಯಕ್ರಮ ನಡೆಸಲಾಗುತ್ತಿದೆ. ಏ.15 ರಿಂದ ಜೂನ್ ತಿಂಗಳ ಒಳಗೆ ತಾಲ್ಲೂಕಿನ 30 ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಾರ್ವಜನಿಕರ ಸಮಸ್ಯೆ ಪರಿಹಾರಕ್ಕೆ ಮುಂದಾಗಲಾಗುವುದು ಎಂದು ಭರವಸೆ ನೀಡಿದರು.

ಜೂನ್‌ವರೆಗೂ ಪ್ರತಿ ಗ್ರಾಮ ಪಂಚಾಯಿತಿಗೆ ನಿಗದಿತ ದಿನಾಂಕಗಳಂದು ಬರಲಿದ್ದು, ಆಯಾಯ ಪಂಚಾಯಿತಿ ವ್ಯಾಪ್ತಿಯಲ್ಲಿ ಜನತೆ ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಅಹವಾಲು ಸಲ್ಲಿಸಬಹುದು.

ಸಣ್ಣ ಪುಟ್ಟ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲಾಗುವುದು. ಜೊತೆಗೆ ಉಳಿದ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲಾಗುವುದು ಎಂದು ಹೇಳಿದರು.ತಹಶೀಲ್ದಾರ್ ವಿ.ಗೀತಾ ಮಾತನಾಡಿ, ಕಾರ್ಯಕ್ರಮದಲ್ಲಿ ಸಾರ್ವಜನಿಕರು ಯಾವುದೇ ಇಲಾಖೆಗಳಿಗೆ ಸೇರಿದಸಮಸ್ಯೆಗಳಿದ್ದರೂ ಸಂಕೋಚವಿಲ್ಲದೆ ತಿಳಿಸಿ, ಸಮಸ್ಯೆ ಪರಿಹರಿಸಿಕೊಳ್ಳಬಹುದು ಎಂದು ತಿಳಿಸಿದರು.

# ಮಾನಸಿಕ, ದೈಹಿಕ ಶಕ್ತಿ ದೃಢತೆಗೆ ಧ್ಯಾನ ಸಹಕಾರಿ

## ಧ್ಯಾನವು ನಿಮಗೆ ಶಾಂತಿ, ನಿರಾಳತೆ, ಬಲವನ್ನು ಕೊಡುತ್ತದೆ, ಮಾತಿನ ಮೇಲೆ ಹೆಚ್ಚಿನ ಹಿಡಿತ ದೊರೆಯುತ್ತದೆ

• ಉದಯವಾಹಿನಿ, ರಾಮನಗರ

ಧ್ಯಾನವು ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ಬೇಲಿ ಮಠದ ಶಿವರುದ್ರ ಸ್ವಾಮೀಜಿ ತಿಳಿಸಿದರು. ನಗರದ ಗುರುಭವನದಲ್ಲಿ ರಾಮನಗರ ಪಿರಮಿಡ್ ಧ್ಯಾನ ಮಂದಿರದ ವತಿಯಿಂದ ಆಯೋಜಿಸಿದ್ದ ಸಸ್ಯಾಹಾರ ಜನ ಜಾಗೃತಿ ಜಾಥಾ, ಸಂಗೀತ ನಾದ, ಧ್ಯಾನ, ಪ್ರವಚನ ಸಮಾರಂಭದಲ್ಲಿ ಅವರು ಮಾತನಾಡಿದರು. ಧ್ಯಾನದಿಂದ ಜೀವಶಕ್ತಿ ಹೆಚ್ಚುತ್ತದೆ, ಬುದ್ಧಿ ಹರಿತವಾಗುತ್ತದೆ ಹಾಗೂ ಇತರರೊಂದಿಗೆ ನಮ್ಮ ಸಂವಹನ ಆಹ್ಲಾದಕರವಾಗುತ್ತದೆ. ನಮ್ಮ ಮಾತಿನ ಮೇಲೆ ಹೆಚ್ಚಿನ ಹಿಡಿತ ದೊರೆಯುತ್ತದೆ. ಮನಸ್ಸಿನ ಸಂಕಲ್ಪ ಶಕ್ತಿ ಹೆಚ್ಚಾಗುತ್ತದೆ. ಧ್ಯಾನವು ನಮ್ಮ ಹಣೆಬರಹವನ್ನೇ ಬದಲಾಯಿಸುತ್ತದೆ ಎಂದರು. ಧ್ಯಾನವು ಮನುಷ್ಯನ ದೃಷ್ಟಿಕೋನವನ್ನು ಬದಲಾಯಿಸುತ್ತದೆ, ತನ್ಮೂಲಕ ನಿಮ್ಮ ವ್ಯಕ್ತಿತ್ವವನ್ನು ಬದಲಾಯಿಸುತ್ತದೆ. ಧ್ಯಾನವು ನಿಮಗೆ ಶಾಂತಿ, ನಿರಾಳತೆ ಮತ್ತು ಬಲವನ್ನು ಕೊಡುತ್ತದೆ. ಧ್ಯಾನ ಮಾಡುವವರು ಕರುಣೆ ಮತ್ತು ಸಹಾನುಭೂತಿಯನ್ನು ಹೊಂದುತ್ತಾರೆ ಎಂದರು.

ಧ್ಯಾನದಿಂದ ವಿಷಯಗಳನ್ನು ಗ್ರಹಿಸುವ ರೀತಿ ಸುಧಾರಿಸುತ್ತದೆ. ಮನಸ್ಸಿನಲ್ಲಿ ಸ್ಪಷ್ಟತೆ ಉಂಟಾಗುತ್ತದೆ ಹಾಗೂ ಜನರೊಂದಿಗೆ ಏನು ಮಾತನಾಡಬೇಕು, ಬೇರೆ ಬೇರೆ ಸನ್ನಿವೇಶಗಳಲ್ಲಿ ಹೇಗೆ ಕ್ರಿಯಾತ್ಮಕವಾಗಿ ಇರಬೇಕು, ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸಬೇಕು ಎಂಬ ಅರಿವನ್ನು ಮೂಡಿಸಿ ಸಂವಹನವನ್ನು ಉತ್ತಮಗೊಳಿಸುತ್ತದೆ ಎಂದರು. ಪ್ರತಿದಿನ ಕೆಲವು ನಿಮಿಷಗಳ ಕಾಲ ಧ್ಯಾನ ಮಾಡುವುದರಿಂದ ನಮ್ಮ ಮೇಲೆ ದೈವಿಕ ಪ್ರೀತಿಯ ಸಿಂಚನದ ಅನುಭವವನ್ನು ಪಡೆಯಬಹುದು ಎಂದು ಅವರು ಹೇಳಿದರು.


ಉದಯವಾಹಿನಿ ಚಿತ್ರ

**ಕೆಲವರು ತುಂಬಾ ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಆದರೂ ಅವರಿಗೆ ಯಶಸ್ಸು ದೊರೆಯುವುದಿಲ್ಲ. ನೀವು ಈ ಸಂಗತಿಯನ್ನು ನಿಮ್ಮ ಸುತ್ತಮುತ್ತ ಗಮನಿಸಿರುತ್ತೀರಿ. ಅಂತಹ ವ್ಯಕ್ತಿಗಳಲ್ಲಿ ಇರುವ ದುರ್ಬಲವಾದ, ನಕಾರಾತ್ಮಕವಾದ ಮಾನಸಿಕ ಶಕ್ತಿಯೇ ಇದಕ್ಕೆ ಕಾರಣ. ಈ ನಕಾರಾತ್ಮಕ ಭಾವಗಳನ್ನು ನಿವಾರಿಸಿಕೊಳ್ಳಲು ಧ್ಯಾನ ಅತ್ಯಗತ್ಯ.**
**– ತುಮಕೂರಿನ ತಪೋವನದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ**

ಇತ್ತೀಚಿನ ದಿನಗಳಲ್ಲಿ ಜನರು ತಮ್ಮ ಆರೋಗ್ಯದ ದೃಷ್ಟಿಯಿಂದ ಸಸ್ಯಾಹಾರಿ ಆಹಾರವನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಫೈಬರ್, ಧಾನ್ಯಗಳು, ಕಾಳುಗಳು, ಬೀಜಗಳು ಇತ್ಯಾದಿ ಹೃದಯ ಮತ್ತು ದೇಹದ ಆರೋಗ್ಯಕ್ಕೆ ಉತ್ತಮವಾದ ಕಾರಣ ಸಸ್ಯ ಆಧಾರಿತ ಆಹಾರವು ಉತ್ತಮ ಹೃದಯದ ಆರೋಗ್ಯಕ್ಕೆ ಸಹಾಯ ಮಾಡುತ್ತದೆ ಎಂದು ಸಂಶೋಧನೆ ತೋರಿಸಿದೆ. ಇದು ಕಡಿಮೆ ರಕ್ತದೊತ್ತಡ, ಮೂಳೆಗಳನ್ನು ಸದೃಢಗೊಳಿಸುವುದು, ತೂಕ ನಿರ್ವಹಣೆ ಮತ್ತು ಮಧುಮೇಹವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು. ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ, ಪಿರಮಿಡ್ ಮಾಸ್ಟರ್ ಮನೋರಮಾ, ಸಮಾಜ ಸೇವಕ ಡಿ. ಆನಂದಸ್ವಾಮಿ ಹಾಗೂ ಇತರರು ಇದ್ದರು. ರಾಮನಗರ ಪಿರಮಿಡ್ ಧ್ಯಾನ ಮಂದಿರದ ವತಿಯಿಂದ ನಗರದಲ್ಲಿ ಸಸ್ಯಾಹಾರ ಜನಜಾಗೃತಿ ಜಾಥಾ ನಡೆಯಿತು.

**ಆಹಾರಕ್ಕಾಗಿ ಪ್ರಾಣಿಗಳನ್ನು ಸಾಕುವುದು ಮತ್ತು ಕೊಲ್ಲುವುದು ಪರಿಸರದ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ. ಇದು ಮಾಲಿನ್ಯವನ್ನು ಸೃಷ್ಟಿಸುತ್ತದೆ ಮತ್ತು ಹವಾಮಾನ ಬದಲಾವಣೆಗೆ ಕೊಡುಗೆ ನೀಡುತ್ತದೆ ಇದರಿಂದ ಜನರು ಪರಿಸರವನ್ನು ರಕ್ಷಿಸುವ ಮಾರ್ಗವಾಗಿ ಸಸ್ಯಾಹಾರವನ್ನು ಅನುಸರಿಸಬೇಕು. ಇತ್ತೀಚಿನ ದಿನಗಳಲ್ಲಿ ಮಾಂಸಾಹಾರಕ್ಕಿಂತ ಸಸ್ಯಾಹಾರ ಸೇವನೆ ಆರೋಗ್ಯಕ್ಕೆ ಮತ್ತು ಪರಿಸರಕ್ಕೆ ಒಳ್ಳೆಯದು.**
**– ಎನ್. ಕೃಷ್ಣಪ್ಪ ರಾಮನಗರ ಪಿರಮಿಡ್ ಧ್ಯಾನ ಮಂದಿರದ ಸಂಸ್ಥಾಪಕ**

## ಮಿನಿ ನ್ಯೂಸ್

### ಮಹಿಳಾ ಮೀಸಲು ಬೆಂಬಲಿಸಿ ಬೈಕ್ ರ್‍ಯಾಲಿ

• ಉದಯವಾಹಿನಿ, ತುಮಕೂರು

ಲೋಕಸಭೆ, ವಿಧಾನಸಭೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವ 'ನಾರಿ ಶಕ್ತಿ ವಂದನ್ ಅಧಿನಿಯಮ' ಬೆಂಬಲಿಸಿ ಮಹಿಳಾ ಶಕ್ತಿ ವೇದಿಕೆ ನೇತೃತ್ವದಲ್ಲಿ ನಗರದಲ್ಲಿ ಸಂಜೆ ಬೈಕ್ ರ್‍ಯಾಲಿ ನಡೆಯಿತು. ಬಿ.ಎಚ್.ರಸ್ತೆಯ ಎಸ್‌ಐಟಿ ಕಾಲೇಜು ಮುಂಭಾಗ ಶಾಸಕ ಜಿ.ಬಿ.ಜ್ಯೋತಿ ಗಣೇಶ್ ರ್‍ಯಾಲಿಗೆ ಚಾಲನೆ ನೀಡಿದರು ಮಹಿಳೆಯರು ರಾಷ್ಟ್ರ ಧ್ವಜ ಪ್ರದರ್ಶಿಸುತ್ತಾ ಬೈಕ್‌ಗಳಲ್ಲಿ ಸಾಗಿದರು. ಗಂಗೋತ್ರಿ ರಸ್ತೆ, ಎಸ್‌ಎಸ್ ಪುರಂ ರಸ್ತೆ, ಭದ್ರಮ್ಮ ಛತ್ರ ವೃತ್ತ ಮೂಲಕ ಪ್ರಮುಖ ರಸ್ತೆಗಳಲ್ಲಿ ರ್‍ಯಾಲಿ ಸಾಗಿತು.

### ಕುತೂಹಲ ಮೂಡಿಸಿದ ಚುನಾವಣೆ

• ಉದಯವಾಹಿನಿ, ಶಿರಾ

ತಾಲ್ಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಅಂತಿಮವಾಗಿ 40 ಮಂದಿ ಕಣದಲ್ಲಿದ್ದಾರೆ. ಏಪ್ರಿಲ್ 19ರಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮತದಾನ ನಡೆಯಲಿದ್ದು ಚುನಾವಣೆ ತೀವ್ರ ಕುತೂಹಲ ಮೂಡಿಸಿದೆ. ಚುನಾವಣೆಯಲ್ಲಿ 13 ಪುರುಷರು, 7 ಮಹಿಳೆಯರು ಸೇರಿದಂತೆ ಒಟ್ಟು 20 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಅಹಿಂದಾ ಹೆಸರಿನಲ್ಲಿ ಸ್ಪರ್ಧೆ ನಡೆಸಿರುವ ಸುರೇಶ್, ಜಯಚಂದ್ರ ಎನ್. ನೇತೃತ್ವದ ತಂಡದಲ್ಲಿ ಚಿರಂಜೀವಿ ಜಿ.ಐ., ದೇವರಾಜ, ಧನಂಜಯ ಎಂ.ಎನ್., ಫಯಾಜ್, ಗಿರೀಶ್ ಆರ್., ಹಾಲೇಶಿ ಆರ್., ಕೃಷ್ಣಮೂರ್ತಿ, ಮಂಜುನಾಥ ಕೆ.ಜಿ., ರಮೇಶ ಎಚ್., ರವಿ ಎಚ್.ಎಂ., ರೇವಣ್ಣ ಎಂ., ಅನಿತ ಕೆ.ಆರ್., ಕವಿತ ಎಲ್., ಕುಬ್ರಬಾನು, ಕೋಮಲ ಎಸ್., ಮಹಮದಿ ಸಾಯರಾ ಬಾನು, ಸವಿತ ಆರ್., ಟಿ.ಎನ್.ಸೌಭಾಗ್ಯ ಸ್ಪರ್ಧೆ ನಡೆಸಿದ್ದಾರೆ.

ಹಾಲಿ ಅಧ್ಯಕ್ಷ ಹನುಮಂತರಾಜು ಬಿ.ಆರ್ ನೇತೃತ್ವದ ತಂಡದಲ್ಲಿ ಅಬ್ದುಲ್ ಅಜೀಜ್ ಬಿ.ಎಸ್., ಬಸವರಾಜು ಎನ್.ಆರ್.. ದೇವರಾಜು ಆರ್., ದೊಡ್ಡಣ್ಣ ಇ., ಜೀವನ್ ಪ್ರಕಾಶ್ ಕೆ.ಸಿ.. ಕೃಷ್ಣಪ್ಪ ಎನ್.. ನರಸಿಂಹಮೂರ್ತಿ., ಪರಮೇಶ್ ವಿ.ಎನ್., ರಮೇಶ, ರಂಗನಾಥ ಎಂ., ಶ್ರೀನಿವಾಸ ಪಿ., ಗೀತಾ, ಕಾಮಾಕ್ಷಮ್ಮ ಎಂ.ಕೆ., ಮಂಜಮ್ಮ.ಯು., ರೂಪ, ಸಾಹಿತ್ಯ ಪ್ರದ, ಶ್ರೀಶೈಲ ಕೆ.ಎಂ., ಸುಶೀಲಮ್ಮ ಪಿ. ಸ್ಪರ್ಧೆ ಮಾಡಿದ್ದಾರೆ.ಎರಡು ಬಣಗಳ ನಡುವೆ ಸ್ಪರ್ಧೆ ಇದ್ದು, ಗುರುಭವನ ನಿರ್ಮಾಣ ಪ್ರಮುಖ ಚರ್ಚಾ ವಿಷಯವಾಗಿದೆ. ಮನೆ ಮನೆ ಪ್ರಚಾರಕ್ಕೆ ಒತ್ತು ನೀಡಲಾಗಿದೆ.

### ಅನಧಿಕೃತ ಮದ್ಯ ಮಾರಾಟ ಮಳಿಗೆಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಿ ಅಧಿಕಾರಿಗಳಿಗೆ ಶಾಸಕ ಸೂಚನೆ

• ಉದಯವಾಹಿನಿ, ಮಂಡ್ಯ

ಸಾರ್ವಜನಿಕರ ಹಿತದೃಷ್ಟಿಯಿಂದ ಜಿಲ್ಲೆಯಲ್ಲಿರುವ ಅನಧಿಕೃತ ಮದ್ಯ ಮಾರಾಟ ಮಳಿಗೆಗಳ ವಿರುದ್ಧ ಅಧಿಕಾರಿಗಳು ಕಾನೂನು ಕ್ರಮವಹಿಸಬೇಕು ಎಂದು ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಗಣಿಗ ರವಿಕುಮಾರ್ ಸೂಚಿಸಿದರು. ಮಂಡ್ಯ ಜಿಲ್ಲಾ ಪಂಚಾಯಿತಿ ಕಾವೇರಿ ಸಭಾಂಗಣದಲ್ಲಿ ಗುರುವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ (ಕೆಡಿಪಿ)ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಔಷಧಿಗಳ ಕೊರತೆ ಆಗದಂತೆ ಕ್ರಮ ವಹಿಸಬೇಕು. ರಾತ್ರಿ ವೇಳೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಗದಂತೆ ಬಸರಾಳು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರನ್ನ ನೇಮಿಸಬೇಕು ಹಾಗೂ ಸಾರ್ವಜನಿಕರಿಗೆ ಆರೋಗ್ಯ ತಪಾಸಣೆಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿ, ಆಂಬ್ಯುಲೆನ್ಸ್ ಸೇವೆಯನ್ನ 24–7 ಕಲ್ಪಿಸುವುದಾಗಿ ಭರವಸೆ ನೀಡಿದರು. ಅಲ್ಲದೇ ಬೇಸಿಗೆ ರಜೆ ಇರುವ ಕಾರಣ, ಶಾಲಾ ಮಕ್ಕಳಿಗೆ ಬೇಸಿಗೆ ಶಿಬಿರ ಆಯೋಜಿಸಿ ಮಕ್ಕಳನ್ನ ಪಠ್ಯ, ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುವಂತೆ ಕಾರ್ಯಕ್ರಮಗಳನ್ನ ರೂಪಿಸಬೇಕು, ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಮಕ್ಕಳ ದಾಖಲಾತಿಗಳನ್ನ ಹೆಚ್ಚಿಸುವಂತೆ ಕಾರ್ಯಕ್ರಮಗಳನ್ನ ಆಯೋಜಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ವಿಧ್ಯ ವಿಕಾಸ ಯೋಜನೆಯಡಿಗೆ 2025 –26ನೇ ಸಾಲಿನ ಶಾಲಾ ಮಕ್ಕಳಿಗೆ ಸಮವಸ್ತ್ರ ನೀಡುವಂತೆ ಸೂಚಿಸಿದರು. ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲೆಗಳ ದಾಖಲೆ ಪರಿಶೀಲಿಸಿ ಶಾಲೆಗಳ ಖಾತೆ ಮಾಡಿಸುವಂತೆ ಕ್ರಮವಹಿಸಬೇಕು ಎಂದರು.

### ಎಚ್‌ಡಿಕೆ ರಾಜ್ಯ ರಾಜಕಾರಣ ಕಾಲ ತೀರ್ಮಾನ

• ಉದಯವಾಹಿನಿ, ಚನ್ನಪಟ್ಟಣ

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜ್ಯ ರಾಜಕಾರಣಕ್ಕೆ ಮರಳುವುದು ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ವಿಚಾರವನ್ನು ಕಾಲವೇ ತೀರ್ಮಾನ ಮಾಡುತ್ತದೆ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು. ಪಟ್ಟಣದಲ್ಲಿ ನಡೆದ ಪಕ್ಷದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮಕ್ಕೂ ಮೊದಲು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರು ಮತ್ತೆ ಚನ್ನಪಟ್ಟಣದಿಂದ ಸ್ಪರ್ಧಿಸಿ, ಗೆದ್ದು ಮತ್ತೆ ಈ ರಾಜ್ಯದ ಮುಖ್ಯಮಂತ್ರಿಯಾಗಬೇಕು ಎನ್ನುವುದು ಕಾರ್ಯಕರ್ತರು ಮತ್ತು ಮುಖಂಡರ ಒತ್ತಾಸೆಯಾಗಿದೆ ಎಂದರು.

ಜೆಡಿಎಸ್ ಎನ್‌ಡಿಎ ಮೈತ್ರಿ ಕೂಟದ ಭಾಗ. ಯಾವ ಕ್ಷೇತ್ರಗಳನ್ನು ಜೆಡಿಎಸ್‌ಗೆ ಬಿಟ್ಟು ಕೊಡುತ್ತಾರೆ. ಯಾರು ಎಲ್ಲಿಂದ ಸ್ಪರ್ಧೆ ಮಾಡಬೇಕು ಎಂದು 2028ರ ವಿಧಾನಸಭಾ ಚುನಾವಣೆ ವೇಳೆಗೆ ತೀರ್ಮಾನವಾಗುತ್ತದೆ. ಈ ಬಗ್ಗೆ ಮೈತ್ರಿಕೂಟದ ರಾಷ್ಟ್ರಮಟ್ಟದ ಹಾಗೂ ರಾಜ್ಯ ಮಟ್ಟದ ನಾಯಕರು ತೀರ್ಮಾನ ಮಾಡುತ್ತಾರೆ. ಕಾಲ ಬರುವವರೆಗೂ ಕಾದು ನೋಡೋಣ ಎಂದರು.

### ಹಿಂದುಳಿದ ವರ್ಗಗಳ ಬದುಕು ಬದಲಿಸಿದ ಅಂಬೇಡ್ಕರ್


• ಉದಯವಾಹಿನಿ, ಮಳವಳ್ಳಿ

ಸಮಾಜದಲ್ಲಿನ ಅತ್ಯಂತ ಕೆಟ್ಟವ್ಯವಸ್ಥೆಯಲ್ಲಿದ್ದ ದಲಿತರು, ಶೋಷಿತರು, ಹಿಂದುಳಿದವರು, ಮಹಿಳೆಯರು ಬದುಕನ್ನು ಬದಲಾಯಿಸಿದ ಕೀರ್ತಿ ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದು ಶಾಸಕ ಪಿ.ಎಂ. ನರೇಂದ್ರಸ್ವಾಮಿ ತಿಳಿಸಿದರು. ಪಟ್ಟಣದ ಬಿ.ಆರ್.ಅಂಬೇಡ್ಕರ್‌ಭವನದಲ್ಲಿ ಸಂಜೆ ತಾಲ್ಲೂಕು ಆಡಳಿತ ಆಯೋಜಿಸಿದ ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ವಿಶ್ವಜ್ಞಾನಿ ಎಂಬ ಗೌರವಕ್ಕೆ ಪಾತ್ರರಾಗಿ ಜಗತ್ತಿನಾದ್ಯಂತ ಪ್ರತಿಮೆ ಸ್ಥಾಪನೆ, ಜಯಂತಿ ಆಚರಣೆಗೆ ಒಳಪಟ್ಟಿರುವ ಸಾಧಕರಾಗಿದ್ದರೆ ಅದು ಅಂಬೇಡ್ಕರ್ ಅವರು ಮಾತ್ರ. ಸಂವಿಧಾನ ಎಂಬ ಮಹಾಗ್ರಂಥವನ್ನು ದೇಶಕ್ಕೆ ಅರ್ಪಿಸಿ ಸಮಾನತೆಯ ಹಾದಿಯೊಂದಿಗೆ ಹಲವು ಹಕ್ಕುಗಳನ್ನು ಜನರಿಗೆ ಕೊಟ್ಟ ಅವರ ಆದರ್ಶ ಪ್ರತಿಯೊಬ್ಬರಿಗೂ ಮಾದರಿಯಾಗಿದ್ದಾರೆ ಎಂದು ಬಣ್ಣಿಸಿದರು.

ಅಂತರಾಳದಿಂದ.. EDITORIAL

# ಪುನರ್ ವಿಂಗಡಣೆ ಕಹಿಗುಳಿಗೆಗೆ ಮಹಿಳಾ ಪ್ರಾತಿನಿಧ್ಯದ ಸಿಹಿಲೇಪ

ಮಹಿಳಾ ಮೀಸಲಾತಿ ಕಾಯ್ದೆ 2023ಕ್ಕೆ ತಿದ್ದುಪಡಿ ಹಾಗೂ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಸಂಬಂಧಿಸಿದ ಮಸೂದೆಗಳಿಗೆ ಅಂಗೀಕಾರ ಪಡೆಯುವ ಉದ್ದೇಶದಿಂದ ಏಪ್ರಿಲ್ 16ರಿಂದ 18ರವರೆಗೆ ವಿಶೇಷ ಸಂಸತ್ ಅಧಿವೇಶನ ನಡೆಸಲು ಕೇಂದ್ರ ಸರ್ಕಾರ ಸಜ್ಜಾಗಿದೆ. ಈ ಪ್ರಯತ್ನಗಳ ಹಿಂದಿನ ರಾಜಕೀಯ ಉದ್ದೇಶಗಳು ಅನುಮಾನ ಹುಟ್ಟಿಸುವಂತಿವೆ. ಸಂಸದೀಯ ಪ್ರಾತಿನಿಧ್ಯ ಹಾಗೂ ಒಕ್ಕೂಟ ವ್ಯವಸ್ಥೆಯ ಸಮತೋಲನಕ್ಕೆ ಸಂಬಂಧಿಸಿದಂತೆ ಗಂಭೀರ ಪ್ರಶ್ನೆಗಳಿಗೆ ಸರ್ಕಾರದ ಆತುರದ ನಡೆ ಆಸ್ಪದ ಕಲ್ಪಿಸಿದೆ. 2023ರಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಗೊಂಡಾಗ, ಮುಂದಿನ ಜನಗಣತಿಯ ನಂತರ ಅದನ್ನು ಜಾರಿಗೊಳಿಸುವುದಾಗಿ ಸರ್ಕಾರ ಹೇಳಿತ್ತು. ಜನಗಣತಿ ಪ್ರಕ್ರಿಯೆ ಈಗಷ್ಟೇ ಆರಂಭವಾಗಿರುವಾಗ, 2011ರ ಜನಗಣತಿಯ ದತ್ತಾಂಶಗಳನ್ನು ಆಧರಿಸಿ 2029ರಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಮಹಿಳಾ ಪ್ರಾತಿನಿಧ್ಯಕ್ಕೂ ಜನಗಣತಿಗೂ ಸಂಬಂಧ ಕಲ್ಪಿಸಿರುವುದರ ಹಿನ್ನೆಲೆ ಅಸ್ಪಷ್ಟವಾಗಿದೆ. 2024ರ ಲೋಕಸಭೆ ಚುನಾವಣೆಗೆ ಮೊದಲು ಕಾನೂನನ್ನು ಜಾರಿಗೊಳಿಸದೆಯೇ, ಅದರ ಕೀರ್ತಿಯನ್ನು ಈಗ ಪಡೆಯುವುದು ಕೇಂದ್ರ ಸರ್ಕಾರದ ಉದ್ದೇಶ ಆಗಿರುವಂತಿದೆ. ಸರ್ಕಾರಕ್ಕೆ ಆಗಿರುವ ದಿಢೀರ್ ಜ್ಞಾನೋದಯದ ಹಿಂದಿನ ಕಾರಣ ಹಾಗೂ ಮಸೂದೆಗಳ ಮಂಡನೆಗೆ ಆಯ್ದುಕೊಂಡಿರುವ ಸಂದರ್ಭದ ಕುರಿತು ಸರ್ಕಾರ ವಿವರಣೆ ನೀಡಬೇಕಾಗಿದೆ. ಎರಡು ಪ್ರಮುಖ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ, ಚುನಾವಣೆ ಯಲ್ಲಿ ಮಹಿಳಾ ಮತದಾರರು ಪ್ರಮುಖ ಪಾತ್ರವಹಿಸಲಿದ್ದಾರೆ. ಇಂಥ ಸಂದರ್ಭದಲ್ಲಿ ಮಹಿಳಾ ಪ್ರಾತಿನಿಧ್ಯದ ಕಾನೂನಿನ ಬಗ್ಗೆ ಮಾತನಾಡುವುದು ಚುನಾವಣಾ ನೀತಿಸಂಹಿತೆಯ ಉಲ್ಲಂಘನೆ ಆಗುವುದಿಲ್ಲವೆ ಸರ್ಕಾರದ ನಡೆಯನ್ನು 'ಐತಿಹಾಸಿಕ ಹೆಜ್ಜೆ' ಎಂದು ಬಣ್ಣಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಈ ಪ್ರಯತ್ನದಲ್ಲಿ ಎಲ್ಲಾ ಪಕ್ಷಗಳೂ ಕೈಜೋಡಿಸ ಬೇಕೆಂದುಕೋರಿದ್ದಾರೆ.



ಮಹಿಳಾ ಮಸೂದೆ ಅಂಗೀಕಾರಗೊಂಡ ಸಂದರ್ಭದಲ್ಲಿಯೇ ಬಹುತೇಕ ಪಕ್ಷಗಳು ಅದನ್ನು ಬೆಂಬಲಿಸಿದ್ದವು ಹಾಗೂ ಈಗಲೂ ಬೆಂಬಲಕ್ಕೆ ಬದ್ಧವಾಗಿವೆ. ಹೀಗಿರುವಾಗ, ಆ ಪಕ್ಷಗಳ ಗಮನಕ್ಕೆ ತಾರದೆ, ಸಮಾಲೋಚನೆ ನಡೆಸದೆ, ತಿದ್ದುಪಡಿ ಪ್ರಯತ್ನಕ್ಕೆ ಸರ್ಕಾರ ಮುಂದಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ತಿದ್ದುಪಡಿಯ ಅಗತ್ಯ ಏನೆಂಬುದನ್ನು ಪ್ರತಿಪಕ್ಷಗಳಿಗೆ ಮನವರಿಕೆ ಮಾಡಿಕೊಡುವುದು ಸರ್ಕಾರದ ಕರ್ತವ್ಯ. ಆದರೆ, ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತಗೆದುಕೊಳ್ಳುವ ಪ್ರಯತ್ನವನ್ನು ಸರ್ಕಾರ ನಡೆಸಿಲ್ಲ. ಮಹತ್ವದ ಶಾಸನಕ್ಕೆ ಸಂಬಂಧಿಸಿದಂತೆ ಸಂಸತ್ತಿನ ಒಳಗೆ ಹಾಗೂ ಹೊರಗೆ ಪಕ್ಷಗಳ ಒಮ್ಮತ ಅಥವಾ ಬಹುಮತದ ಅಗತ್ಯವಿದೆ. ವಿರೋಧ ಪಕ್ಷಗಳು ಸರ್ಕಾರವನ್ನು ಬೆಂಬಲಿಸುವಂತೆ ಒತ್ತಾಯ ಸೃಷ್ಟಿಸುವ ಅಥವಾ ಮಹಿಳಾ ಸಬಲೀಕರಣಕ್ಕೆ ಅಡ್ಡಿ ಉಂಟುಮಾಡುವ ಪರಿಸ್ಥಿತಿಯನ್ನು ಸರ್ಕಾರ ಸೃಷ್ಟಿಸಬಾರದು. ಮಹಿಳಾ ಮೀಸಲಾತಿಯ ಉದ್ದೇಶವನ್ನು ಬೆಂಬಲಿಸುವುದು ಎಂದರೆ, ಸರ್ಕಾರಕ್ಕೆ ಅನುಕೂಲಕರ ಸಮಯ, ಷರತ್ತುಗಳು ಮತ್ತು ಅದರ ರಾಜಕೀಯ ಲೆಕ್ಕಾಚಾರಗಳನ್ನು ಒಪ್ಪಿಕೊಳ್ಳುವುದು ಎನ್ನುವಂತೆ ಆಗಬಾರದು. ಮಹಿಳಾ ಮೀಸಲಾತಿಯ ವಿಷಯವನ್ನು ಕ್ಷೇತ್ರ ಮರುವಿಂಗಡಣೆಯ ಜೊತೆಗೆ ತಳಕು ಹಾಕಿರುವುದು ಕಳವಳಕಾರಿ ಬೆಳವಣಿಗೆ. ಮಹಿಳಾ ಪ್ರಾತಿನಿಧ್ಯವು ಜನಗಣತಿ ಅಥವಾ ಕ್ಷೇತ್ರ ಮರುವಿಂಗಡಣೆಯೊಂದಿಗೆ ತಾರ್ಕಿಕ ಸಂಬಂಧ ಹೊಂದಿಲ್ಲ. ಈಗ ಜನಸಂಖ್ಯೆಯ ಆಧಾರದ ಮೇಲೆ ನಡೆಸಲು ಉದ್ದೇಶಿಸಿರುವ ಪ್ರಕ್ರಿಯೆಯು ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ ಹಾಗೂ ಜನಸಂಖ್ಯಾ ನಿಯಂತ್ರಣ ಸಾಧಿಸಿರುವ ದಕ್ಷಿಣ ಭಾರತದ ರಾಜ್ಯಗಳ ಹಿತಾಸಕ್ತಿಗೆ ಧಕ್ಕೆ ಉಂಟು ಮಾಡುವಂತಿದೆ. 2011ರ ಜನಗಣತಿಯ ದತ್ತಾಂಶಗಳನ್ನು ಆಧರಿಸಿ ಶೇ 50ರಷ್ಟು ಲೋಕಸಭಾ ಸ್ಥಾನಗಳನ್ನು ಹೆಚ್ಚಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ. 2011ರ ಜನಗಣತಿಯೇ ಮರುವಿಂಗಡಣೆಗೆ ಏಕೆ ಆಧಾರವಾಗಬೇಕು ಎನ್ನುವ ಪ್ರಶ್ನೆಗೆ ಸರ್ಕಾರ ಉತ್ತರ ನೀಡಬೇಕಾಗಿದೆ. ಕ್ಷೇತ್ರಗಳ ಮರುವಿಂಗಡಣೆ ಎನ್ನುವುದು ಸಂಖ್ಯಾ ದೃಷ್ಟಿಯಿಂದ ಸ್ಥಾನಗಳ ಮರುಹೊಂದಾಣಿಕೆ ಮಾತ್ರ ಆಗಬಾರದು. ಆ ಪ್ರಕ್ರಿಯೆಯು ರಾಜಕೀಯ ಅಧಿಕಾರದ ಮರುವಿಂಗಡಣೆ ಹಾಗೂ ಸಮತೋಲನವನ್ನು ಆಧರಿಸಿರಬೇಕು. ರಾಜ್ಯಗಳು, ರಾಜಕೀಯ ಪಕ್ಷಗಳೊಂದಿಗಿನ ಸಮಾಲೋಚನೆ ಮತ್ತು ವ್ಯಾಪಕ ಸಾರ್ವಜನಿಕ ಚರ್ಚೆಯ ನಂತರವಷ್ಟೇ ಈ ಪ್ರಕ್ರಿಯೆ ಆರಂಭಗೊಳ್ಳಬೇಕು. ಮೂರು ದಿನಗಳ ವಿಶೇಷ ಅಧಿವೇಶನದ ಮೂಲಕ ಕ್ಷೇತ್ರಗಳ ಮರುವಿಂಗಡಣೆಯನ್ನು ದೇಶದ ಮೇಲೆ ಹೇರಬಾರದು. ಹಾಗೆಯೇ, ಕ್ಷೇತ್ರಗಳ ಮರುವಿಂಗಡಣೆಯ ಕಹಿ ಗುಳಿಗೆಗೆ ಸಿಹಿ ಲೇಪನದಂತೆ ಮಹಿಳಾ ಪ್ರಾತಿನಿಧ್ಯದ ವಿಷಯವನ್ನು ಸರ್ಕಾರ ಬಳಸಬಾರದು.

## ಫಟಾಫಟ್ ಅಂತ ಮಾಡಿ ಎಗ್ ಪೆಪ್ಪರ್ ಫ್ರೈ



ರಜೆ ಬಂದ್ರೆ ಸಾಕು ಮನೆಯಲ್ಲಿ ಎಲ್ಲರೂ ಇರುತ್ತಾರೆ. ಒಂದೇ ಕಡೆ ಎಲ್ರೂ ಇದ್ದರೆ ಸಾಕು ಏನಾದ್ರೂ ಸ್ಪೈಸಿಯಾಗಿ ತಿನ್ನೋಕೆ ಕೇಳುತ್ತಾರೆ. ಪ್ರತಿದಿನ ಅದೇ ತಿಂಡಿ ಅಂತ ಬೇಸರ ಮಾಡಿಕೊಂಡು ತಿನ್ನುವುದಿಲ್ಲ. ಹೀಗಾಗಿ ಬೇಗ ತಯಾರಾಗುವ ಎಗ್ ಪೆಪ್ಪರ್ ಫ್ರೈ ಮಾಡಿ ಬಾಯಿ ಚಪ್ಪರಿಸಿ. ಫಟಾಫಟ್ ಅಂತ ಮಾಡುವ ಸಿಂಪಲ್ ವಿಧಾನ..

**ಬೇಕಾಗುವ ಸಾಮಾಗ್ರಿಗಳು:** ಮೊಟ್ಟೆ 4, ಎಣ್ಣೆ 2-3 ಚಮಚ, ಮೆಣಸು 1 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಕೊತ್ತಂಬರಿ ಸೊಪ್ಪು -ಸ್ವಲ್ಪ, ಅರಿಶಿಣ ಚಿಟಿಕೆ

**ಮಾಡುವ ವಿಧಾನ:** ಮೊದಲಿಗೆ ನಾಲ್ಕು ಮೊಟ್ಟೆಗಳನ್ನು ಒಂದು ಕುಕ್ಕರ್‌ಗೆ ಹಾಕಿ, ಸ್ವಲ್ಪ ಉಪ್ಪು, ನೀರು ಹಾಕಿ ಒಂದು ವಿಶಲ್ ಕೂಗಿಸಿ ಬೇಯಿಸಿಕೊಳ್ಳಿ.

ಈಗ ಮೊಟ್ಟೆ ಬಿಡಿಸಿ ಒಂದು ಮೊಟ್ಟೆಯನ್ನು ಎರಡು ಭಾಗ ಮಾಡಿ ಕಟ್ ಮಾಡಿಕೊಳ್ಳಿ.

ಬಳಿಕ ಒಂದು ಪ್ಯಾನ್‌ಗೆ ಎರಡು ಚಮಚ ಎಣ್ಣೆ ಹಾಕಿ, ಬಿಸಿ ಆದ ಮೇಲೆ ಕಟ್ ಮಾಡಿದ್ದ ಮೊಟ್ಟೆಯನ್ನು ಇಟ್ಟು 1 ನಿಮಿಷ ಬೇಯಿಸಿಕೊಳ್ಳಿ. ನಂತರ ಮೊಟ್ಟೆಯನ್ನು ಉಲ್ಟಾ ಮಾಡಿ ಸ್ವಲ್ಪ ಬ್ರೌನ್ ಬಣ್ಣ ಬರುವರೆಗೆ ಬೇಯಿಸಿಕೊಳ್ಳಿ. ಈಗ ಕಡಿಮೆ ಉರಿ ಇಟ್ಟು ಅದರ ಮೇಲೆ ಚಿಟಿಕೆ ಅರಿಶಿಣ ಉದುರುಸಿ. ಈಗ ಮೆಣಸು ಮತ್ತು ಉಪ್ಪನ್ನು ಪುಡಿ ಮಾಡಿಕೊಂಡು ಮೊಟ್ಟೆಯ ಮೇಲೆ ಉದುರಿಸಿ. ಮತ್ತೆ ಮೊಟ್ಟೆಯನ್ನು ಉಲ್ಟಾ ಮಾಡಿ ಮೆಣಸು ಮತ್ತು ಉಪ್ಪಿನ ಪುಡಿ ಉದುರಿಸಿ. ನಂತರ ಸಣ್ಣಗೆ ಕಟ್ ಮಾಡಿದ್ದ ಕೊತ್ತಂಬರಿ ಸೊಪ್ಪನ್ನು ಹಾಕಿದರೆ ಸ್ಪೈಸಿ ಸ್ಪೈಸಿಯಾಗಿ ಎಗ್ ಪೆಪ್ಪರ್ ಫ್ರೈ ತಿನ್ನಲು ಸಿದ್ಧ.



ನಾ ಕಂಡಂತೆ

ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಆಧ್ಯಾತ್ಮದ ವೈಭವ, ಅಭಿವೃದ್ಧಿಯ ದಿಕ್ಕು

## ಆದಿಚುಂಚನಗಿರಿ ಭೈರವೈಕ್ಯ ಮಂದಿರ ಲೋಕಾರ್ಪಣೆಯ ಇತಿಹಾಸ ಕ್ಷಣ

ಕರ್ನಾಟಕದ ಆಧ್ಯಾತ್ಮಿಕ ಪರಂಪರೆಯಲ್ಲಿ ಮಹತ್ವದ ಸ್ಥಾನವನ್ನು ಹೊಂದಿರುವ ಆದಿಚುಂಚನಗಿರಿ ಮಠ ಇಂದು ಮತ್ತೊಂದು ಸುವರ್ಣ ಕ್ಷಣಕ್ಕೆ ಸಾಕ್ಷಿಯಾಗಿದೆ. ಡಾ. ಬಾಲಗಂಗಾಧರನಾಥ ಸ್ವಾಮೀಜಿಗಳ ಐಕ್ಯಸ್ಥಳದಲ್ಲಿ ನಿರ್ಮಾಣಗೊಂಡ ಗುರು ಭೈರವೈಕ್ಯ ಮಂದಿರದ ಲೋಕಾರ್ಪಣೆ, ದೇಶದ ಪ್ರಧಾನಿ ನರೇಂದ್ರ ಮೋದಿ ಅವರಿಂದ ನೆರವೇರಿರುವುದು ಈ ಘಟನೆಯನ್ನು ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ಅಚ್ಚಳಿಯದಂತೆ ಮಾಡಿದೆ. ಈ ಮಹೋತ್ಸವವು ಕೇವಲ ಧಾರ್ಮಿಕ ಕಾರ್ಯಕ್ರಮವಷ್ಟೇ ಅಲ್ಲ, ಆಧ್ಯಾತ್ಮ ಮತ್ತು ಅಭಿವೃದ್ಧಿಯ ಸಮನ್ವಯದ ಸಂಕೇತವಾಗಿದೆ.

ಸುಮಾರು 80 ಕೋಟಿ ರೂಪಾಯಿ ವೆಚ್ಚದಲ್ಲಿ ದಶಕದ ಕಾಲದ ಪರಿಶ್ರಮದಿಂದ ನಿರ್ಮಿಸಲಾದ ಈ ಮಂದಿರವು ದ್ರಾವಿಡ, ಹೊಯ್ಸಳ, ಚಾಲುಕ್ಯ ಮತ್ತು ಚೋಳರ ಶೈಲಿಗಳ ಸಂಯೋಜನೆಯ ಮೂಲಕ ವೈಶಿಷ್ಟ್ಯತೆಯನ್ನು ಹೊಂದಿದೆ. ಈ ಮಂದಿರವು ಕೇವಲ ಕಟ್ಟಡವಲ್ಲ, ಅದು ಶತಮಾನಗಳ ಸಂಸ್ಕೃತಿ, ಪರಂಪರೆ ಮತ್ತು ಭಕ್ತಿಯ ಪ್ರತಿರೂಪವಾಗಿದೆ. ವಿಶೇಷವಾಗಿ, 71ನೇ ಪೀಠಾಧಿಪತಿಯಾಗಿದ್ದ ಬಾಲಗಂಗಾಧರನಾಥ ಸ್ವಾಮೀಜಿ ಅವರ ಸೇವಾ ಪರಂಪರೆಯನ್ನು ಸ್ಮರಿಸುವ ಉದ್ದೇಶದಿಂದ ನಿರ್ಮಾಣಗೊಂಡಿರುವುದು ಇದರ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿದೆ.

ಪ್ರಧಾನಿ ಮೋದಿ ಅವರು ಮಠಕ್ಕೆ ಆಗಮಿಸಿದಾಗ ಮೊದಲು ಕಾಲಭೈರವೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿದ್ದು, ಅವರ ಭಕ್ತಿ ಮತ್ತು ಸಂಪ್ರದಾಯದ ಮೇಲಿನ ಗೌರವವನ್ನು ತೋರಿಸುತ್ತದೆ. ಈ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಭಕ್ತರ ಅಪಾರ ಸಂಖ್ಯೆಯ ಭಾಗವಹಿಸುವಿಕೆ ಈ ಕಾರ್ಯಕ್ರಮದ ಭವ್ಯತೆಯನ್ನು ಮತ್ತಷ್ಟು ಹೆಚ್ಚಿಸಿತು.

ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಅವರು ತಮ್ಮ ಭಾಷಣದಲ್ಲಿ ಆಧ್ಯಾತ್ಮದೊಂದಿಗೆ ದೇಶದ ಆರ್ಥಿಕತೆ ಮತ್ತು ಅಭಿವೃದ್ಧಿಯ ಮಹತ್ವವನ್ನು ಒತ್ತಿಹೇಳಿದರು. ಅವರ ಮಾತುಗಳಲ್ಲಿ, ''ಅಭಿವೃದ್ಧಿ ಎಂದರೆ ಕೇವಲ ಮೂಲಸೌಕರ್ಯಗಳ ನಿರ್ಮಾಣವಲ್ಲ, ಅದು ಜನರ ಜೀವನಮಟ್ಟದ ಏರಿಕೆಯಾಗಬೇಕು'' ಎಂಬ ಸಂದೇಶ ಸ್ಪಷ್ಟವಾಗಿತ್ತು. ಈ ಮಾತುಗಳು ದೇಶದ ಮುಂದಿನ ದಿಕ್ಕಿಗೆ ದಾರಿದೀಪವಾಗುವಂತಿವೆ.



ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ಹಳೆ ಮೈಸೂರು ಪ್ರಾಂತ್ಯದ ವಿಶೇಷ ಆಹಾರವಾದ ರಾಗಿ ಮುದ್ದೆಯ ಮಹತ್ವವನ್ನು ಪ್ರಸ್ತಾಪಿಸಿದರು. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಜೀವನಶೈಲಿಯನ್ನು ಉದಾಹರಿಸಿ, ರಾಗಿಯ ಪೌಷ್ಟಿಕಾಂಶದ ಮಹತ್ವವನ್ನು ಯುವಜನತೆಗೆ ತಿಳಿಸಿದರು. 94 ವರ್ಷಗಳ ವಯಸ್ಸಿನಲ್ಲಿಯೂ ಸಕ್ರಿಯವಾಗಿರುವ ದೇವೇಗೌಡರ ಆರೋಗ್ಯದ ಹಿಂದೆ ರಾಗಿಯ ಪಾತ್ರವನ್ನು ಅವರು ಪ್ರಶಂಸಿಸಿದರು. ಇದು ನಮ್ಮ ಸ್ಥಳೀಯ ಆಹಾರ ಪದ್ಧತಿಯ ಮಹತ್ವವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಕಾರ್ಯಕ್ರಮದ ನಂತರ ನಡೆದ ಸಭೆಯಲ್ಲಿ, ನಾಯಕರು ಮತ್ತು ಧಾರ್ಮಿಕ ಮುಖಂಡರು ಮಾತನಾಡಿ ಬಾಲ ಗಂಗಾಧರನಾಥ ಸ್ವಾಮೀಜಿಗಳ ಸೇವೆಯನ್ನು ಸ್ಮರಿಸಿದರು. ಸಣ್ಣ ಮಠವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದ ಅವರ ದೀರ್ಘದೃಷ್ಟಿ ಮತ್ತು ಸಮಾಜಮುಖಿ ಚಟುವಟಿಕೆಗಳು ಎಲ್ಲರಿಗೂ ಮಾದರಿಯಾಗಿದೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಅವರ ಕೊಡುಗೆ ಅಪಾರವಾಗಿದೆ.

ಈ ಮಹೋತ್ಸವದಲ್ಲಿ ಜನಸಾಗರವೇ ನೆರೆದಿದ್ದು, ''ಮೋದಿ ಮೋದಿ'' ಎಂಬ ಘೋಷಣೆಗಳು ವಾತಾವರಣವನ್ನು ಗರ್ಜಿಸುವಂತೆ ಮಾಡಿತು. ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದು, ಈ ಕಾರ್ಯಕ್ರಮವನ್ನು ಇನ್ನಷ್ಟು ಐತಿಹಾಸಿಕವಾಗಿಸಿದೆ. ಕಾರ್ಯಕ್ರಮದ ಸಂಘಟನೆಯೂ ಅಚ್ಚುಕಟ್ಟಾಗಿದ್ದು, ಎಲ್ಲರ ಮನಸ್ಸನ್ನು ಗೆದ್ದಿತು. ಒಟ್ಟಿನಲ್ಲಿ, ಗುರು ಭೈರವೈಕ್ಯ ಮಂದಿರದ ಲೋಕಾರ್ಪಣೆ ಕೇವಲ ಒಂದು ಉದ್ಘಾಟನಾ ಸಮಾರಂಭವಲ್ಲ; ಅದು ನಮ್ಮ ಸಂಸ್ಕೃತಿ, ಭಕ್ತಿ ಮತ್ತು ಅಭಿವೃದ್ಧಿಯ ಒಗ್ಗಟ್ಟಿನ ಪ್ರತಿಬಿಂಬವಾಗಿದೆ. ಆಧ್ಯಾತ್ಮದ ನೆಲೆಯಲ್ಲಿ ಅಭಿವೃದ್ಧಿಯ ಮಾರ್ಗವನ್ನು ತೋರಿಸುವ ಈ ಮಹತ್ವದ ಕ್ಷಣ, ಕರ್ನಾಟಕದ ಜನತೆಗೆ ಹೆಮ್ಮೆ ತರುವುದರೊಂದಿಗೆ, ದೇಶದ ಪ್ರಗತಿಯ ಸಂಕೇತವಾಗಿಯೂ ಉಳಿಯಲಿದೆ.



# ಪೈಲ್ವಾನರ ಪಾಲಿನ ಅದ್ಭುತ ಕಸರತ್ತು ವೃಶ್ಚಿಕ ದಂಡ




ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಭಾರತೀಯ ಕ್ರೀಡಾ ಸಂಸ್ಕೃತಿಯಲ್ಲಿ ಗರಡಿ ಮನೆ ಎನ್ನುವುದು ಕೇವಲ ಶಕ್ತಿ ಪ್ರದರ್ಶನದ ತಾಣವಲ್ಲ; ಅದು ದೇಹವನ್ನೇ ದೇವಸ್ಥಾನವೆಂದು ಭಾವಿಸಿ ಪೂಜಿಸುವ ಶ್ರದ್ಧಾ ಕೇಂದ್ರ. ಅಖಾಡದ ಕೆಮ್ಮಣ್ಣಿನಲ್ಲಿ ಮೈತೇಯ್ದ ಪೈಲ್ವಾನರ ವಜ್ರದೇಹದ ಹಿಂದೆ ಸಾವಿರಾರು ವರ್ಷಗಳ ದೇಸಿ ವಿಜ್ಞಾನ ಅಡಗಿದೆ. ಅಂತಹ ಅಪೂರ್ವ ಕೌಶಲಗಳಲ್ಲಿ ಅತ್ಯಂತ ರೋಚಕವಾದುದು ವೃಶ್ಚಿಕ ದಂಡ ಶರೀರವನ್ನು ಬಿಲ್ಲಿನಂತೆ ಬಗ್ಗಿಸಿ, ಚೇಳಿನ ತೀಕ್ಷ್ಣತೆಯನ್ನು ಮೈಗೂಡಿಸಿಕೊಳ್ಳುವ ಈ ಕಸರತ್ತು ಪೈಲ್ವಾನರ ಪಾಲಿನ ಅದ್ಭುತ ವರಪ್ರಸಾದ.

ನಮ್ಮ ಪೂರ್ವಜರು ಪ್ರಕೃತಿಯ ಚಲನವಲನಗಳನ್ನು ಗಮನಿಸಿ ವ್ಯಾಯಾಮದ ಸ್ವರೂಪಗಳನ್ನು ನಿರ್ಧರಿಸುತ್ತಿದ್ದರು. ಕಾಡಿನ ಪ್ರಾಣಿಗಳ ಆಕ್ರಮಣಕಾರಿ ಶೈಲಿ ಮತ್ತು ಸ್ವರಕ್ಷಣೆಯ ತಂತ್ರಗಳನ್ನೇ ವ್ಯಾಯಾಮವಾಗಿ ರೂಪಿಸಿದ ಕೀರ್ತಿ ಭಾರತೀಯ ಕುಸ್ತಿ ಪರಂಪರೆಗೆ ಸಲ್ಲುತ್ತದೆ. ಚೇಳು ಅಪಾಯದ ಸುಳಿವು ಸಿಕ್ಕಾಗ ತನ್ನ ಕೊಂಡಿಯನ್ನು ಬೆನ್ನಿನ ಮೇಲೆ ಲೀಲಾಜಾಲವಾಗಿ ಬಾಗಿಸಿ ಎತ್ತಿಹಿಡಿಯುವ ಭಂಗಿಯೇ ವೃಶ್ಚಿಕ ದಂಡದ ಜೀವಾಳ. ಇದು ಕೇವಲ ಮಾಂಸಖಂಡಗಳ ವಿಸ್ತರಣೆಯಲ್ಲ, ಬದಲಾಗಿ ಶರೀರದ ಆಂತರಿಕ ಶಕ್ತಿಯನ್ನು ಜಾಗೃತಗೊಳಿಸುವ ಪ್ರಕ್ರಿಯೆ. ವೃಶ್ಚಿಕ ದಂಡವನ್ನು ಮಾಡುವ ಕ್ರಮವೇ ಒಂದು ಕಣ್ಣಿಗೆ ಹಬ್ಬ.




ಉದಯವಾಹಿನಿ ಚಿತ್ರ

ಮೊದಲು ಹಸ್ತಗಳನ್ನು ಭೂಮಿಗೆ ಭದ್ರವಾಗಿ ಊರಿ ಶರೀರವನ್ನು ಸ್ಥಿರಗೊಳಿಸಬೇಕು. ದೇಹವನ್ನು ನೆಲದತ್ತ ತಗ್ಗಿಸುವ ಕ್ಷಣದಲ್ಲಿ, ಒಂದು ಕಾಲನ್ನು ಮಂಡಿಯಿಂದ ಮಡಚಿ ನಿಧಾನವಾಗಿ ತಲೆಯ ಹಿಂಭಾಗಕ್ಕೆ ಕಮಾನಿನಂತೆ ಚಾಚಬೇಕು. ಇಲ್ಲಿ ಶರೀರವು ಚೇಳಿನ ಆಕೃತಿಯನ್ನು ಪಡೆಯುತ್ತದೆ. ಪ್ರತಿ ಬಾರಿ ಕಾಲುಗಳನ್ನು ಅದಲುಬದಲು ಮಾಡುವುದರಿಂದ ಇಡೀ ದೇಹದ ತೂಕವು ಸಮನಾಗಿ ಹಂಚಿಕೆಯಾಗುತ್ತದೆ. ಈ ಕ್ರಮಬದ್ಧ ಚಲನೆಯು ಅಖಾಡದಲ್ಲಿ ಪೈಲ್ವಾನನಿಗೆ ಅತ್ಯಂತ ಸೊಬಗನ್ನು ನೀಡುತ್ತದೆ. ಕುಸ್ತಿ ಮೈದಾನದಲ್ಲಿ ಎದುರಾಳಿಯ ಸವಾರಿ ಪಟ್ಟಿನಿಂದ ತಪ್ಪಿಸಿಕೊಳ್ಳಲು ಬೆನ್ನುಮೂಳೆ ರಬ್ಬರ್‌ನಂತೆ ಸರಾಗವಾಗಿ ಬಗ್ಗಬೇಕು. ವೃಶ್ಚಿಕ ದಂಡವು ನೇರವಾಗಿ ಬೆನ್ನಿನ ಸ್ನಾಯುಗಳನ್ನು ಗುರಿಯಾಗಿಸುತ್ತದೆ. ಕಾಲನ್ನು ಹಿಂದಕ್ಕೆ ಎತ್ತುವುದರಿಂದ ಬೆನ್ನುಮೂಳೆಯ ಮಣಿಕಟ್ಟುಗಳ ನಡುವೆ ಸಂಕೋಚನ ದೂರವಾಗಿ, ನರಗಳ ಸಂವಹನ ಸುಗಮವಾಗುತ್ತದೆ. ಇದು ಪೈಲ್ವಾನನಿಗೆ ಅಸಾಮಾನ್ಯ ಪ್ರತಿವರ್ತನ ಶಕ್ತಿಯನ್ನು ನೀಡುತ್ತದೆ. ಬೆನ್ನುಮೂಳೆ ಸದೃಢವಾಗಿದ್ದಷ್ಟೂ ವಯೋಸಹಜ ದೈಹಿಕ ಜಡತ್ವ ದೂರವಾಗುತ್ತದೆ. ಈ ವ್ಯಾಯಾಮವು ಕೇವಲ ಬಲವನ್ನು ಅಳೆಯುವುದಿಲ್ಲ, ಬದಲಾಗಿ ದೇಹದ ಸಮತೋಲನವನ್ನು ಪರೀಕ್ಷಿಸುತ್ತದೆ. ಒಂದು ಕಾಲು ಗಾಳಿಯಲ್ಲಿದ್ದಾಗ, ಇಡೀ ದೇಹದ ತೂಕವನ್ನು ಕೇವಲ ಮೂರು ಬಿಂದುಗಳ ಮೇಲೆ ಸ್ಥಿರವಾಗಿರಿಸುವುದು ಸಾಹಸವೇ ಸರಿ. ಈ ಅಭ್ಯಾಸವು ಮಿದುಳಿನ 'ಸೆರೆಬೆಲ್ಲಮ್' ಭಾಗವನ್ನು ಚುರುಕುಗೊಳಿಸುತ್ತದೆ.

ಅಖಾಡದಲ್ಲಿ ಎದುರಾಳಿಯು ಕಾಲನ್ನು ಎಳೆದು ಸಮತೋಲನ ಕೆಡಿಸಲು ಯತ್ನಿಸಿದಾಗ, ವೃಶ್ಚಿಕ ದಂಡ ಸಿದ್ಧಿಸಿಕೊಂಡ ಪೈಲ್ವಾನನು ಬೀಳದಂತೆ ತನ್ನನ್ನು ತಾನು ಕ್ಷಣಾರ್ಧದಲ್ಲಿ ಸಾವರಿಸಿಕೊಳ್ಳಬಲ್ಲ. ವೃಶ್ಚಿಕ ದಂಡದಿಂದ ಉಂಟಾಗುವ ಸ್ನಾಯುಗಳ ಬೆಳವಣಿಗೆಯು ಆಧುನಿಕ ಜಿಮ್ ಕಸರತ್ತುಗಳಿಗಿಂತ ಭಿನ್ನ. ಇದು ಸ್ನಾಯುಗಳ ಗಾತ್ರಕ್ಕಿಂತ ಅವುಗಳ ಸಾಂದ್ರತೆಯನ್ನು ಹೆಚ್ಚಿಸುತ್ತದೆ. ತೋಳುಗಳು, ಭುಜಗಳು ಮತ್ತು ಕಿಬ್ಬೊಟ್ಟೆಯ ಸ್ನಾಯುಗಳು ಉಕ್ಕಿನ ಕವಚದಂತೆ ಗಟ್ಟಿಯಾಗುತ್ತವೆ. ಇದೊಂದು ಸಂಪೂರ್ಣ ಶರೀರ ಕಸರತ್ತು ಆಗಿರುವುದರಿಂದ, ಪ್ರತಿ ಅಂಗವೂ ಸಕ್ರಿಯವಾಗಿ ಪಾಲ್ಗೊಳ್ಳುತ್ತದೆ. ಇದು ಪೈಲ್ವಾನನಿಗೆ ಮಣ್ಣಿನಲ್ಲಿ ಕುಳಿತು ಪಟ್ಟುಗಳನ್ನು ಹಾಕುವಾಗ ಹೆಚ್ಚಿನ ಸ್ಫೋಟಕ ಶಕ್ತಿಯನ್ನು ನೀಡುತ್ತದೆ. ವೃಶ್ಚಿಕ ದಂಡವು ಪರಿಣಿತರ ಮಾರ್ಗದರ್ಶನದಲ್ಲಿ ಮಾಡಬೇಕಾದ ಕೌಶಲ. ಇದನ್ನು ಅಭ್ಯಾಸ ಮಾಡುವಾಗ ಕೆಲವು ಅಂಶಗಳು ಮುಖ್ಯ.

ಬೆನ್ನು ಮತ್ತು ಸೊಂಟದ ಸ್ನಾಯುಗಳನ್ನು ಸಡಿಲಗೊಳಿಸುವ ವಾರ್ಮ್- ಅಪ್ ಕಡ್ಡಾಯ, ಗಾಯಗಳನ್ನು ತಪ್ಪಿಸಲು ಗರಡಿ ಮನೆಯ ಮೆತ್ತನೆಯ ಮಣ್ಣಿನ ಅಖಾಡ ಅಥವಾ ಗುಣಮಟ್ಟದ ಮ್ಯಾಟ್ ಬಳಸುವುದು ಕ್ಷೇಮ,ದೇಹವನ್ನು ಕೆಳಕ್ಕೆ ತರುವಾಗ ಉಸಿರು ತೆಗೆದುಕೊಳ್ಳುವುದು ಮತ್ತು ಮೇಲೆ ಏಳುವಾಗ ಉಸಿರು ಬಿಡುವುದು ಅತ್ಯಗತ್ಯ. ಇಂದು ಜಗತ್ತು ಕ್ಯಾಲಿಸ್ಥೆನಿಕ್ಸ್ ಮತ್ತು ಯೋಗದ ಬಗ್ಗೆ ಬೆರಗಿನಿಂದ ನೋಡುತ್ತಿದೆ.

ಆದರೆ ನಮ್ಮ ಹಿರಿಯ ಪೈಲ್ವಾನರು ಶತಮಾನಗಳ ಹಿಂದೆಯೇ ವೃಶ್ಚಿಕ ದಂಡದ ಮೂಲಕ ಇವೆರಡನ್ನೂ ಸಮೀಕರಿಸಿದ್ದರು. ಇದು ಕೇವಲ ಒಂದು ವ್ಯಾಯಾಮವಲ್ಲ, ಬದಲಾಗಿ ಮಣ್ಣಿನ ಮಗನ ದೈಹಿಕ ಬದ್ಧತೆಯ ಸಂಕೇತ. ಇಂದಿನ ಕ್ರೀಡಾಪಟುಗಳು ನಮ್ಮ ಈ ದೇಸಿ ವಿಜ್ಞಾನವನ್ನು ಅಳವಡಿಸಿಕೊಂಡರೆ, ವಜ್ರದೇಹಿಗಳಾಗಿ ಹೊರ ಹೊಮ್ಮಬಹುದು. ನಮ್ಮ ಮೂಲ ಪರಂಪರೆಯನ್ನು ಗೌರವಿಸುವುದೇ ನಾವು ಕ್ರೀಡಾ ಜಗತ್ತಿಗೆ ನೀಡುವ ದೊಡ್ಡ ಕೊಡುಗೆ.

# ಗುರು-ಶಿಷ್ಯ ಪರಂಪರೆಗೆ 'ಎಐ' ಸವಾಲು

## ತರಗತಿಯಲ್ಲಿ ಯಂತ್ರ ಮತ್ತು ಮನುಷ್ಯನ ನಡುವಿನ ಪೈಪೋಟಿ

• ಮಾನಸಪ್ರವೀಣ್ ಭಟ್

ಶಿಕ್ಷಣ ಎಂಬುದು ಕೇವಲ ಅಕ್ಷರಭ್ಯಾಸವಲ್ಲ, ಅದೊಂದು ಜೀವನ ಸಂಸ್ಕಾರದ ಪ್ರಕ್ರಿಯೆ. ಇಂದಿನ ಆಧುನಿಕ ಕಾಲಘಟ್ಟದಲ್ಲಿ ಕೃತಕ ಬುದ್ಧಿ, ಮಾಹಿತಿಯು ಮಹಾಪೂರವನ್ನೇ ಹರಿಸುತ್ತಿದೆ. ತಾಂತ್ರಿಕ ಜ್ಞಾನಾರ್ಜನೆಯಲ್ಲಿ ಎಐ ಪ್ರಭಾವಶಾಲಿ ಎನಿಸಿದರೂ, ವ್ಯಕ್ತಿತ್ವ ನಿರ್ಮಾಣದ ಮೂಲಾಧಾರವಾದ 'ನೈತಿಕ ಮೌಲ್ಯ'ಗಳ ವಿಚಾರದಲ್ಲಿ ಅದು ಸಂಪೂರ್ಣವಾಗಿ ವಿಫಲವಾಗುತ್ತದೆ.

**ಬೌದ್ಧಿಕ ಕೌಶಲ ಮತ್ತು ವಿವೇಚನಾ ಶಕ್ತಿ:** ಎಐ ಕೇವಲ ದತ್ತಾಂಶಗಳ ಸಮೂಹ. ಅದು ಮಾಹಿತಿಯನ್ನು ವಿಶ್ಲೇಷಿಸಿ ಮಂಡಿಸಬಲ್ಲದೇ ಹೊರತು, ಸರಿ-ತಪ್ಪುಗಳ ನಡುವಿನ ಸೂಕ್ಷ್ಮ 'ವಿವೇಚನೆ'ಯನ್ನು ಹೊಂದಿಲ್ಲ. ನೈತಿಕತೆಯು ಕೇವಲ ಸಿದ್ಧಾಂತವಲ್ಲ, ಅದು ಅಂತರಾತ್ಮದ ಧ್ವನಿ. ಯಾಂತ್ರಿಕ ಪ್ರಜ್ಞೆಗೆ ತರ್ಕವಿದೆ ಆದರೆ 'ತತ್ವ'ವಿಲ್ಲ. ಹೀಗಾಗಿ, ಅದು ಪಠ್ಯವನ್ನು ಬೋಧಿಸಬಲ್ಲದು, ಆದರೆ ಸತ್ಯನಿಷ್ಠೆಯನ್ನು ಬಿತ್ತಲಾರದು. **ಸಹಾನುಭೂತಿ, ಭಾವನಾತ್ಮಕ ಸ್ಪರ್ಶ:** ಮಗುವಿನ ಮಾನಸಿಕ ವಿಕಾಸಕ್ಕೆ ಶಿಕ್ಷಕರ 'ಭಾವನಾತ್ಮಕ ಬುದ್ಧಿವಂತಿಕೆ' ಅತ್ಯಗತ್ಯ. ಮಗುವು ಸಂಕಷ್ಟದಲ್ಲಿದ್ದಾಗ, ದ್ವಂದ್ವದಲ್ಲಿದ್ದಾಗ ಶಿಕ್ಷಕರು ತೋರುವ ಮರುಕ, ಪ್ರೀತಿ, ಅನುಕಂಪವು ಮಗುವಿನ ನೈತಿಕ ದಾರಿಗೆ ಬೆಳಕಾಗುತ್ತದೆ. ಸಂವೇದನಾಶೂನ್ಯವಾದ ಕೃತಕ ಬುದ್ಧಿಮತ್ತೆಯು ಬೋಧನೆಯಲ್ಲಿ 'ಯಾಂತ್ರಿಕ ನಿಖರತೆ'ಯನ್ನು ಮೆರೆಯಬಹುದಾದರೂ, ಮಾನವೀಯ ಸಂಬಂಧಗಳ 'ಆರ್ದ್ರತೆ'ಯನ್ನು ತರಲು ಅಸಮರ್ಥವಾಗಿದೆ.

**ಆದರ್ಶಗಳ ಅನುಕರಣೆ:** ಶಿಕ್ಷಣದಲ್ಲಿ 'ಗುರು' ಎನ್ನುವವರು ಕೇವಲ ಬೋಧಕರಲ್ಲ, ಬದಲಾಗಿ ಒಂದು ಆದರ್ಶ ಮಾದರಿ. ಸಂಸ್ಕೃತಿ, ಸಂಸ್ಕಾರ ಮತ್ತು ಸಾಮಾಜಿಕ ಹೊಣೆಗಾರಿಕೆಗಳು ಅನುಕರಣೆಯ ಮೂಲಕ ರಕ್ತಗತವಾಗುತ್ತವೆ. ಯಂತ್ರವೊಂದು ಶಿಸ್ತನ್ನು ವ್ಯಾಖ್ಯಾನಿಸಬಹುದು, ಆದರೆ ತಾನು ಶಿಸ್ತಿನಿಂದ ಬದುಕಿ ಮೌಲ್ಯಗಳನ್ನು ಸಾದರಪಡಿಸಲು ಅದಕ್ಕೆ ಪ್ರಾಣಶಕ್ತಿಯಿಲ್ಲ. ನೈತಿಕತೆಯು ಜೀವಂತ ವ್ಯಕ್ತಿತ್ವದ ಸಂಪರ್ಕದಿಂದ ಹರಡುವಂತಹದ್ದೇ ಹೊರತು ಸಾಫ್ಟ್‌ವೇರ್ ಮೂಲಕ ಡೌನ್‌ಲೋಡ್ ಮಾಡುವಂತಹುದಲ್ಲ. ತಾಂತ್ರಿಕ ಕುಶಲತೆಯಲ್ಲಿ ಎಐ ಅಗ್ರಸ್ಥಾನ ಪಡೆಯಬಹುದು, ಆದರೆ ಸಮಾಜಕ್ಕೆ ಬೇಕಿರುವುದು ಕೇವಲ ಬುದ್ಧಿವಂತರಲ್ಲ, ಬದಲಾಗಿ 'ಗುಣವಂತರು'. ಯಂತ್ರಗಳು ಮಾಹಿತಿಯ ವಾಹಕಗಳಾಗಬಲ್ಲವು, ಆದರೆ ಮೌಲ್ಯಗಳ ಸಂವಹನಕ್ಕೆ ಚೈತನ್ಯಶೀಲವಾದ ಮಾನವ ಮನಸ್ಸೇ ಬೇಕು. ಶೈಕ್ಷಣಿಕ ಪ್ರಗತಿಗೆ ತಂತ್ರಜ್ಞಾನ 'ಉಪಕರಣ'ವಾಗಲಿ, ಆದರೆ ಅದು ಎಂದಿಗೂ ಗುರುವಿನ 'ಪರ್ಯಾಯ'ವಾಗಬಾರದು.ಅನಾದಿ ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಗುರು-ಶಿಷ್ಯರ ಸಂಬಂಧಕ್ಕೆ ಅತ್ಯಂತ ಪವಿತ್ರವಾದ ಮತ್ತು ಉನ್ನತವಾದ ಸ್ಥಾನವಿದೆ. ಕೇವಲ ಯಂತ್ರದ ಮೇಲಿನ ಮೋಹಕ್ಕೆ ಕೈ ಹಿಡಿದು ತಿದ್ದುತ್ತಿದ್ದ ಗುರುಗಳನ್ನು



ಉದಯವಾಹಿನಿ ಚಿತ್ರ

### ಅಕ್ಷಯ ತದಿಗೆಯ ದಿನ ದಾನ ಮಾಡುವುದರಿಂದ ಏನು ಲಾಭವಾಗುತ್ತದೆ?

**ದಾನ ಮಾಡುವುದರಿಂದ ಪುಣ್ಯವು ಸಿಗುತ್ತದೆ. ಅಕ್ಷಯ ತದಿಗೆಯ ದಿನ ಮಾಡಿದ ದಾನವು ಯಾವಾಗಲೂ ಕ್ಷಯವಾಗುವುದಿಲ್ಲ.ಅಕ್ಷಯ ತದಿಗೆಯ ದಿನ ಮಾಡಿದ ದಾನದಿಂದ ಬಹಳಷ್ಟು ಪುಣ್ಯ ಸಿಗುತ್ತದೆ. ಬಹಳಷ್ಟು ಪುಣ್ಯವು ಲಭಿಸುವುದರಿಂದ ವ್ಯಕ್ತಿಯ ಪುಣ್ಯದ ಸಂಗ್ರಹವು ಹೆಚ್ಚಾಗುತ್ತದೆ. ಯಾವುದಾದರೊಂದು ಜೀವದ ಹಿಂದಿನ ಕರ್ಮಗಳು ಒಳ್ಳೆಯದಾಗಿದ್ದರೆ ಅವನ ಪುಣ್ಯದ ಸಂಗ್ರಹವು ಹೆಚ್ಚಾಗುತ್ತದೆ. ಇದರಿಂದ ಅವನಿಗೆ ಸ್ವರ್ಗಪ್ರಾಪ್ತಿಯಾಗಬಹುದು. ಎಲ್ಲಿ ಅಧ್ಯಾತ್ಮದ ಪ್ರಸಾರದ ಜೊತೆಗೆ ರಾಷ್ಟ್ರ ಮತ್ತು ಧರ್ಮಗಳಿಗಾಗಿ ಕಾರ್ಯ ಮಾಡಲಾಗುತ್ತದೆಯೋ, ಇಂತಹ ಸತ್‌ಕಾರ್ಯಗಳಿಗೆ ದಾನ ಮಾಡುವುದೆಂದರೆ ಸತ್ಪಾತ್ರೇ ದಾನ. ಸತ್ಪಾತ್ರರಿಗೆ ದಾನ ಮಾಡುವುದರಿಂದ ದಾನ ಮಾಡುವವನಿಗೆ ಪುಣ್ಯವು ಸಿಗದೆ ದಾನದ ಕರ್ಮವು ಅಕರ್ಮ ಕರ್ಮವಾಗುತ್ತದೆ.**

ಅಕ್ಷಯ ತೃತೀಯಾದಂದು ಇಡೀ ದಿನ ಶುಭ ಮುಹೂರ್ತವೇ ಆಗಿರುತ್ತದೆ; ಆದ್ದರಿಂದ ಈ ತಿಥಿಯಂದು ಧಾರ್ಮಿಕ ಕೃತಿಗಳನ್ನು ಮಾಡುವಾಗ ಮುಹೂರ್ತವನ್ನು ನೋಡಬೇಕಾಗುವುದಿಲ್ಲ. ಈ ದಿನದಂದು ಹಯಗ್ರೀವ ಅವತಾರ, ನರನಾರಾಯಣ ಪ್ರಕಟೀಕರಣ ಮತ್ತು ಪರಶುರಾಮನ ಅವತಾರವಾಗಿದೆ. ಈ ತಿಥಿಯಂದು ಬ್ರಹ್ಮ ಮತ್ತು ಶ್ರೀವಿಷ್ಣುವಿನ ಮಿಶ್ರ ಲಹರಿಗಳು ಉಚ್ಚ ದೇವತೆಗಳ ಲೋಕದಿಂದ ಪೃಥ್ವಿಯ ಮೇಲೆ ಬರುತ್ತವೆ. ಆದುದರಿಂದ ಪೃಥ್ವಿಯ ಮೇಲಿನ ಸಾತ್ತ್ವಿಕತೆಯು ಹೆಚ್ಚಾಗುತ್ತದೆ. ಈ ಕಾಲಮಹಾತ್ಮೆಯಿಂದಾಗಿ ಈ ತಿಥಿಯಂದು ಪವಿತ್ರ ಸ್ನಾನ, ದಾನಗಳಂತಹ ಧರ್ಮಕಾರ್ಯಗಳನ್ನು ಮಾಡಿದರೆ ಅವುಗಳಿಂದ ಹೆಚ್ಚು ಆಧ್ಯಾತ್ಮಿಕ ಲಾಭವಾಗುತ್ತದೆ. ಈ ತಿಥಿಯಂದು ದೇವತೆಗಳನ್ನು, ಪಿತೃಗಳನ್ನು ಉದ್ದೇಶಿಸಿ ಮಾಡಿದ ಎಲ್ಲಾ ಕರ್ಮಗಳೂ ಅಕ್ಷಯವಾಗುತ್ತವೆ.


# ಅಕ್ಷಯ ತೃತೀಯಾ ಏಕೆ ಮತ್ತು ಯಾವಾಗ ಆಚರಿಸುತ್ತೇವೆ ?

• ಶ್ರೀ. ವಿನೋದ್ ಕಾಮತ್

ಮೂರುವರೆ ಮುಹೂರ್ತಗಳ ಪೈಕಿ ಒಂದು ಪೂರ್ಣ ಮುಹೂರ್ತವಾಗಿರುವ ಅಕ್ಷಯ ತೃತೀಯಾದಲ್ಲಿ ಎಳ್ಳು ತರ್ಪಣೆ ನೀಡುವುದು, ಉದಕ ಕುಂಭದಾನ, ಮೃತ್ತಿಕಾ ಪೂಜೆ ಮಾಡುವುದು, ಅದೇರೀತಿ ದಾನ ನೀಡುವ ಪರಂಪರೆ ಇದೆ. ಇದರ ಹಿನ್ನೆಲೆಯ ಶಾಸ್ತ್ರವನ್ನು ನಾವು ತಿಳಿದುಕೊಳ್ಳೋಣ. ಇಲ್ಲಿ ಮಹತ್ವವಾದ ಅಂಶವೇನೆಂದರೆ, ಹಿಂದೂ ಧರ್ಮವು ಆಪತ್ಕಾಲಕ್ಕಾಗಿ ಧರ್ಮಾಚರಣೆಯಲ್ಲಿ ಕೆಲವು ಪರ್ಯಾಯಗಳನ್ನು ಹೇಳಿದೆ. ಅದನ್ನು 'ಆಪದ್ಧರ್ಮ' ಎಂದು ಹೇಳುತ್ತಾರೆ. ಆಪದ್ಧರ್ಮ ಅಂದರೆ 'ಆಪದಿ ಕರ್ತವ್ಯೋ ಧರ್ಮಃ ।' ಅಂದರೆ 'ವಿಪತ್ತಿನಲ್ಲಿ ಆಚರಣೆಯಲ್ಲಿ ತರುವಂತಹ ಧರ್ಮ'. ಸದ್ಯ ಕೊರೋನಾದ ಹಾವಳಿಯಿಂದಾಗಿ ದೇಶದಾದ್ಯಂತ ಸಂಚಾರ ನಿಷೇಧವಿದೆ. ಈ ಕಾಲದಲ್ಲಿಯೇ ಅಕ್ಷಯ ತೃತೀಯಾ ಬರುತ್ತಿರುವುದರಿಂದ ಸಂಪತ್ಕಾಲದಲ್ಲಿ ಹೇಳಿದಂತೆ ಕೆಲವು ಧಾರ್ಮಿಕ ಕೃತಿಗಳು ಈ ಸಮಯದಲ್ಲಿ ಮಾಡಲು ಆಗುವುದಿಲ್ಲ. ಈ ದೃಷ್ಟಿಯಿಂದ ಪ್ರಸ್ತುತ ಲೇಖನದಲ್ಲಿ ಸದ್ಯದ ದೃಷ್ಟಿಯಿಂದ ಧರ್ಮಾಚರಣೆ ಎಂದು ಏನೆಲ್ಲ ಮಾಡಬಹುದು, ಎಂಬುದರ ಬಗ್ಗೆ ವಿಚಾರವೂ ಮಾಡಲಾಗಿದೆ. ಹಿಂದೂ ಧರ್ಮವು ಮನುಷ್ಯನ ಬಗ್ಗೆ ಎಷ್ಟು ಆಳವಾದ ವಿಚಾರ ಮಾಡಿದೆ, ಎಂಬುದು ಕಲಿಯಲು ಸಿಗುತ್ತದೆ. ಇದರಿಂದ ಹಿಂದೂ ಧರ್ಮದ ಏಕಮೇವಾದ್ವಿತೀಯತೆಯು ಗಮನಕ್ಕೆ ಬರುತ್ತದೆ.

## ಅಕ್ಷಯ ತೃತೀಯಾವನ್ನು ಆಚರಿಸುವ ಪದ್ಧತಿ

**ಸ್ನಾನದಾನಾದಿ ಧರ್ಮಕಾರ್ಯಗಳು:** ಕಾಲವಿಭಾಗದ ಪ್ರಾರಂಭದ ದಿನವು ಭಾರತೀಯರಿಗೆ ಪವಿತ್ರವಾಗಿದೆ; ಆದುದರಿಂದ ಇಂತಹ ತಿಥಿಗಳಂದು ಸ್ನಾನದಾನಾದಿ ಧರ್ಮಕಾರ್ಯಗಳನ್ನು ಹೇಳಲಾಗಿದೆ. ಈ ದಿನದ ವಿಧಿಯೆಂದರೆ ಪವಿತ್ರ ನೀರಿನಲ್ಲಿ ಸ್ನಾನ, ಶ್ರೀವಿಷ್ಣುವಿನ ಪೂಜೆ, ಜಪ, ಹೋಮ, ದಾನ ಮತ್ತು ಪಿತೃತರ್ಪಣ. ಈ ದಿನ ಅಪಿಂಡಕ ಶ್ರಾದ್ಧವನ್ನು ಮಾಡಬೇಕು, ಅದು ಸಾಧ್ಯವಿಲ್ಲದಿದ್ದರೆ ಕಡಿಮೆಪಕ್ಷ ಎಳ್ಳಿನ ತರ್ಪಣವನ್ನಾದರೂ ಕೊಡಬೇಕು. ದಾನವು 'ಸತ್ಪಾತ್ರೇ ದಾನ'ವಾಗಿರಬೇಕು. ಸಂತರಿಗೆ ಅಥವಾ ಸಮಾಜದಲ್ಲಿ ಧರ್ಮಪ್ರಸಾರವನ್ನು ಮಾಡುವ ಆಧ್ಯಾತ್ಮಿಕ ಸಂಸ್ಥೆಗಳಿಗೆ ಮಾಡಿದ ದಾನವು




ಉದಯವಾಹಿನಿ ಚಿತ್ರ

'ಸತ್ಪಾತ್ರೇ ದಾನ'ವಾಗಿದೆ. ಸತ್ಪಾತ್ರೇ ದಾನವನ್ನು ಮಾಡುವುದರಿಂದ ದಾನದ ಕರ್ಮವು ಅಕರ್ಮಕರ್ಮವಾಗುತ್ತದೆ. ಅಕರ್ಮಕರ್ಮವೆಂದರೆ ಪಾಪ-ಪುಣ್ಯಗಳ ಲೆಕ್ಕಾಚಾರವು ತಗಲದಿರುವುದು. ಇದರಿಂದ ದಾನವನ್ನು ನೀಡುವವನು ಯಾವುದೇ ಬಂಧನದಲ್ಲಿ ಸಿಲುಕದೇ, ಅವನ ಆಧ್ಯಾತ್ಮಿಕ ಉನ್ನತಿಯಾಗಲು ಸಹಾಯವಾಗುತ್ತದೆ.

**ಅಕ್ಷಯ ತದಿಗೆ ಸ್ತ್ರೀಯರಿಗೆ ಮಹತ್ವದ್ದಾಗಿದೆ:** ಸ್ತ್ರೀಯರು ಚೈತ್ರದಲ್ಲಿ ಕೂರಿಸಿದ ಚೈತ್ರ ಗೌರಿಯನ್ನು ಈ ದಿನ ವಿಸರ್ಜನೆ ಮಾಡುತ್ತಾರೆ. ಇದರ ಪ್ರಯುಕ್ತ ಅರಿಶಿನ-ಕುಂಕುಮ ನೀಡುವ ಕಾರ್ಯಕ್ರಮವನ್ನೂ ಮಾಡುತ್ತಾರೆ.

**ಅಕ್ಷಯ ತದಿಗೆಯ ದಿನ ಎಳ್ಳು ತರ್ಪಣೆಯನ್ನು ಏಕೆ ಮಾಡುತ್ತಾರೆ?:**

**ಪೂರ್ವಜರಿಗೆ ಗತಿ ಸಿಗುವುದು ಮಹತ್ವ:** ಅಕ್ಷಯ ತದಿಗೆಯ ದಿನ ಉಚ್ಚಲೋಕದಿಂದ ಸಾತ್ತ್ವಿಕತೆಯು ಬರುತ್ತಿರುತ್ತದೆ. ಈ ಸಾತ್ತ್ವಿಕತೆಯನ್ನು ಗ್ರಹಣ ಮಾಡಲು ಭುವರ್ಲೋಕದಲ್ಲಿನ ಅನೇಕ ಜೀವಗಳು ಪೃಥ್ವಿಯ ಸಮೀಪಕ್ಕೆ ಬರುತ್ತವೆ. ಭುವರ್ಲೋಕದಲ್ಲಿರುವ ಬಹುತೇಕ ಜೀವಗಳು ಮನುಷ್ಯರ ಪೂರ್ವಜರಾಗಿರುತ್ತಾರೆ ಮತ್ತು ಅವರು ಪೃಥ್ವಿಯ ಸಮೀಪ ಬರುವುದರಿಂದ ಮನುಷ್ಯರಿಗೆ ತೊಂದರೆಯಾಗುವ ಸಾಧ್ಯತೆಯಿರುತ್ತದೆ. ಪೂರ್ವಜರ ಋಣವೂ ಮನುಷ್ಯರ ಮೇಲೆ ಬಹಳಷ್ಟು ಇರುತ್ತದೆ. ಈ ಋಣವನ್ನು ತೀರಿಸಲು ಮನುಷ್ಯನು ಪ್ರಯತ್ನ ಮಾಡುವುದು ಈಶ್ವರನಿಗೆ ಅಪೇಕ್ಷಿತವಾಗಿದೆ. ಪೂರ್ವಜರಿಗೆ ಗತಿ ಸಿಗಬೇಕೆಂದು ಅಕ್ಷಯ ತದಿಗೆಯ ದಿನ ಎಳ್ಳು ತರ್ಪಣೆಯನ್ನು ಮಾಡುತ್ತಾರೆ.

**ಎಳ್ಳು ತರ್ಪಣೆ ಮಾಡುವ ಪದ್ಧತಿ:** ಒಂದು ತಟ್ಟೆಯನ್ನು ತೆಗೆದುಕೊಂಡು ತಟ್ಟೆಯಲ್ಲಿ ಶ್ರೀವಿಷ್ಣು, ಬ್ರಹ್ಮ, ದತ್ತನ ಆವಾಹನೆಯನ್ನು ಮಾಡಬೇಕು. ಆಮೇಲೆ ದೇವತೆಗಳು ಸೂಕ್ಷ್ಮದಲ್ಲಿ ಆ ತಟ್ಟೆಯಲ್ಲಿ ಬಂದಿದ್ದಾರೆಂದು ಭಾವವನ್ನಿಟ್ಟು ಕೈಯಲ್ಲಿ ಎಳ್ಳನ್ನು ತೆಗೆದುಕೊಂಡು ಅವರ ಚರಣಗಳ ಮೇಲೆ ಅರ್ಪಿಸಬೇಕು. ಇನ್ನೊಂದು ತಟ್ಟೆಯನ್ನು ತೆಗೆದುಕೊಂಡು ನಮ್ಮ ಪೂರ್ವಜರ ಆವಾಹನೆಯನ್ನು ಮಾಡಬೇಕು. ಆಮೇಲೆ ಪೂರ್ವಜರು ತಟ್ಟೆಯಲ್ಲಿ ಬಂದಿದ್ದಾರೆಂದು ಭಾವವನ್ನಿಟ್ಟು ದೇವತೆಗಳ ತತ್ತ್ವದಿಂದ ಭರಿತವಾದ ಎಳ್ಳನ್ನು ಅವರಿಗೆ ಅರ್ಪಿಸಬೇಕು, ಅಂದರೆ ಸಾತ್ತ್ವಿಕವಾಗಿರುವ ಈ ಎಳ್ಳನ್ನು ಕೈಯಲ್ಲಿ ತೆಗೆದುಕೊಂಡು ಅದರ ಮೇಲಿನಿಂದ ತಟ್ಟೆಯಲ್ಲಿ ನಿಧಾನವಾಗಿ ನೀರನ್ನು ಬಿಡಬೇಕು ಮತ್ತು ಆ ಸಮಯದಲ್ಲಿ ಬ್ರಹ್ಮ, ಶ್ರೀವಿಷ್ಣು ಅಥವಾ ಇವರಿಬ್ಬರ ಅಂಶವಿರುವ ದತ್ತನಿಗೆ ಪೂರ್ವಜರಿಗೆ ಗತಿ ನೀಡಬೇಕೆಂದು ಪ್ರಾರ್ಥನೆಯನ್ನು ಮಾಡಬೇಕು.

**ಮೃತ್ತಿಕಾಪೂಜೆ, ಮಣ್ಣಿನಲ್ಲಿ ಹೊಂಡಗಳನ್ನು ಮಾಡುವುದು, ಬೀಜಗಳ ಬಿತ್ತನೆ, ಗಿಡಗಳನ್ನು ನೆಡುವುದು:** 'ಯುಗಾದಿ'ಯ ಶುಭಮುಹೂರ್ತದಂದು ಉಳಿದ ಹೊಲದ ಸಾಗುವಳಿಯ ಕೆಲಸವನ್ನು ಅಕ್ಷಯ ತೃತೀಯಾದ ಒಳಗೆ ಪೂರ್ಣಗೊಳಿಸಬೇಕು. ಅಕ್ಷಯ ತೃತೀಯಾದಂದು ಸಾಗುವಳಿ ಮಾಡಿದ ಜಮೀನಿನಲ್ಲಿರುವ ಮಣ್ಣನ್ನು ಕೃತಜ್ಞತೆಯ ಭಾವದಿಂದ ಪೂಜಿಸಬೇಕು. ಅನಂತರ ಪೂಜಿಸಿದ ಮಣ್ಣಿನಲ್ಲಿ ಹೊಂಡಗಳನ್ನು ಮಾಡಬೇಕು ಮತ್ತು ಆ ಹೊಂಡಗಳಲ್ಲಿ ಬೀಜಗಳನ್ನು ಬಿತ್ತಬೇಕು. ಅಕ್ಷಯ ತೃತೀಯಾದ ಮುಹೂರ್ತದಲ್ಲಿ ಬೀಜಗಳನ್ನು ಬಿತ್ತಲು ಪ್ರಾರಂಭಿಸಿದರೆ ಆ ದಿನ ವಾತಾವರಣದಲ್ಲಿ ಕಾರ್ಯನಿರತವಾಗಿರುವ ದೈವೀ ಶಕ್ತಿಯು ಬೀಜಗಳಲ್ಲಿ ಬರುವುದರಿಂದ ಸಮೃದ್ಧವಾದ ಫಸಲು ಬರುತ್ತದೆ. ಇದೇ ರೀತಿಯಲ್ಲಿ ಅಕ್ಷಯ ತೃತೀಯಾದಂದು ಹೊಂಡಗಳನ್ನು ಮಾಡಿ ಗಿಡಗಳನ್ನು ನೆಟ್ಟರೆ ಹಣ್ಣಿನ ತೋಟವೂ ಹೇರಳವಾದ ಉತ್ಪಾದನೆಯನ್ನು ನೀಡುತ್ತದೆ.

### ● ಯುಎಸ್ ಸೇನಾನೆಲೆ ಗುರುತಿಸಲು ಇರಾನ್‌ಗೆ ಚೀನಾದ ಉಪಗ್ರಹ ನೆರವು

# ಆಗಸದಲ್ಲಿ ಡ್ರ್ಯಾಗನ್ ಗೂಢಚಾರಿಯ ಕಳ್ಳಾಟ ಬಯಲು



**ಬೀಜಿಂಗ್:** ಶತ್ರುವಿನ ಶತ್ರು ಮಿತ್ರ ಅನ್ನೋ ಮಾತಿದೆ. ಹಾಗೆಯೇ ತನ್ನ ಪರಮ ಶತ್ರು ಅಮೆರಿಕದ ಶತ್ರುವಾಗಿರುವ ಇರಾನ್ ಕಂಡರೆ ಚೀನಾಗೆ ಈಗ ಎಲ್ಲಿಲ್ಲದ ಪ್ರೀತಿ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸುದೀರ್ಘ ಸಂಘರ್ಷದಲ್ಲಿ, ಅಮೆರಿಕವನ್ನು ಬಗ್ಗು ಬಡಿಯಲು ಇರಾನ್‌ಗೆ ಚೀನಾ ಸಕಲ ಮಿಲಿಟರಿ ನೆರವನ್ನೂ ನೀಡುತ್ತಿರುವ ವಿಚಾರ ಇದೀಗ ಗುಟ್ಟಾಗಿ ಉಳಿದಿಲ್ಲ. ಇರಾನ್‌ಗೆ ರಷ್ಯಾ ಬೆಂಬಲ ಕೂಡ ಇರುವುದು ಅಮೆರಿಕದ ನಿದ್ದೆಗೆಡಿಸಿದೆ. ಇರಾನ್‌ಗೆ ರಷ್ಯಾ-ಚೀನಾ ಬ್ಯಾಕಪ್ ಮಧ್ಯಪ್ರಾಚ್ಯ ಯುದ್ಧದ ಗತಿಯನ್ನು ಬದಲಿಸುತ್ತಿರುವುದು ಸುಳ್ಳಲ್ಲ.

ಅದರಲ್ಲೂ ಇರಾನ್‌ಗೆ ಭೌಗೋಳಿಕವಾಗಿ ಹತ್ತಿರವಾಗಿರುವ ಚೀನಾ, ವಿವಿಧ ರೀತಿಯ ಮಿಲಿಟರಿ ನೆರವು ಒದಗಿಸುತ್ತಿದೆ. ಇರಾನ್‌ನ ಕ್ಷಿಪಣಿ ವ್ಯವಸ್ಥೆಗೆ ಬಲ ತುಂಬಿರುವ ಚೀನಾ, ಇದೀಗ ತನ್ನ ಉಪಗ್ರಹ ತಂತ್ರಜ್ಞಾನ ನೆರವನ್ನೂ ತನ್ನ ಮಿತ್ರ ರಾಷ್ಟ್ರಕ್ಕೆ ನೀಡಿರುವ ಬಗ್ಗೆ ವರದಿಯಾಗಿದೆ. ಹೌದು ಮಧ್ಯಪ್ರಾಚ್ಯದಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರುತಿಸಲು ನೆರವಾಗುವಂತೆ, ಚೀನಾ ಬಾಹ್ಯಾಕಾಶದಲ್ಲಿರುವ ತನ್ನ ಗುಪ್ತಚರ ಉಪಗ್ರಹ ಮಾಹಿತಿಯನ್ನು ಇರಾನ್ ಜೊತೆಗೆ ಹಂಚಿಕೊಂಡಿದೆ ಎಂಬ ಸಂಗತಿ ಇದೀಗ ಬಯಲಾಗಿದೆ. ಮಧ್ಯಪ್ರಾಚ್ಯದಲ್ಲಿ ಭುಗಿಲೆದ್ದಿರುವ ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ದಿನದಿಂದ ದಿನಕ್ಕೆ ಹೊಸ ತಿರುವು ಪಡೆಯುತ್ತಿದೆ. ಅಮೆರಿಕದ ನಿದ್ದೆಗೆಡಿಸುವಂತಹ ಮತ್ತೊಂದು ಸ್ಫೋಟಕ ಮಾಹಿತಿಯೊಂದು ಹೊರಬಿದ್ದಿದೆ. ಈ ಯುದ್ಧದಲ್ಲಿ ಇರಾನ್ ಏಕಾಂಗಿಯಾಗಿ ಹೋರಾಡುತ್ತಿಲ್ಲ, ಅದರ ಹಿಂದೆ ಚೀನಾದಂತ ಬಲಿಷ್ಠ ರಾಷ್ಟ್ರ ನಿಂತಿದೆ. ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಕಣ್ಣಿಡಲು ಮತ್ತು ನಿಖರವಾಗಿ ದಾಳಿ ಮಾಡಲು, ಇರಾನ್‌ಗೆ ಚೀನಾ ತನ್ನ ಗುಪ್ತಚರ ಉಪಗ್ರಹದ ನೆರವು ಒದಗಿಸಿದೆ.

- **ಅಮೆರಿಕ-ಇರಾನ್ ನಡುವೆ ಬಾಹ್ಯಾಕಾಶದಲ್ಲೂ ಪೈಪೋಟಿ.**
- **ಅಮೆರಿಕದ ಸೇನಾನೆಲೆ ಗುರುತಿಸಲು ಇರಾನ್‌ಗೆ ನೆರವಾದ ಚೀನಾ ಉಪಗ್ರಹ.**
- **ಇರಾನ್‌ಗೆ ಡ್ರ್ಯಾಗನ್ ರಾಷ್ಟ್ರ ನೀಡುತ್ತಿರುವ ಮಿಲಿಟರಿ ನೆರವಿನಿಂದ ಅಮೆರಿಕ ಕಂಗಾಲು.**

**ಏನೆಲ್ಲಾ ಮಾಹಿತಿ ಸಿಕ್ಕಿತು?**

**ಸೋರಿಕೆಯಾದ ಇರಾನ್‌ನ ಗುಪ್ತಚರ ದಾಖಲೆಗಳಲ್ಲಿ ಟೈಮ್-ಸ್ಟ್ಯಾಂಪ್ ಮಾಡಿದ ಕೋ-ಆರ್ಡಿನೇಟ್ ಲಾಗ್ಸ್, ಸೇನಾ ನೆಲೆಗಳ ಚಿತ್ರಣ ಮತ್ತು ಆರ್ಬಿಟಲ್ ವಿಶ್ಲೇಷಣೆಗಳು ಲಭ್ಯವಾಗಿವೆ. ಈ ದಾಖಲೆಗಳನ್ನು ಆಧರಿಸಿ ಇರಾನ್ ಸೇನೆ ಕಳೆದ ಮಾರ್ಚ್ ತಿಂಗಳಲ್ಲಿ ಅಮೆರಿಕದ ಸೇನಾ ನೆಲೆಗಳ ಮೇಲೆ ಕರಾರುವಕ್ಕಾದ ದಾಳಿ ನಡೆಸಿದೆ. ಕ್ಷಿಪಣಿ ಮತ್ತು ಡ್ರೋನ್ ದಾಳಿಯ ಮೊದಲು ಮತ್ತು ನಂತರ ಅಮೆರಿಕದ ಪ್ರಮುಖ ಮಿಲಿಟರಿ ಸೌಲಭ್ಯಗಳನ್ನು ಮೇಲ್ವಿಚಾರಣೆ ಮಾಡಲೂ, ಚೀನಾದ ಉಪಗ್ರಹವನ್ನು ಇರಾನ್ ಬಳಸಿಕೊಂಡಿರುವ ಮಾಹಿತಿ ಲಭ್ಯವಾಗಿದೆ. ಅದರಲ್ಲೂ ವಿಶೇಷವಾಗಿ ಸೌದಿ ಅರೇಬಿಯಾದಲ್ಲಿರುವ ಅಮೆರಿಕದ ಪ್ರತಿಷ್ಠಿತ ಪ್ರಿನ್ಸ್ ಸುಲ್ತಾನ್ ಏರ್ ಬೇಸ್' ಅನ್ನು ಇರಾನ್ ಟಾರ್ಗೆಟ್ ಮಾಡಲು, ಚೀನಾದ TEE-01B ಗಪ್ತಚರ ಉಪಗ್ರಹದಿಂದ ದೊರೆತ ಮಾಹಿತಿಯೇ ಕಾರಣ ಎಂಬುದು ತಿಳಿದುಬಂದಿದೆ. ಮಾರ್ಚ್ 13, 14 ಮತ್ತು 15ರಂದು ಈ ಉಪಗ್ರಹವು ಪ್ರಿನ್ಸ್ ಸುಲ್ತಾನ್ ಏರ್ ಬೇಸ್‌ನ ನಿಖರವಾದ ಮತ್ತು ಸ್ಪಷ್ಟವಾದ ಚಿತ್ರಗಳನ್ನು ಸೆರೆಹಿಡಿದು, ಇರಾನ್ ಸೇನೆಯ ಉನ್ನತ ಕಮಾಂಡರ್‌ಗಳಿಗೆ ರವಾನಿಸಿದೆ.**

**TEE-01B ಉಪಗ್ರಹ:** ಇರಾನ್ ಮತ್ತು ಅಮೆರಿಕ ನಡುವಿನ ಯುದ್ಧ ಕೇವಲ ಭೂಮಿ ಮತ್ತು ಆಕಾಶಕ್ಕೆ ಸೀಮಿತವಾಗಿಲ್ಲ. ಅದು ಈಗ ಬಾಹ್ಯಾಕಾಶಕ್ಕೂ ವಿಸ್ತರಿಸಿದೆ. ಇರಾನ್‌ನ ಇಸ್ಲಾಮಿಕ್ ರಿವಲ್ಯೂಷನರಿ ಗಾರ್ಡ್ ಕಾರ್ಪ್ಸ್, ಚೀನಾ ನಿರ್ಮಿತ ಅತ್ಯಾಧುನಿಕ ಗೂಢಚಾರ ಉಪಗ್ರಹವನ್ನು ಬಳಸಿಕೊಂಡು ಮಧ್ಯಪ್ರಾಚ್ಯದಾದ್ಯಂತ ಇರುವ ಅಮೆರಿಕದ ಸೇನಾ ನೆಲೆಗಳನ್ನು ಟ್ರ್ಯಾಕ್ ಮಾಡಿದೆ ಮತ್ತು ಟಾರ್ಗೆಟ್ ಮಾಡಿದೆ ಎಂಬುದು ತನಿಖೆಯಿಂದ ಬಹಿರಂಗವಾಗಿದೆ.

ಸೋರಿಕೆಯಾದ ಇರಾನ್‌ನ ಮಿಲಿಟರಿ ದಾಖಲೆಗಳು ಮತ್ತು ಉಪಗ್ರಹದ ಡೇಟಾವನ್ನು ಉಲ್ಲೇಖಿಸಿ, ವರದಿ ಮಾಡಲಾಗಿದೆ.

ಅಮೆರಿಕದ ಕಣ್ತಪ್ಪಿಸಿ ಚೀನಾದ ಗುಪ್ತಚರ ಉಪಗ್ರಹದ ನೆರವು ಪಡೆಯುವಲ್ಲಿ ಇರಾನ್ ಯಶಸ್ವಿಯಾಗಿರುವುದು ಪೆಂಟಗನ್ ಅಧಿಕಾರಿಗಳ ಎದೆಯಲ್ಲಿ ನಡುಕ ಹುಟ್ಟಿಸಿದೆ. ಇರಾನ್‌ನ ಈ ರಹಸ್ಯ ಕಾರ್ಯಾಚರಣೆಗೆ ಚೀನಾದ TEE-01B ಎಂಬ ಹೆಸರಿನ ಗುಪ್ತಚರ ಉಪಗ್ರಹ ನೆರವು ನೀಡಿದೆ. ಚೀನಾ ಈ ಉಪಗ್ರಹದಿಂದ ಮಧ್ಯಪ್ರಾಚ್ಯದಲ್ಲಿರುವ ಅಮೆರಿಕದ ಪ್ರಮುಖ ಸೇನಾ ನೆಲೆಗಳ ಮಾಹಿತಿ ಸಂಗ್ರಹಿಸಿ, ಅದನ್ನು ಇರಾನ್ ಜೊತೆ ಹಂಚಿಕೊಂಡಿದೆ ಎಂದು ಹೇಳಲಾಗುತ್ತಿದೆ. ವರದಿಗಳ ಪ್ರಕಾರ TEE-01B ಗುಪ್ತಚರ ಉಪಗ್ರಹವನ್ನು 2024ರ ಕೊನೆಯಲ್ಲಿ ಚೀನಾದಿಂದ ಉಡಾವಣೆ ಮಾಡಲಾಗಿತ್ತು. ಆದರೆ ಉಡಾವಣೆಯಾದ ಸ್ವಲ್ಪ ಸಮಯದ ನಂತರ ಇರಾನ್‌ನ ಇಸ್ಲಾಮಿಕ್ ರಿವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ ಏರೋಸ್ಪೇಸ್ ಫೋರ್ಸ್, ಈ ಉಪಗ್ರಹವನ್ನು ಚೀನಾದ ಅನುಮತಿ ಮೇರೆವ ರಹಸ್ಯವಾಗಿ ಸ್ವಾಧೀನಪಡಿಸಿಕೊಂಡಿತು. ಚೀನಾದ ಅರ್ಥ್ ಐ ಕೋ' ಎಂಬ ಖಾಸಗಿ ಕಂಪನಿ, ಈ ಗುಪ್ತಚರ ಉಪಗ್ರಹವನ್ನು ನಿರ್ಮಿಸಿದೆ ಎಂಬ ಸಂಗತಿ ಇದೀಗ ಬಯಲಾಗಿದೆ.

ಅಮೆರಿಕದ ಬಿಲಿಯನೇರ್ ಇನ್ವೆಸ್ಟರ್ ರೇ ಡಾಲಿಯೊ ಅವರ ಮಧ್ಯಪ್ರಾಚ್ಯ ಯುದ್ಧದಲ್ಲಿ ರಷ್ಯಾ-ಚೀನಾ ಜಯಶಾಲಿಗಳು ಎಂಬ ಹೇಳಿಕೆ, ಇರಾನ್‌ಗೆ ಎರಡೂ ರಾಷ್ಟ್ರಗಳ ಗುಪ್ತ ಬೆಂಬಲವನ್ನು ಜಗಜ್ಜಾ ಹೀರುಗೊಳಿಸಿತ್ತು. ಚೀನಾವಂತೂ ಒಂದು ಹೆಜ್ಜೆ ಮುಂದೆ ಹೋಗಿ ಇರಾನ್‌ಗೆ ಬಾಹ್ಯಾಕಾಶದಿಂದಲೂ ನೆರವು ಒದಗಿಸಿರುವುದು ತೀವ್ರ ಕುತೂಹಲ ಕೆರಳಿಸಿದೆ.

ಬೀಜಿಂಗ್ ಮೂಲದ ಎಂಪೋಸಾಟ್ ಎಂಬ ಜಾಗತಿಕ ನೆಟ್ ವರ್ಕ್ ಹೊಂದಿರುವ ಸಂಸ್ಥೆ ನಿರ್ವಹಿಸುವ ಗ್ರೌಂಡ್ ಕಂಟ್ರೋಲ್ ಮೂಲಸೌಕರ್ಯದ ಸಂಪೂರ್ಣ ಪ್ರವೇಶವನ್ನು, ಇರಾನ್‌ನ ಐಆರ್‌ಜಿಸಿ ಹೇಗೆ ಪಡೆದುಕೊಂಡಿತು ಎಂಬುದೇ ಈಗ ಅಮೆರಿಕದ ಪಾಲಿಗೆ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

**ಕಕ್ಷೆಯಲ್ಲೇ ನಿಯಂತ್ರಣ ಹಸ್ತಾಂತರ**

**ಇನ್-ಆರ್ಬಿಟ್ ಡೆಲಿವರಿ ಅಂದರೆ ಕಕ್ಷೆಯಲ್ಲಿರುವಾಗಲೇ ಉಪಗ್ರಹದ ನಿಯಂತ್ರಣವನ್ನು ಹಸ್ತಾಂತರ ಮಾಡುವ ವಿಶಿಷ್ಟ ಮಾದರಿಯನ್ನು ಅನುಸರಿಸುವ ಮೂಲಕ, ಚೀನಾ ತನ್ನ ಗುಪ್ತಚರ ಉಪಗ್ರಹವನ್ನು ಇರಾನ್‌ಗೆ ನೀಡಿದೆ. ಕಕ್ಷೆಯಲ್ಲಿ ಮಾಲೀಕತ್ವ ಬದಲಾವಣೆ ಆಗಿದ್ದರಿಂದ, ಇರಾನ್ TEE-01B ಗಪ್ತಚರ ಉಪಗ್ರಹದ ಮಾಹಿತಿ ಪಡೆಯುತ್ತಿರುವುದನ್ನು ಅಮೆರಿಕ ಗಮನಿಸಲು ಸಾಧ್ಯವಾಗಲೇ ಇಲ್ಲ. ಇದೊಂದು ರೀತಿಯಲ್ಲಿ ಇರಾನ್ ಕಳ್ಳಮಾರ್ಗದ ಮೂಲಕ ಚೀನಾದಿಂದ ಮಿಲಿಟರಿ ನೆರವು ಪಡೆದುಕೊಂಡಿರುವುದನ್ನು ಸ್ಪಷ್ಟಪಡಿಸುತ್ತದೆ.**

## ಅಮೆರಿಕ ಮತ್ತು ಇಸ್ರೇಲ್ ಗುರಿ ಒಂದೇ: ನೆತನ್ಯಾಹು

**ಜೆರುಸಲೆಮ್:** ಇರಾನ್ ಜೊತೆ ನಡೆಯುತ್ತಿರುವ ಸಂಘರ್ಷದಲ್ಲಿ ಇಸ್ರೇಲ್ ಮತ್ತು ಅಮೆರಿಕ ಒಂದೇ ಗುರಿಗಳನ್ನು ಹಂಚಿಕೊಂಡಿವೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಇರಾನ್ ಜೊತೆಗಿನ ತನ್ನ ಸಂಪರ್ಕಗಳ ಕುರಿತು ಅಮೆರಿಕ ಇಸ್ರೇಲ್‌ಗೆ ಮಾಹಿತಿ ನೀಡುತ್ತಲೇ ಇದೆ ಎಂದು ಇಸ್ರೇಲ್ ಪ್ರಧಾನಿ ಹೇಳಿದ್ದಾರೆ ಮತ್ತು ಎರಡೂ ರಾಷ್ಟ್ರಗಳು ಪುಷ್ಟೀಕರಿಸಿದ ವಸ್ತುಗಳನ್ನು ತೆಗೆದುಹಾಕುವುದು, ಇರಾನ್‌ನ ಪುಷ್ಟೀಕರಣ ಸಾಮರ್ಥ್ಯಗಳನ್ನು ಕೊನೆಗೊಳಿಸುವುದು ಮತ್ತು ಪ್ರಮುಖ ಸಮುದ್ರ ಮಾರ್ಗಗಳನ್ನು ಪುನಃ ತೆರೆಯುವುದನ್ನು ಬಯಸುತ್ತವೆ ಎಂದು ಪುನರುಚ್ಚರಿಸಿದ್ದಾರೆ.

**ನಮ್ಮ ಗುರಿಗಳು ಮತ್ತು ಯುನೈಟೆಡ್ ಸ್ಟೇಟ್ಸ್‌ನ ಗುರಿಗಳು ಒಂದೇ ಆಗಿವೆ:** ಇರಾನ್‌ನಿಂದ ಪುಷ್ಟೀಕರಿಸಿದ ವಸ್ತುಗಳನ್ನು ತೆಗೆದುಹಾಕುವುದನ್ನು ನಾವು ನೋಡಲು ಬಯಸುತ್ತೇವೆ, ಇರಾನ್‌ನೊಳಗಿನ ಪುಷ್ಟೀಕರಣ ಸಾಮರ್ಥ್ಯಗಳನ್ನು ರದ್ದುಗೊಳಿಸುವುದನ್ನು ನಾವು ನೋಡಲು ಬಯಸುತ್ತೇವೆ ಮತ್ತು ಸಹಜವಾಗಿಯೇ, ಜಲಸಂಧಿಗಳು ತೆರೆಯುವುದನ್ನು ನಾವು ನೋಡಲು ಬಯಸುತ್ತೇವೆ ಎಂದು ನೆತನ್ಯಾಹು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ವಿಷಯ ಹೇಗೆ ಕೊನೆಗೊಳ್ಳುತ್ತದೆ ಅಥವಾ ಹೇಗೆ ಮುಂದುವರಿಯುತ್ತದೆ ಎಂದು ಹೇಳುವುದು ಇನ್ನೂ ಮುಂಚೆಯೇ. ಹೋರಾಟ ಪುನರಾರಂಭವಾಗುವ ಸಾಧ್ಯತೆಯ ನಿರೀಕ್ಷೆಯಲ್ಲಿ, ನಾವು ಯಾವುದೇ ಸನ್ನಿವೇಶಕ್ಕೂ ಸಿದ್ಧರಿದ್ದೇವೆ ಎಂದು ಅವರು ಹೇಳಿದರು, ಏಪ್ರಿಲ್ 22 ರಂದು ಕೊನೆಗೊಳ್ಳಲಿರುವ ಇರಾನ್ ಮತ್ತು ಯುಎಸ್-ಇಸ್ರೇಲ್ ನಡುವಿನ ಎರಡು ವಾರಗಳ ದುರ್ಬಲವಾದ ಕದನ ವಿರಾಮವನ್ನು ಉಲ್ಲೇಖಿಸಿದ್ದಾರೆ.



ಇಸ್ರೇಲಿ ಪಡೆಗಳು ಮತ್ತು ಶಿಯಾ ಲೆಬನಾನಿನ ಗುಂಪು ಹೆಜ್ಬೊಲ್ಲಾ ಭಾರೀ ಗುಂಡಿನ ಚಕಮಕಿ ನಡೆಸುತ್ತಿದ್ದಂತೆ, ಉತ್ತರ ಇಸ್ರೇಲ್‌ನಲ್ಲಿ ನಿವಾಸಿಗಳ ಪರವಾಗಿ ನಿಂತಿರುವಾಗ ಮಿಲಿಟರಿ ಉಗ್ರಗಾಮಿ ಗುರಿಗಳ ಮೇಲೆ ದಾಳಿ ಮಾಡುವುದನ್ನು ಮುಂದುವರೆಸಿದೆ ಎಂದು ನೆತನ್ಯಾಹು ಹೇಳಿದರು.ನಾನು ದೃಢವಾಗಿ ನಿಲ್ಲುತ್ತಿರುವ ಉತ್ತರದ ನಿವಾಸಿಗಳ ಬೆಂಬಲಕ್ಕೆ ನಿಲ್ಲುತ್ತೇನೆ. ಅದೇ ಸಮಯದಲ್ಲಿ, ನಮ್ಮ ಪಡೆಗಳು ಹೆಜ್ಬೊಲ್ಲಾ ಮೇಲೆ ದಾಳಿ ಮಾಡುವುದನ್ನು ಮುಂದುವರಿಸುತ್ತಿವೆ ಎಂದು ಅವರು ಹೇಳಿದರು.ದಕ್ಷಿಣ ಲೆಬನಾನ್‌ನಲ್ಲಿರುವ ಪ್ರಮುಖ ಹೆಜ್ಬೊಲ್ಲಾ ಭದ್ರಕೋಟೆಯಾದ ಬಿಂಟ್ ಜೆಬೀಲ್‌ನಲ್ಲಿ ನಡೆಯುತ್ತಿರುವ ಕಾರ್ಯಾಚರಣೆಗಳನ್ನು ಉಲ್ಲೇಖಿಸುತ್ತಾ, 2006 ರ ಯುದ್ಧದ ನಂತರ ಗುಂಪಿನ ಪ್ರತಿರೋಧದ ಸಂಕೇತವೆಂದು ದೀರ್ಘಕಾಲದಿಂದ ಪರಿಗಣಿಸಲ್ಪಟ್ಟಿರುವ ಪ್ರದೇಶವನ್ನು ಇಸ್ರೇಲಿ ಪಡೆಗಳು ವಶಪಡಿಸಿಕೊಳ್ಳುವ ಹಂತಕ್ಕೆ ಬಂದಿವೆ ಎಂದು ನೆತನ್ಯಾಹು ಹೇಳಿದರು.

ಬಿಂಟ್ ಜೆಬೀಲ್ ದಕ್ಷಿಣ ಲೆಬನಾನ್‌ನಲ್ಲಿರುವ ಹೆಜ್ಬೊಲ್ಲಾದ ರಾಜಧಾನಿಯಾಗಿತ್ತು.ದಕ್ಷಿಣ ಲೆಬನಾನ್‌ನಲ್ಲಿರುವ ಭದ್ರತಾ ವಲಯವನ್ನು ವಿಸ್ತರಿಸಲು ಮತ್ತು ನಮ್ಮ ಡ್ರೂಜ್ ಸಹೋದರರಿಗೆ ಅವರ ಸಂಕಷ್ಟದ ಸಮಯದಲ್ಲಿ ಉತ್ತಮವಾಗಿ ಸಹಾಯ ಮಾಡಲು ಅದನ್ನು ಪೂರ್ವಕ್ಕೆ ಹೆರ್ಮನ್ ಪರ್ವತದ ಇಳಿಜಾರುಗಳ ಕಡೆಗೆ ವಿಸ್ತರಿಸಲು ಇಸ್ರೇಲ್ ರಕ್ಷಣಾ ಪಡೆಗಳಿಗೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.

## ಜಿಹಾದ್ ಪ್ರಕರಣಕ್ಕೆ ಮಲೇಷ್ಯಾ ಲಿಂಕ್

**ಮುಂಬೈ:** ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಸಂಸ್ಥೆಯಲ್ಲಿ ನಡೆದ ಕಾರ್ಪೋರೇಟ್ ಜಿಹಾದ್ ಪ್ರಕರಣದಲ್ಲಿ ಮಲೇಷ್ಯಾ ಲಿಂಕ್ ಇರುವುದು ಇದೀಗ ದೃಢಪಟ್ಟಿದೆ. ತನಿಖೆಯ ವೇಳೆ ಆರೋಪಿಗಳ ವಾಟ್ಸಪ್ ಚಾಟ್‌ಗಳನ್ನು ವಿಶೇಷ ತನಿಖಾ ತಂಡ ಪರಿಶೀಲಿಸಿದಾಗ ಮಲೇಷ್ಯಾ ಮೂಲದ ಇರ್ಮನ್ ಎಂಬಾತನ ಜೊತೆ ಅವರು ಸಂಪರ್ಕದಲ್ಲಿದ್ದ ವಿಚಾರ ಬೆಳಕಿಗೆ ಬಂದಿದೆ.

ಮಹಿಳಾ ಉದ್ಯೋಗಿಗಳಿಗೆ ಮಲೇಷ್ಯಾದಲ್ಲಿ ಹೆಚ್ಚಿನ ಸಂಬಳದ ಕೆಲಸ ಕೊಡಿಸುವುದಾಗಿ ನಂಬಿಸಿ ಅವರ ಪಾಸ್‌ಪೋರ್ಟ್ ಮತ್ತು ಆಧಾರ್ ಕಾರ್ಡ್‌ಗಳನ್ನು ಪಡೆದುಕೊಳ್ಳಲಾಗಿತ್ತು ಎಂಬ ಗಂಭೀರ ಆರೋಪ ಈಗ ಕೇಳಿಬಂದಿದೆ. ತನಿಖೆ ವೇಳೆ ಇರ್ಮನ್ ಮಲೇಷ್ಯಾದಲ್ಲಿ ನೆಲೆಸಿರುವ ಒಬ್ಬ ಧಾರ್ಮಿಕ ಬೋಧಕ ಎನ್ನುವುದು ಆತಂಕಕ್ಕೆ ಕಾರಣವಾಗಿದೆ. ಈತ ಪ್ರಕರಣದ ಪ್ರಮುಖ ಆರೋಪಿಗಳ ಜೊತೆ ವಾಟ್ಸಪ್, ವಿಡಿಯೋ ಕಾಲ್ ಮೂಲಕ ಸಂಪರ್ಕದಲ್ಲಿದ್ದ ಎನ್ನಲಾಗಿದೆ. ಬಂಧಿತ ಆರೋಪಿಗಳಾದ ಡ್ಯಾನಿಶ್ ಶೇಖ್ ಮತ್ತು ಇತರರು ಈತನನ್ನು ಉದ್ಯೋಗಿಗಳಿಗೆ ವಿದೇಶಿ ಉದ್ಯೋಗದ ಮಾರ್ಗದರ್ಶಕ ಎಂಬಂತೆ ಪರಿಚಯಿಸುತ್ತಿದ್ದರು. ಈತನೊಂದಿಗೆ ನಡೆಸಿದ ವಾಟ್ಸಪ್ ಸಂಭಾಷಣೆಗಳನ್ನು ಎಸ್‌ಐಟಿ ವಶಪಡಿಸಿಕೊಂಡಿದೆ.



ಇರ್ಮನ್ ವಿಡಿಯೋ ಕಾಲ್‌ಗಳ ಮೂಲಕ ಮಹಿಳಾ ಉದ್ಯೋಗಿಗಳಿಗೆ ಮಲೇಷ್ಯಾದಲ್ಲಿ ಹೆಚ್ಚು ಸಂಬಳವಿರುವ ಕೆಲಸ ಮತ್ತು ಉತ್ತಮ ಜೀವನಶೈಲಿಯ ಆಮಿಷ ತೋರಿಸುತ್ತಿದ್ದ ಎಂದು ಆರೋಪಿಸಲಾಗಿದೆ.

ಅಲ್ಲದೆ ಮಹಿಳೆಯರ ಮೇಲೆ ಮಾನಸಿಕ ಒತ್ತಡ ಹೇರಿ ಧಾರ್ಮಿಕ ಮತಾಂತರಕ್ಕೆ ಪ್ರಚೋದನೆ ನೀಡುತ್ತಿದ್ದ. ಈತ ಕೇವಲ ವೈಯಕ್ತಿಕವಾಗಿ ಸಂಪರ್ಕದಲ್ಲಿದ್ದನೇ ಅಥವಾ ಅಂತರಾಷ್ಟ್ರೀಯ ಮಾನವ ಕಳ್ಳಸಾಗಣೆ ಅಥವಾ ಸಂಘಟಿತ ಮತಾಂತರ ಜಾಲದ ಭಾಗವಾಗಿದ್ದನೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಈ ಹಗರಣವನ್ನು ಬಯಲಿಗೆಳೆಯಲು ಮಹಿಳಾ ಪೊಲೀಸರು ಸುಮಾರು 40 ದಿನಗಳ ಕಾಲ ಕಂಪನಿಯಲ್ಲಿ ಸ್ವಚ್ಛತಾ ಕಾರ್ಮಿಕರ ಸೋಗಿನಲ್ಲಿ ಗುಪ್ತಚರ ಕಾರ್ಯಾಚರಣೆ ನಡೆಸಿದ್ದರು.

## ತಮಿಳುನಾಡು ಸಿಎಂಗೆ ಡಬಲ್ ಚಾಲೆಂಜ್
## ಸ್ಟಾಲಿನ್ ವಿರುದ್ಧ ಸಂತಾನಕೃಷ್ಣನ್ ಹಾಗೂ ಬಾಬು ಸ್ಪರ್ಧೆ

**ಚೆನ್ನೈ:** ಇಲ್ಲಿನ ಕೊಲತ್ತೂರು ವಿಧಾನಸಭಾ ಕ್ಷೇತ್ರದಿಂದ ನಾಲ್ಕನೇ ಬಾರಿಗೆ ಸ್ಪರ್ಧಿಸುತ್ತಿರುವ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರಿಗೆ ಎಐಎಡಿಎಂಕೆಯ ಸಂತಾನ ಕೃಷ್ಣನ್ ಹಾಗೂ ದಳಪತಿ ವಿಜಯ್ ನೇತೃತ್ವದ ಟಿವಿಕೆ ಪಕ್ಷದ ವಿ.ಎಸ್.ಬಾಬು ಸವಾಲು ಹಾಕಿದ್ದಾರೆ.



ಎಐಎಡಿಎಂಕೆ ಅಭ್ಯರ್ಥಿ ಆರ್. ಶಾಂತನಕೃಷ್ಣನ್ ಮತ್ತು ಹೊಸ ಟಿವಿಕೆಯ ವಿ.ಎಸ್. ಬಾಬು, ಚೆನ್ನೈನ ಕೊಲತ್ತೂರು ವಿಧಾನಸಭಾ ಕ್ಷೇತ್ರದಿಂದ ನಾಲ್ಕನೇ ಬಾರಿಗೆ ಸ್ಪರ್ಧಿಸುತ್ತಿರುವ ಡಿಎಂಕೆ ಅಧ್ಯಕ್ಷ ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರೊಂದಿಗೆ ತೀವ್ರ ತ್ರಿಕೋನ ಸ್ಪರ್ಧೆಯಲ್ಲಿದ್ದಾರೆ.

ಸಂತಾನಕೃಷ್ಣನ್ ಮತ್ತು ಬಾಬು ಚುನಾವಣಾ ಸ್ಪರ್ಧೆಗೆ ಹೊಸಬರಲ್ಲದಿದ್ದರೂ, 2011, 2016 ಮತ್ತು 2021ರ ವಿಧಾನಸಭಾ ಚುನಾವಣೆಯಲ್ಲಿ ಕೊಲತ್ತೂರಿನಿಂದ ಗೆದ್ದು, ಆ ಸ್ಥಾನವನ್ನು ತಮ್ಮ ಕೋಟೆಯನ್ನಾಗಿ ಮಾಡಿಕೊಂಡಿದ್ದ ಸ್ಟಾಲಿನ್ ವಿರುದ್ಧ ಅವರು ಸ್ಪರ್ಧಿಸುತ್ತಿದ್ದಾರೆ.ಹೆಚ್ಚಿನ ನಿರೀಕ್ಷೆಗಳ ಹೊರತಾಗಿಯೂ, ಸಂತಾನಕೃಷ್ಣನ್ ಮತ್ತು ಬಾಬು ಇಬ್ಬರೂ ಉತ್ತರ ಚೆನ್ನೈನ ಈ ಕ್ಷೇತ್ರದಲ್ಲಿ ಸಕ್ರಿಯವಾಗಿ ಪ್ರಚಾರ ಮಾಡುತ್ತಿದ್ದಾರೆ, ಅಲ್ಲಿ ಸ್ಟಾಲಿನ್ ಮುಧಲ್ವರ್ ಪಡೈಪ್ಪಗಮ್, ಸಹ-ಕೆಲಸದ ಸ್ಥಳ ಮತ್ತು ಕಲಿಕಾ ಕೇಂದ್ರ ಸೇರಿದಂತೆ ಹಲವಾರು ನವೀನ ಉಪಕ್ರಮಗಳನ್ನು ಪರಿಚಯಿಸಿದ್ದಾರೆ, ಇದನ್ನು ರಾಜ್ಯದಾದ್ಯಂತ ಇತರ ಕ್ಷೇತ್ರಗಳಲ್ಲಿ ಪುನರಾವರ್ತಿಸಲಾಗಿದೆ.

## ಡಿಲಿಮಿಟೇಷನ್, ಮಹಿಳಾ ಮೀಸಲಾತಿಗಳನ್ನು ತಿರಸ್ಕರಿಸಬೇಕು

**ನವದೆಹಲಿ:** ಮಹಿಳಾ ಮೀಸಲಾತಿ ಕಾನೂನನ್ನು ಜಾರಿಗೆ ತರುವ ನೆಪದಲ್ಲಿ ಕೇಂದ್ರ ಸರ್ಕಾರ ತಂದಿರುವ ಮಸೂದೆಗಳ ನಿಜವಾದ ಉದ್ದೇಶ ದುರುದ್ದೇಶಪೂರಿತವಾಗಿದೆ ಮತ್ತು ಅವುಗಳನ್ನು ಪ್ರಸ್ತುತ ರೂಪದಲ್ಲಿ ಸಂಪೂರ್ಣವಾಗಿ ತಿರಸ್ಕರಿಸಬೇಕಾಗಿದೆ ಎಂದು ಕಾಂಗ್ರೆಸ್ ಹೇಳಿದೆ. ಕಾಂಗ್ರೆಸ್ ಸಂವಹನ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಮೂರು ಮಸೂದೆಗಳನ್ನು ಲೋಕಸಭೆಯಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ ಮತ್ತು ಪ್ಯಾಕೇಜಿಂಗ್ ಮತ್ತು ಮಾರ್ಕೆಟಿಂಗ್ ಮಹಿಳಾ ಮೀಸಲಾತಿಯಾಗಿದೆ ಆದರೆ ಮೂಲಭೂತ ಅಂಶಗಳು ಡಿಲಿಮಿಟೇಶನ್‌ಗೆ ಸಂಬಂಧಿಸಿವೆ ಎಂದು ಅವರು ಹೇಳಿದರು. ಬಿಜೆಪಿ ಈಗ ಪ್ರಬಲವಾಗಿರುವ ಕೆಲವು ಜನನಿಬಿಡ ರಾಜ್ಯಗಳಿಗೆ ಸವಲತ್ತು ನೀಡುವ ಡಿಲಿಮಿಟೇಶನ್ ಪ್ರಸ್ತಾಪಗಳ ಬಗ್ಗೆ ದೇಶಾದ್ಯಂತ ಅನೇಕ ಕಳವಳಗಳು ವ್ಯಕ್ತವಾಗಿವೆ. ಲೋಕಸಭೆಯಲ್ಲಿ ಹಲವಾರು ರಾಜ್ಯಗಳ ಸಾಪೇಕ್ಷ ಬಲವು ವಾಸ್ತವವಾಗಿ ಕುಸಿಯುತ್ತದೆ ಎಂದು ರಮೇಶ್ ಎಕ್ಸ್ ಮಾಡಿದ್ದಾರೆ. ಅಸ್ಸಾಂ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಡಿಲಿಮಿಟೇಶನ್ ಅನ್ನು ವಾಸ್ತವವಾಗಿ ಮಾಡಿದ ವಿಧಾನವು ಮೋದಿ-ಶಾ ಜೋಡಿ ಎಷ್ಟು ಪೈಶಾಚಿಕವಾಗಿ ಕೆಲಸ ಮಾಡುತ್ತದೆ ಎಂದು ತೋರಿಸುತ್ತದೆ ಎಂದು ಅವರು ಹೇಳಿದರು.ಈ ಮಸೂದೆಗಳ ನಿಜವಾದ ಉದ್ದೇಶ ದುರುದ್ದೇಶಪೂರಿತವಾಗಿದೆ, ಅವುಗಳ ವಿಷಯವು ಮೋಸದಾಯಕವಾಗಿದೆ ಎಂದರು.

## ಅಮೆರಿಕ ರಾಷ್ಟ್ರೀಯ ಭದ್ರತಾ ಸಲಹೆಗಾರರೊಂದಿಗೆ ವಿನಯ್ ಮೋಹನ್ ಕ್ವಾತ್ರಾ ಮಾತುಕತೆ

**ವಾಷಿಂಗ್ಟನ್:** ಅಮೆರಿಕದಲ್ಲಿರುವ ಭಾರತೀಯ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ ಅವರು ಅಲ್ಲಿನ ವ್ಯಾಪಾರ ಪ್ರತಿನಿಧಿ ಜೇಮಿಸನ್ ಗ್ರೀರ್ ಮತ್ತು ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ರಾಬರ್ಟ್ ಒ ಬ್ರೇನ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಭಾರತ ಮತ್ತು ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ (ಬಿಟಿಎ) ಸೂಕ್ಷ್ಮ ಅಂಶಗಳ ಕುರಿತು ಮಾತುಕತೆ ನಡೆಸುತ್ತಿರುವಾಗ ಈ ಸಭೆ ನಡೆದಿದೆ.ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಕುರಿತು ಚರ್ಚೆ ನಡೆಸಲು ಭಾರತೀಯ ಅಧಿಕಾರಿಗಳ ನಿಯೋಗ ಅಮೆರಿಕಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ.ಇಂಡಿಯಾ ಹೌಸ್‌ನಲ್ಲಿ ಆಂಬ್. ಜೇಮಿಸನ್ ಗ್ರೀರ್ ಮತ್ತು ಆಂಬ್. ರಾಬರ್ಟ್ ಒ ಬ್ರೇನ್ ಅವರನ್ನು ಆತಿಥ್ಯ ವಹಿಸಲು ಗೌರವ ಎಂದು ಕ್ವಾತ್ರಾ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಫೆಬ್ರವರಿಯಲ್ಲಿ, ಭಾರತ ಮತ್ತು ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತಕ್ಕೆ ಚೌಕಟ್ಟನ್ನು ಅಂತಿಮಗೊಳಿಸುವುದಾಗಿ ಘೋಷಿಸಿದವು.

ಆ ಚೌಕಟ್ಟಿನ ಪ್ರಕಾರ, ಭಾರತದ ಮೇಲಿನ ಸುಂಕವನ್ನು ಶೇ.18 ಕ್ಕೆ ಇಳಿಸಲು ಅಮೆರಿಕ ಒಪ್ಪಿಕೊಂಡಿತ್ತು.ನಾವು ವಿವಿಧ ದ್ವಿಪಕ್ಷೀಯ ಸಹಕಾರ ಅವಕಾಶಗಳ ಕುರಿತು ಉತ್ಪಾದಕ ಸಂಭಾಷಣೆ ನಡೆಸಿದ್ದೇವೆ. ಪ್ರಪಂಚದಾದ್ಯಂತದ ಪ್ರಮುಖ ಬೆಳವಣಿಗೆಗಳನ್ನು ಸಹ ಚರ್ಚಿಸಲಾಗಿದೆ. ಬಲವಾದ ಭಾರತ-ಯುಎಸ್ ಸಂಬಂಧಗಳಿಗೆ ಅವರ ಬಲವಾದ ಮತ್ತು ನಿರಂತರ ಬೆಂಬಲವನ್ನು ಶ್ಲಾಘಿಸುತ್ತೇವೆ ಎಂದು ಕ್ವಾತ್ರಾ ಹೇಳಿದರು.



ಕಳೆದ ವಾರ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಅವರು ವಾಷಿಂಗ್ಟನ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ದ್ವಿಪಕ್ಷೀಯ ವ್ಯಾಪಾರವು ಚರ್ಚೆಯ ಭಾಗವಾಗಿತ್ತು.ಫೆಬ್ರವರಿ 20 ರಂದು, ಯುಎಸ್ ಸುಪ್ರೀಂ ಕೋರ್ಟ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಂತರರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆ (ಐಇಪಿಪಿಎ) ಅಡಿಯಲ್ಲಿ ವಿಧಿಸಲಾದ ಸುಂಕ ನೀತಿಗಳು ಸಂವಿಧಾನಬಾಹಿರ ಎಂದು ತೀರ್ಪು ನೀಡಿತು.

ಭಾರತ ಮತ್ತು ಯುಎಸ್ ಆರಂಭದಲ್ಲಿ ಮಾರ್ಚ್‌ನಲ್ಲಿ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲು ಯೋಜಿಸುತ್ತಿದ್ದವು, ಆದರೆ ಯುಎಸ್ ಸುಪ್ರೀಂಕೋರ್ಟ್ ತೀರ್ಪಿನ ನಂತರ ಸುಂಕ ಹೇರುವ ವ್ಯವಸ್ಥೆಯಲ್ಲಿ ಬದಲಾವಣೆಗಳಾಗಿವೆ.

**ವ್ಯಾಪಾರ ಮಾತುಕತೆ**

**ಅಮೆರಿಕದ ಹೊಸ ಜಾಗತಿಕ ಸುಂಕ ವಾಸ್ತುಶಿಲ್ಪ ಜಾರಿಗೆ ಬಂದ ನಂತರ ಒಪ್ಪಂದಕ್ಕೆ ಸಹಿ ಹಾಕಲಾಗುವುದು ಎಂದು ಅಧಿಕೃತ ಮೂಲಗಳು ಈ ಹಿಂದೆ ಹೇಳಿದ್ದವು. ಚೀನಾ ಮತ್ತು ಭಾರತ ಸೇರಿದಂತೆ ಕೆಲವು ದೇಶಗಳು ಕೆಲವು ಉತ್ಪಾದನಾ ವಲಯಗಳಲ್ಲಿ ಬಲವಂತದ ಕಾರ್ಮಿಕರನ್ನು ಬಳಸಿಕೊಂಡು ಉತ್ಪಾದಿಸುವ ಸರಕುಗಳ ಆಮದು ಮತ್ತು ಹೆಚ್ಚಿನ ಸಾಮರ್ಥ್ಯದ ಉತ್ಪಾದನೆಯ ಮೇಲಿನ ನಿಷೇಧವನ್ನು ಜಾರಿಗೊಳಿಸುವಲ್ಲಿ ವಿಫಲವಾದ ಬಗ್ಗೆ ವ್ಯವಹರಿಸುವ ಸೆಕ್ಷನ್ 301 ರ ಅಡಿಯಲ್ಲಿ ಯುಎಸ್ ಟ್ರೇಡ್ ಪ್ರತಿನಿಧಿಯು ಪ್ರಾರಂಭಿಸಿದ ಎರಡು ತನಿಖೆಗಳ ಮೋಡದ ಅಡಿಯಲ್ಲಿ ವ್ಯಾಪಾರ ಮಾತುಕತೆಗಳು ಬರುತ್ತವೆ.**

## ಮಿನಿ ನ್ಯೂಸ್

### ಇನ್ಫೋಸಿಸ್‌ನಲ್ಲೂ ಕಾರ್ಪೋರೇಟ್ ಜಿಹಾದ್

**ಮುಂಬೈ:** ನಾಸಿಕ್‌ನ ಟಿಸಿಎಸ್ ಸಂಸ್ಥೆ ಬಳಿಕ ಸಾಫ್ಟ್‌ವೇರ್ ದಿಗ್ಗಜ ಇನ್ಫೋಸಿಸ್‌ನಲ್ಲೂ ಕಾರ್ಪೋರೇಟ್ ಜಿಹಾದ್ ನಡೆಯುತ್ತಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಪುಣೆಯ ಇನ್ಫೋಸಿಸ್ ಬಿಪಿಎಂ ಘಟಕದಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿಗಳಿಗೆ ಜಿಹಾದಿ ಕಿರುಕುಳ ನೀಡಲಾಗುತ್ತಿದೆ ಎಂದು ಎಕ್ಸ್‌ನಲ್ಲಿ ಬಳಕೆದಾರರೊಬ್ಬರು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನಾವಿಸ್, ಸಚಿವ ನಿತೀಶ್ ರಾಣೆ ಅವರಿಗೆ ದೂರು ನೀಡಿದ್ದಾರೆ. ಈ ಆರೋಪಗಳಿಗೆ ಸಂಬಂಧಿಸಿದಂತೆ ಇನ್ಫೋಸಿಸ್ ಕಂಪನಿಯು ಸ್ಪಷ್ಟನೆ ನೀಡಿದ್ದು, ಯಾವುದೇ ರೀತಿಯ ತಾರತಮ್ಯ ಅಥವಾ ಕಿರುಕುಳದ ವಿರುದ್ಧ ಕಂಪನಿಯು ಶೂನ್ಯ ಸಹನೆ ನೀತಿಯನ್ನು ಹೊಂದಿದೆ ಎಂದಿದೆ.

ತನ್ನ ಉದ್ಯೋಗಿಗಳಿಗೆ ಸುರಕ್ಷಿತ ಮತ್ತು ಗೌರವಯುತ ಕೆಲಸದ ವಾತಾವರಣವನ್ನು ಒದಗಿಸಲು ಬದ್ಧವಾಗಿರುವುದಾಗಿ ಕಂಪನಿ ಹೇಳಿದೆ. ನಾಸಿಕ್‌ನ ಟಿಸಿಎಸ್ ಬಿಪಿಓ ಕಚೇರಿಯಲ್ಲಿ ನಡೆದಿದೆ ಎನ್ನಲಾದ ಮತಾಂತರ ಮತ್ತು ಲೈಂಗಿಕ ಕಿರುಕುಳದ ಪ್ರಕರಣಗಳ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಜಾಲತಾಣ ಬಳಕೆದಾರರು ಕಾರ್ಪೋರೇಟ್ ಜಿಹಾದ್ ಪದವನ್ನು ಬಳಸಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ.

### ಟ್ಯಾಂಕರ್‌ಗೆ ಎಲ್‌ಸಿವಿ ಡಿಕ್ಕಿ : 8 ಮಂದಿ ಸಾವು

**ಚಿಲಕಲಡೋನ:** ಗುರು ರಾಯರ ದರ್ಶನಕ್ಕೆ ತೆರಳುತ್ತಿದ್ದಾಗ ಕರ್ನೂಲ್ ಜಿಲ್ಲೆಯ ಮಂತ್ರಾಲಯದಲ್ಲಿ ಲಘು ವಾಣಿಜ್ಯ ವಾಹನ (ಎಲ್‌ಸಿವಿ)ಕ್ಕೆ ಟ್ಯಾಂಕರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಐವರು ಮಹಿಳೆಯರು ಸೇರಿದಂತೆ ಕನಿಷ್ಠ ಎಂಟು ಭಕ್ತರು ಸಾವನ್ನಪ್ಪಿದ್ದು, 10 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರೀ ರಾಘವೇಂದ್ರ ಸ್ವಾಮಿಯ ದರ್ಶನಕ್ಕಾಗಿ ಭಕ್ತರು ಮಂತ್ರಾಲಯಕ್ಕೆ ಪ್ರಯಾಣಿಸುತ್ತಿದ್ದಾಗ ಈ ಅಪಘಾತ ಸಂಭವಿಸಿದ್ದು, ಸುಮಾರು 20 ಪ್ರಯಾಣಿಕರನ್ನು ಹೊತ್ತಿದ್ದ ವಾಹನವು ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿ ಗಾಯಾಳುಗಳ ಸ್ಥಿತಿಯ ಬಗ್ಗೆ ವಿಚಾರಿಸಿದರು. ಎಂಟು ಭಕ್ತರು ಸ್ಥಳದಲ್ಲೇ ಸಾವನ್ನಪ್ಪಿದರು, ಇತರ ಹಲವರು ಗಾಯಗೊಂಡರು ಮತ್ತು ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಯಿತು ಎಂದು ಯಮ್ಮಿಗನೂರು ಉಪ ಪೊಲೀಸ್ ವರಿಷ್ಠಾಧಿಕಾರಿ (ಡಿಎಸ್‌ಪಿ) ಎನ್. ಭಾರ್ಗವಿ ಪಿಟಿಐಗೆ ತಿಳಿಸಿದರು. ಎನ್‌ಎಚ್ 167 ರಲ್ಲಿ ಬೆಳಗಿನ ಜಾವ 3 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದ್ದು, ಚಾಲಕ ನಿದ್ರೆಯಲ್ಲಿದ್ದಾಗ ತಪ್ಪು ದಿಕ್ಕಿನಲ್ಲಿ ಚಾಲನೆ ಮಾಡಿದ್ದರಿಂದ ಅಪಘಾತ ಸಂಭವಿಸಿದೆ ಎಂದು ಅವರು ಹೇಳಿದರು.

### ಅರಣ್ಯ ಪ್ರದೇಶದಲ್ಲಿ ಕಾಲೇಜು ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ

**ಇಂದೋರ್:** ಮಧ್ಯಪ್ರದೇಶದ ಡಾ. ಅಂಬೇಡ್ಕರ್ ನಗರದ (ಮೋವ್) ಸಮೀಪವಿರುವ ಬೆರ್ಚಾ ಅರಣ್ಯ ಪ್ರದೇಶವು ಒಂದು ಘೋರ ಅಪರಾಧಕ್ಕೆ ಸಾಕ್ಷಿಯಾಗಿದೆ. ದೇವಸ್ಥಾನಕ್ಕೆ ಭೇಟಿ ನೀಡಿ ಗೆಳೆಯನೊಂದಿಗೆ ಮಾತನಾಡುತ್ತಾ ಕುಳಿತಿದ್ದ ಕಾಲೇಜು ವಿದ್ಯಾರ್ಥಿನಿಯ ಮೇಲೆ ಇಬ್ಬರು ಅಪರಿಚಿತ ವ್ಯಕ್ತಿಗಳು ಮೃಗೀಯವಾಗಿ ದಾಳಿ ನಡೆಸಿದ್ದಾರೆ. ಪೊಲೀಸರ ಮಾಹಿತಿಯ ಪ್ರಕಾರ, ಕಾಲೇಜು ವಿದ್ಯಾರ್ಥಿನಿ ಮತ್ತು ಆಕೆಯ ಗೆಳೆಯ ಸಂಜೆ ಪ್ರಸಿದ್ಧ ಲಗ್ನಶಾ ಭೈರವ ಬಾಬಾ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ದರ್ಶನದ ನಂತರ ಇಬ್ಬರೂ ಸಮೀಪದ 'ಜೈ ಜವಾನ್ ಜೈ ಕಿಸಾನ್' ಕೊಳದ ಬಳಿ ತೆರಳಿದ್ದರು. ಸಂಜೆ ಅಸ್ಪಷ್ಟ ಬೆಳಕಿರುವಾಗಲೇ ಪೊದೆಯ ಹಿಂದೆ ಹೊಂಚು ಹಾಕಿ ಕುಳಿತಿದ್ದ ಇಬ್ಬರು ಕಾಮುಕರು ಏಕಾಏಕಿ ಆಕೆಯ ಮೇಲೆರಗಿದ್ದಾರೆ. ಗೆಳೆಯನಿಗೆ ಬರ್ಬರ ಥಳಿತ, ಯುವತಿಯ ಅಪಹರಣ ದುಷ್ಕರ್ಮಿಗಳು ಮೊದಲು ವಿದ್ಯಾರ್ಥಿನಿಯ ಗೆಳೆಯನನ್ನು ಗುರಿಯಾಗಿಸಿಕೊಂಡರು. ಕೈಯಲ್ಲಿದ್ದ ಕೋಲುಗಳಿಂದ ಆತನ ತಲೆ ಮತ್ತು ಮೈಮೇಲೆ ಮನಬಂದಂತೆ ಹೊಡೆದು ಗಾಯಗೊಳಿಸಿದರು. ಆತ ಪ್ರಾಣಭಯದಿಂದ ದಿಕ್ಕಾಪಾಲಾಗಿ ಓಡಿದಾಗ, ಕಿಡಿಗೇಡಿಗಳು ಯುವತಿಯನ್ನು ಬಲವಂತವಾಗಿ ದಟ್ಟ ಕಾಡಿನೊಳಗೆ ಎಳೆದುಕೊಂಡು ಹೋಗಿದ್ದಾರೆ. ಅಲ್ಲಿ ಆಕೆಯ ಕಿರುಚಾಟಕ್ಕೂ ಕಿವಿಗೊಡದೆ ಇಬ್ಬರೂ ಅತ್ಯಾಚಾರ ಎಸಗಿದ್ದಾರೆ.

### ಪ್ರಿಯಕರನಿಗೆ ಗಿಫ್ಟ್ ಕೊಡಲು 2 ಲಕ್ಷ ರೂ. ಮೌಲ್ಯದ ವಾಚ್ ಕದ್ದ ಯುವತಿ ಅರೆಸ್ಟ್

**ಹೈದರಾಬಾದ್:** ಪ್ರೀತಿಗಾಗಿ ಏನನ್ನಾದರೂ ಮಾಡಲು ಸಿದ್ಧ ಎನ್ನುವ ಮಾತಿದೆ, ಆದರೆ ಇಲ್ಲೊಬ್ಬಳು ಯುವತಿ ತನ್ನ ಪ್ರಿಯಕರನಿಗೆ ದುಬಾರಿ ಉಡುಗೊರೆ ನೀಡಲು ಹೋಗಿ ಅರೆಸ್ಟ್ ಆಗಿದ್ದಾಳೆ. ನಗರದ ಜುಬಿಲಿ ಹಿಲ್ಸ್‌ನಲ್ಲಿರುವ ಐಷಾರಾಮಿ ಶೋರೂಮ್‌ನಿಂದ ಸುಮಾರು 2 ಲಕ್ಷ ರೂಪಾಯಿ ಮೌಲ್ಯದ ವಾಚ್ ಗಳನ್ನು ಕಳ್ಳತನ ಮಾಡಿದ ಆರೋಪದ ಮೇಲೆ 26 ವರ್ಷದ ಯುವತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪೊಲೀಸರು ನೀಡಿದ ಮಾಹಿತಿಯ ಪ್ರಕಾರ, ಆರೋಪಿ ಯುವತಿ ಜುಬಿಲಿ ಹಿಲ್ಸ್‌ನಲ್ಲಿರುವ ಪ್ರತಿಷ್ಠಿತ ವಾಚ್ ಶೋರೂಮ್‌ಗೆ ಗ್ರಾಹಕಿಯಂತೆ ಎಂಟ್ರಿ ಕೊಟ್ಟಿದ್ದಾಳೆ. ತನಗೆ ಒಳ್ಳೆಯ ವಾಚ್‌ಗಳನ್ನು ತೋರಿಸುವಂತೆ ಸಿಬ್ಬಂದಿಯನ್ನು ಕೇಳಿದ್ದಾಳೆ. ಸಿಬ್ಬಂದಿ ವಿವಿಧ ಮಾದರಿಗಳನ್ನು ತೋರಿಸುತ್ತಿದ್ದಾಗ, ಯಾರಿಗೂ ಸಂಶಯ ಬರದಂತೆ ಸುಮಾರು ತಲಾ 1 ಲಕ್ಷ ರೂಪಾಯಿ ಮೌಲ್ಯದ ಎರಡು 'ಟಿಸ್ಸೋಟ್' ವಾಚ್‌ಗಳನ್ನು ಸದ್ದಿಲ್ಲದೆ ತನ್ನ ಬ್ಯಾಗ್‌ನಲ್ಲಿ ಅಡಗಿಸಿಟ್ಟುಕೊಂಡಿದ್ದಾಳೆ. ನಂತರ ಏನೂ ತಿಳಿಯದವಳಂತೆ ಅಲ್ಲಿಂದ ಕಾಲ್ಕಿತ್ತಿದ್ದಾಳೆ. ವಾಚ್‌ಗಳು ನಾಪತ್ತೆಯಾಗಿರುವುದು ಗಮನಕ್ಕೆ ಬರುತ್ತಿದ್ದಂತೆ ಶೋರೂಮ್ ಸಿಬ್ಬಂದಿ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದ್ದಾರೆ. ಈ ವೇಳೆ ಯುವತಿಯ ಕೈಚಳಕ ಬಯಲಾಗಿದೆ. ತಕ್ಷಣವೇ ಜುಬಿಲಿ ಹಿಲ್ಸ್ ಪೊಲೀಸರಿಗೆ ದೂರು ನೀಡಲಾಗಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದರು.

# ರಾ.ಹೆದ್ದಾರಿಗಳಲ್ಲಿ ಸಂಚರಿಸುವ ವಾಹನ ಸವಾರರಿಗೆ ಮಹತ್ವದ ಎಚ್ಚರಿಕೆ

### ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ರಾಷ್ಟ್ರೀಯ ಹೆದ್ದಾರಿಗಳ ಶುಲ್ಕ (ನಾಲ್ಕನೇ ತಿದ್ದುಪಡಿ) ನಿಯಮಗಳು–2026 ಜಾರಿ

**ನವದೆಹಲಿ:** ದೇಶಾದ್ಯಂತದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನ ಸವಾರರಿಗೆ ಕೇಂದ್ರ ಸರ್ಕಾರವು ಮಹತ್ವದ ಎಚ್ಚರಿಕೆ ನೀಡಿದೆ. ಮಿತಿಮೀರಿದ ಭಾರ (ಓವರ್‌ಲೋಡ್) ಹೊತ್ತೊಯ್ಯುವ ವಾಹನಗಳ ಮೇಲೆ ಹೊಸ ನಿಯಮಗಳನ್ನು ಜಾರಿಗೊಳಿಸಲಾಗಿದೆ. ನಿಗದಿತ ಮಿತಿಗಿಂತ ಹೆಚ್ಚು ತೂಕದ ಸರಕು ಅಥವಾ ಪ್ರಯಾಣಿಕರನ್ನು ಸಾಗಿಸಿದರೆ, ಇನ್ನು ಮುಂದೆ ಭಾರೀ ಮೊತ್ತದ ಹೆಚ್ಚುವರಿ ದಂಡವನ್ನು ಪಾವತಿಸಲೇಬೇಕು. ಪ್ರತಿದಿನ ಲಕ್ಷಾಂತರ ವಾಹನಗಳು ಸಂಚರಿಸುವ ರಾಷ್ಟ್ರೀಯ ಹೆದ್ದಾರಿಗಳ ಸಂರಕ್ಷಣೆ, ಮೂಲಸೌಕರ್ಯ ಸುಧಾರಣೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಕೇಂದ್ರ ಸರ್ಕಾರ ಹೊಸ ನಿಯಮ ಜಾರಿಗೆ ತಂದಿದೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ರಾಷ್ಟ್ರೀಯ ಹೆದ್ದಾರಿಗಳ ಶುಲ್ಕ (ನಾಲ್ಕನೇ ತಿದ್ದುಪಡಿ) ನಿಯಮಗಳು–2026ನ್ನು ಜಾರಿಗೊಳಿಸಿದೆ. ಇದರ ಪ್ರಕಾರ, ವಾಹನವು ಹೊತ್ತೊಯ್ಯುವ ಭಾರದ ಪ್ರಮಾಣವನ್ನು ಶೇಕಡಾವಾರು ಪ್ರಕಾರ ವಿಂಗಡಿಸಿ, ದಂಡವನ್ನು ನಿಗದಿಪಡಿಸಲಾಗಿದೆ.



**ಸುರಕ್ಷತೆಯ ದೃಷ್ಟಿಯಿಂದ ಹೊಸ ನಿಯಮ**

ಈ ನಿಯಮವು ಮುಖ್ಯವಾಗಿ ವಾಣಿಜ್ಯ ವಾಹನಗಳಿಗೆ (ಟ್ರಕ್, ಲಾರಿ, ಬಸ್, ಟೆಂಪೊ ಇತ್ಯಾದಿ) ಅನ್ವಯಿಸುತ್ತದೆ.

ಒಂದು ವಾಹನದ ಸಾಮಾನ್ಯ ಟೋಲ್ ಶುಲ್ಕ 100 ಆಗಿದ್ದರೆ, ಅದು ಶೇ.40ಕ್ಕಿಂತ ಹೆಚ್ಚು ಓವರ್‌ಲೋಡ್ ಹೊತ್ತಿದ್ದರೆ, ಆ ವಾಹನವು 4 ಪಟ್ಟು ಹೆಚ್ಚುವರಿ ದಂಡವನ್ನು ಕಟ್ಟಬೇಕಾಗುತ್ತದೆ. ಈ ದಂಡವು ಸಾಮಾನ್ಯ ಟೋಲ್ ಶುಲ್ಕದ ಜೊತೆಗೆ ಹೆಚ್ಚುವರಿಯಾಗಿ ಸಂಗ್ರಹವಾಗಲಿದೆ. ತೂಕ ಮಾಡುವ ಸೌಲಭ್ಯವಿಲ್ಲದ ಟೋಲ್‌ಗೇಟ್ ಗಳಲ್ಲಿ ಯಾವುದೇ ಹೆಚ್ಚುವರಿ ದಂಡವನ್ನು ವಿಧಿಸಲಾಗುವುದಿಲ್ಲ. ಆದರೆ ಡಿಜಿಟಲ್ ತೂಕದ ಯಂತ್ರಗಳನ್ನು ಹೊಂದಿರುವ ಟೋಲ್ ಪ್ಲಾಜಾಗಳಲ್ಲಿ ಮಾತ್ರ ಈ ನಿಯಮ ಕಟ್ಟುನಿಟ್ಟಾಗಿ ಜಾರಿಯಲ್ಲಿರುತ್ತದೆ.

**ಡಿಜಿಟಲ್ ತೂಕದ ಯಂತ್ರಗಳ ಅಳವಡಿಕೆ**


**ಈ ಹೊಸ ನಿಯಮಗಳನ್ನು ಜಾರಿಗೊಳಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ದೇಶದ ಪ್ರಮುಖ ಟೋಲ್ ಪ್ಲಾಜಾಗಳಲ್ಲಿ ಡಿಜಿಟಲ್ ತೂಕದ ಯಂತ್ರಗಳನ್ನು ಅಳವಡಿಸುತ್ತಿದೆ. ಈ ಯಂತ್ರಗಳು ವಾಹನದ ತೂಕವನ್ನು ಸ್ವಯಂಚಾಲಿತವಾಗಿ ಅಳೆದು, ಓವರ್‌ಲೋಡ್ ಪ್ರಮಾಣವನ್ನು ನಿಖರವಾಗಿ ಪತ್ತೆ ಮಾಡುತ್ತವೆ.**

**ಸರ್ಕಾರದ ಹೇಳಿಕೆ ಏನು?**

**ಈ ನಿಯಮಗಳ ಮೂಲಕ ರಾಷ್ಟ್ರೀಯ ಹೆದ್ದಾರಿಗಳ ದೀರ್ಘವಾದ ಬಾಳಿಕೆ ಹೆಚ್ಚಿಸುವುದು, ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವುದು ಮತ್ತು ಅಕ್ರಮ ಸರಕು ಸಾಗಣೆಗೆ ಕಡಿವಾಣ ಹಾಕುವುದು ಸರ್ಕಾರದ ಉದ್ದೇಶವಾಗಿದೆ. ಅತಿಯಾದ ಭಾರದಿಂದಾಗಿ ರಸ್ತೆಗಳು ಶೀಘ್ರದಲ್ಲೇ ಹಾಳಾಗುತ್ತವೆ, ಅಪಘಾತ ಪ್ರಮಾಣ ಹೆಚ್ಚುತ್ತದೆ. ಹೀಗಾಗಿ ವಾಹನ ಸವಾರರು ತಮ್ಮ ವಾಹನಗಳಲ್ಲಿ ನಿಗದಿತ ಮಿತಿಯೊಳಗೆ ಭಾರವನ್ನೇ ಹೊತ್ತೊಯ್ಯಬೇಕು ಎಂದು ಕೇಂದ್ರ ಸಚಿವಾಲಯ ಮನವಿ ಮಾಡಿದೆ.**

ಹೊಸ ನಿಯಮದ ಪ್ರಕಾರ, ಓವರ್ಲೋಡ್ ದಂಡವನ್ನು ಕೂಡ ಪಾವತಿಸಬೇಕಾಗುತ್ತದೆ. ನಗದು ಅಥವಾ ಇತರ ಯಾವುದೇ ವಿಧಾನದಲ್ಲಿ ಪಾವತಿ ಸ್ವೀಕರಿಸಲಾಗುವುದಿಲ್ಲ. ಇತ್ತೀಚೆಗಷ್ಟೇ ಏ.10ರಿಂದ ಸರ್ಕಾರವು ನಗದು ಪಾವತಿಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿ, ಟೋಲ್ ಕಟ್ಟದೆ ಅಥವಾ ನಿಯಮ ಉಲ್ಲಂಘಿಸಿದರೆ ಭಾರೀ ದಂಡಕ್ಕೆ ಗುರಿಯಾಗಬೇಕಾಗುತ್ತದೆ. ವಾಣಿಜ್ಯ ವಾಹನ ಚಾಲಕರು ಮತ್ತು ಮಾಲೀಕರು ತಮ್ಮ ವಾಹನದ ನೋಂದಣಿ ಪ್ರಮಾಣಪತ್ರದಲ್ಲಿ ನಮೂದಿಸಿರುವ ಗರಿಷ್ಠ ಸಾಗಣೆ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು, ಅದನ್ನು ಮೀರದಂತೆ ಎಚ್ಚರಿಕೆ ವಹಿಸಬೇಕು. ಇಲ್ಲವಾದಲ್ಲಿ, 2 ಪಟ್ಟು ಅಥವಾ 4 ಪಟ್ಟು ಹೆಚ್ಚುವರಿ ಟೋಲ್ ದಂಡ ಭಾರಿಯಾಗಿ ಪರಿಣಮಿಸಬಹುದು.

**ಶೇ. 10 ರವರೆಗೆ (ಸಣ್ಣ ಪ್ರಮಾಣದ ಓವರ್‌ಲೋಡ್):** ನಿಗದಿತ ಮಿತಿಗಿಂತ ಶೇಕಡಾ 10ರಷ್ಟು ಹೆಚ್ಚುವರಿ ಭಾರವಿದ್ದರೆ, ಯಾವುದೇ ದಂಡ ಇರುವುದಿಲ್ಲ. ಇದು ಸಣ್ಣ ತಪ್ಪುಗಳಿಗೆ ಗ್ರೇಸ್ ಅವಕಾಶ. ಶೇ. 10 ರಿಂದ ಶೇ. 40 ರವರೆಗೆ (ಮಧ್ಯಮ ಪ್ರಮಾಣದ ಓವರ್ ಲೋಡ್) ಮಿತಿಗಿಂತ ಶೇ. 10ರಿಂದ 40ರಷ್ಟು ಭಾರ ಹೆಚ್ಚಿದ್ದರೆ, ಸಾಮಾನ್ಯ ಟೋಲ್ ಶುಲ್ಕಕ್ಕಿಂತ 2 ಪಟ್ಟು ದಂಡ ವಿಧಿಸಲಾಗುತ್ತದೆ. ಶೇ. 40 ಕ್ಕಿಂತ ಹೆಚ್ಚು (ಅತಿ ಪ್ರಮಾಣದ ಓವರ್‌ಲೋಡ್) ಒಂದು ವೇಳೆ ಹೆಚ್ಚುವರಿ ಭಾರವು ಶೇ. 40ನ್ನು ಮೀರಿದರೆ, ಆಗ 4 ಪಟ್ಟು ಹೆಚ್ಚಿನ ದಂಡವನ್ನು ಪಾವತಿಸಬೇಕಾಗುತ್ತದೆ.




# ರೆಪ್ಪೆ ಅಲುಗಾಡಿಸೋಕೆ ಬಿಡಲ್ಲ ಒಂದೊಂದು ದೃಶ್ಯ!

ಮೊದಲ ದೃಶ್ಯದಿಂದಕ್ಲೈಮ್ಯಾಕ್ಸ್‌ವರೆಗೆ, ಸಿನಿಮಾ ತನ್ನ ರೋಮಾಂಚಕ ಕಥಾಹಂದರದಿಂದ ಎಲ್ಲರನ್ನು ಆಕರ್ಷಿಸುತ್ತದೆ. ಕ್ಲೈಮ್ಯಾಕ್ಸ್ ಕೇವಲ ಕ್ಲೈಮ್ಯಾಕ್ಸ್ ಆಗಿರದೆ ಸಿನಿಮಾ ಮುಗಿದ ಬಳಿಕವೂ ಅದೇ ಗುಂಗಿನಲ್ಲಿ ಇರುವಂತೆ ಮಾಡುತ್ತದೆ. ಸಾಮಾನ್ಯವಾಗಿ ಕೆಲವು ಸಿನಿಮಾಗಳು ಶುರುವಿನಲ್ಲಿ ನಿಧಾನಗತಿಯಲ್ಲಿ ಸಾಗಿ ಕ್ಲೈಮ್ಯಾಕ್ಸ್ ಹಂತ ತಲುಪುತ್ತವೆ. ಆದರೆ ಈ ಸಿನಿಮಾ ಸಂಪೂರ್ಣ ವಿರುದ್ಧವಾಗಿದೆ. ಮೊದಲ ದೃಶ್ಯದಿಂದಕ್ಲೈಮ್ಯಾಕ್ಸ್‌ವರೆಗೆ, ಸಿನಿಮಾ ತನ್ನ ರೋಮಾಂಚಕ ಕಥಾಹಂದರದಿಂದ ಎಲ್ಲರನ್ನು ಆಕರ್ಷಿಸುತ್ತದೆ. ಕ್ಲೈಮ್ಯಾಕ್ಸ್ ಕೇವಲ ಕ್ಲೈಮ್ಯಾಕ್ಸ್ ಆಗಿರದೆ ಸಿನಿಮಾ ಮುಗಿದ ಬಳಿಕವೂ ಅದೇ ಗುಂಗಿನಲ್ಲಿ ಇರುವಂತೆ ಮಾಡುತ್ತದೆ. ಮಾನವನ ಅಹಂಕಾರ ಎಷ್ಟು ಅಪಾಯಕಾರಿ ಎಂಬುದನ್ನು ಈ ಸಿನಿಮಾ ನಮಗೆ ಅತ್ಯಂತ ವಾಸ್ತವಿಕ ರೀತಿಯಲ್ಲಿ ಹೇಳಿದೆ. ಇಷ್ಟೆಲ್ಲಾ ಹೇಳಿದ ಮೇಲೆ ಯಾವುದಪ್ಪಾ ಈ ಸಿನಿಮಾ ಅಂತ ಯೋಚನೆ ಮಾಡ್ತಾ ಇದ್ದೀರಾ ಅದು ಬೇರೆ ಯಾವುದು ಅಲ್ಲ, 'ಅಯ್ಯಪ್ಪನುಮ್ ಕೋಶಿಯುಮ್' ಎಂಬ ಮಲಯಾಳಂ ಚಿತ್ರ.

ಇದು ಅಮೆಜಾನ್ ಪ್ರೈಮ್ ಒಟಿಟಿಯಲ್ಲಿ ತಮಿಳು ಸಬ್ ಟೈಟಲ್‌ನೊಂದಿಗೆ ಲಭ್ಯವಿದೆ. ಸಿನಿಮಾದ ಕಥೆ ಏನೆಂದರೆ ಶ್ರೀಮಂತ ಮತ್ತು ಮಾಜಿ ಸೇನಾ ಅಧಿಕಾರಿ ಕೋಶಿ ಕುರಿಯನ್ ಅವರನ್ನು ಅಟ್ಟಪ್ಪಾಡಿ ಬೆಟ್ಟದಲ್ಲಿ ಮದ್ಯದ ಬಾಟಲಿಗಳೊಂದಿಗೆ ಕಾರು ಚಾಲನೆ ಮಾಡುವಾಗ ಪೊಲೀಸರು ತಡೆಯುತ್ತಾರೆ .

ಯಾಕಂದ್ರೆ, ಅಟ್ಟಪ್ಪಾಡಿ ಬೆಟ್ಟಗಳಲ್ಲಿ ಮದ್ಯಪಾನ ಮಾಡುವುದು ಮತ್ತು ಮದ್ಯ ಸಾಗಿಸುವುದನ್ನು ನಿಷೇಧಿಸಲಾಗಿರುತ್ತದೆ. ಅಧಿಕಾರ ಮತ್ತು ಹಣದ ವ್ಯಕ್ತಿಯಾದ ಕೋಶಿ ಕುರಿಯನ್ ಪೊಲೀಸರ ಮಾತು ಕೇಳಲು ನಿರಾಕರಿಸಿದಾಗ, ಸಬ್-ಇನ್ಸ್‌ಪೆಕ್ಟರ್ ಅಯ್ಯಪ್ಪನ್ ನಾಯರ್ ಅವನ ಕೆನ್ನೆಗೆ ಹೊಡೆದು ಎಫ್ ಐಆರ್ ದಾಖಲಿಸಲು ಎಳೆದೊಯ್ದರು.





# ಬಿಡುಗಡೆಗೆ ಮುಹೂರ್ತ ಫಿಕ್ಸ್!

ರಾಕಿಂಗ್ ಸ್ಟಾರ್ ಯಶ್ ನಟನೆಯ 'ರಾಮಾಯಣ' ಸಿನಿಮಾ ದೇಶಾದ್ಯಂತ ಮಾತ್ರವಲ್ಲ ಇಡೀ ವಿಶ್ವದಾದ್ಯಂತ ಸಿನಿಪ್ರೇಮಿಗಳಲ್ಲಿ ಕುತೂಹಲ ಕೆರಳಿಸುತ್ತಿದೆ. ಭಾರತೀಯ ಮಹಾಕಾವ್ಯವನ್ನು ಆಧರಿಸಿದ ಈ ಸಿನಿಮಾವನ್ನು ನಿರ್ದೇಶಕ ನಿತೀಶ್ ತಿವಾರಿ ಮೂರು ಭಾಗಗಳಲ್ಲಿ ನಿರ್ಮಿಸಲಿದ್ದಾರೆ. ಜೊತೆಗೆ ಹಿಂದಿಯಲ್ಲಿ ಮೂಡಿ ಬರಲಿರುವ ಈ ಚಿತ್ರದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅನೇಕ ಸುದ್ದಿಗಳು ಹರಿದಾಡುತ್ತಲೇ ಇದೆ. ಇದೀಗ ಕೇಳಿ ಬರುತ್ತಿರುವ ಸುದ್ದಿ, ಸಿನಿ ಪ್ರೇಮಿಗಳಿಗೆ ಖುಷಿ ನೀಡಿದೆ. ರಾಮಾಯಣ ಸಿನಿಮಾದಲ್ಲಿ ರಾಮನ ಪಾತ್ರವನ್ನು ಬಾಲಿವುಡ್ ನಟ ರಣಬೀರ್ ಕಪೂರ್ ಹಾಗೂ ಸೀತೆಯ ಪಾತ್ರದಲ್ಲಿ ಸಾಯಿ ಪಲ್ಲವಿ ಮತ್ತು ರಾವಣನ ಪಾತ್ರದಲ್ಲಿ ಕೆಜಿಎಫ್ ಸ್ಟಾರ್ ಯಶ್ ನಟಿಸಲಿದ್ದಾರೆ. ಜೊತೆಗೆ ಹನುಮಾನ್ ಪಾತ್ರದಲ್ಲಿ ಸನ್ನಿ ಡಿಯೋಲ್ ಮತ್ತು ಶೂರ್ಪಣಖಿ ಪಾತ್ರದಲ್ಲಿ ರಾಕುಲ್ ಪ್ರೀತ್ ಸಿಂಗ್ ನಟಿಸಲಿದ್ದಾರೆ. ಇದೀಗ ಅಮೆರಿಕಾದ ಲಾಸ್ ಏಂಜಲೀಸ್‌ನಲ್ಲಿ ನಡೆದ ಸಿನಿಮಾಕಾನ್ 2026 ಕಾರ್ಯಕ್ರಮದಲ್ಲಿ ಯಶ್ ಭಾಗವಹಿಸಿರುವುದು ವಿಶೇಷ.

ಈ ಕಾರ್ಯಕ್ರಮದಲ್ಲಿ ಅವರು ತಮ್ಮ ಸಿನಿಮಾಗಳನ್ನು ಪ್ರಚಾರ ಮಾಡುವುದರ ಜೊತೆಗೆ ಹಾಲಿವುಡ್ ವಲಯದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ವೇಳೆ ಅನೇಕ ವಿಚಾರಗಳ ಬಗ್ಗೆ ಮಾತನಾಡಿದ ಯಶ್, ರಾಮಾಯಣ ಸಿನಿಮಾನಲ್ಲಿ ರಣ್‌ಬೀರ್ ಕಪೂರ್ ಜೊತೆಗೆ ನಟಿಸಿದ ಅನುಭವದ ಬಗ್ಗೆ ಮಾತನಾಡಿದ್ದಾರೆ. ಇನ್ನೂ ಅನೇಕ ವಿಚಾರಗಳ ಬಗ್ಗೆ ಮಾತನಾಡಿದ ಯಶ್, ರಾಮಾಯಣ ಈ ವರ್ಷ ಅಕ್ಟೋಬರ್‌ನಲ್ಲಿ ರಿಲೀಸ್ ಆಗಲಿದೆ ಎಂದು ಹೇಳಿದರು. ಜೊತೆಗೆ ರಾಮಾಯಣದಂತಹ ಮಹತ್ವದ ಕಥೆಯನ್ನು ಚಿತ್ರ ರೂಪದಲ್ಲಿ ಮೂಡಿಸುವುದು ದೊಡ್ಡ ಸವಾಲು. ಆದರೆ ಈ ತಂಡದ ಪ್ರತಿಯೊಬ್ಬರ ಗುರಿ ಒಂದೇ ಆಗಿತ್ತು, ಅತ್ಯುತ್ತಮ ರಾಮಾಯಣವನ್ನು ಪ್ರೇಕ್ಷಕರಿಗೆ ನೀಡುವುದು. ಈ ಗುರಿಯೇ ಎಲ್ಲರನ್ನೂ ಒಂದೇ ದಿಕ್ಕಿನಲ್ಲಿ ಸಾಗುವಂತೆ ಮಾಡಿದೆ. ತಮ್ಮ ತಮ್ಮ ದೃಷ್ಟಿಕೋನಗಳನ್ನು ಒಟ್ಟುಗೂಡಿಸಿ, ಸಿನಿಮಾ ಅತ್ಯುತ್ತಮವಾಗಿ ಮೂಡಿಬಂದಿದೆ ಎಂದು ಯಶ್ ಹೇಳಿದ್ದಾರೆ. ಸಿನಿಮಾಕಾನ್ ವೇಳೆ ಯಶ್ ತಮ್ಮ ಮೊದಲ ಹಾಲಿವುಡ್ ಸಂದರ್ಶನವನ್ನು ನೀಡಿರುವುದು ಮತ್ತೊಂದು ಮಹತ್ವದ ಮೈಲುಗಲ್ಲಾಗಿದೆ.

# ಡೇಟಿಂಗ್ ವದಂತಿಗೆ ಮೃಣಾಲ್ ಬ್ರೇಕ್

ನಟಿ ಮೃಣಾಲ್ ಠಾಕೂರ್ ಅವರ ವೈಯಕ್ತಿಕ ಜೀವನದ ಬಗ್ಗೆ ಕೇಳಿಬಂದ ವದಂತಿಗಳು ಒಂದೆರಡಲ್ಲ. ಆದರೆ ಅವುಗಳನ್ನು ಮೃಣಾಲ್ ಅವರು ಗಂಭೀರವಾಗಿ ಪರಿಗಣಿಸಿಲ್ಲ. ಸದ್ಯಕ್ಕೆ ಅವರು ಕೆಲಸದ ಬಗ್ಗೆ ಗಮನ ಹರಿಸಿದ್ದಾರೆ. ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಮ್ಮ ಬಗೆಗಿನ ಗಾಸಿಪ್‌ಗಳ ಬಗ್ಗೆ ಮೃಣಾಲ್ ಠಾಕೂರ್ ಮಾತನಾಡಿದ್ದಾರೆ.

ಚಿತ್ರರಂಗದ ತಾರೆಯರ ಬಗ್ಗೆ ವದಂತಿಗಳು ಹರಡುವುದು ಹೊಸದೇನಲ್ಲ. ಸದ್ಯ ತೆಲುಗು ಮತ್ತು ಹಿಂದಿ ಚಿತ್ರರಂಗದಲ್ಲಿ ಬ್ಯುಸಿಯಾಗಿರುವ ನಟಿ ಮೃಣಾಲ್ ಠಾಕೂರ್ ಈಗ ಇಂಥದ್ದೇ ಗಾಸಿಪ್‌ಗಳಿಗೆ ಖಡಕ್ ಆಗಿ ಉತ್ತರ ನೀಡಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಮೃಣಾಲ್ ಠಾಕೂರ್ ಮತ್ತು ದಕ್ಷಿಣ ಭಾರತದ ಖ್ಯಾತ ನಟ ಧನುಷ್ ಪ್ರೀತಿಸುತ್ತಿದ್ದಾರೆ ಹಾಗೂ ಶೀಘ್ರದಲ್ಲೇ ಮದುವೆ ಆಗಲಿದ್ದಾರೆ ಎಂಬ ಸುದ್ದಿ ಜೋರಾಗಿ ಕೇಳಿಬಂದಿತ್ತು. ಆದರೆ, ಇಬ್ಬರೂ ಈ ಸುದ್ದಿಯನ್ನು ನಗುನಗುತ್ತಲೇ ತಳ್ಳಿಹಾಕಿದ್ದರು. ಇದಾದ ಬೆನ್ನಲ್ಲೇ, ಹಿಂದಿ ಚಿತ್ರವೊಂದರ ಸಹನಟನ ಜೊತೆ ಮೃಣಾಲ್ ಡೇಟಿಂಗ್ ಮಾಡುತ್ತಿದ್ದಾರೆ ಎಂಬ ಸುದ್ದಿಯೂ ಹರಿದಾಡಿತ್ತು. ತಮ್ಮ ಮದುವೆ ಮತ್ತು ಸಂಬಂಧದ ಬಗ್ಗೆ ಕೇಳಲಾದ ಪ್ರಶ್ನೆಗೆ ಮೃಣಾಲ್ ಬಹಳ ತಮಾಷೆಯಾಗಿ ಉತ್ತರಿಸಿದ್ದಾರೆ. ಸದ್ಯಕ್ಕೆ ತಮಗೆ ಪ್ರೀತಿ ಅಥವಾ ಮದುವೆಗೆ ಸಮಯವೇ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

# 40 ನಿರ್ಮಾಪಕರು 1000 ಸಭೆಗಳು

ದಕ್ಷಿಣದ ಚಿತ್ರರಂಗಕ್ಕೆ ಹೋಲಿಸಿದರೆ, ಗೆಲುವಿನ ಸರಾಸರಿ ಬಾಲಿವುಡ್‌ನಲ್ಲಿ ಕಡಿಮೆ. ಅಲ್ಲದೆ, ಬಾಲಿವುಡ್‌ನಲ್ಲಿ ನೆಪೊಟಿಸಮ್ ಸಹ ಅತಿಯಾಗಿದ್ದು, ಹೊರಗಿನ ಪ್ರತಿಭಾವಂತರು ಬಾಲಿವುಡ್‌ಗೆ ಕಾಲಿಡುವುದೇ ಕಷ್ಟ ಎಂಬ ಪರಿಸ್ಥಿತಿ ಇದೆ.

ಇದೀಗ ಇದಕ್ಕೆಲ್ಲ ಇತಿಶ್ರೀ ಹಾಡಲು, ಬಾಲಿವುಡ್‌ನಲ್ಲಿ ಹೊಸದೊಂದು ಪ್ರಯೋಗ ಶುರುವಾಗಿದೆ. ಭಾರತೀಯ ಚಿತ್ರರಂಗ ಎಂದರೆ ಬಾಲಿವುಡ್ ಎಂಬ ಕಾಲವೊಂದಿತ್ತು. ಆದರೆ ಇತ್ತೀಚೆಗೆ ಬಾಲಿವುಡ್ ತಮ್ಮ ಹಳೆಯ ಕಳೆಯನ್ನು ಕಳೆದುಕೊಳ್ಳುತ್ತಿದೆ. ಆಗೊಂದು ಈಗೊಂದು ಹಿಟ್ ಬರುತ್ತಿವೆಯಾದರೂ ದಕ್ಷಿಣದ ಚಿತ್ರರಂಗಕ್ಕೆ ಹೋಲಿಸಿದರೆ, ಗೆಲುವಿನ ಸರಾಸರಿ ಕಡಿಮೆ. ಅಲ್ಲದೆ, ಬಾಲಿವುಡ್‌ನಲ್ಲಿ ನೆಪೊಟಿಸಮ್ ಸಹ ಅತಿಯಾಗಿದ್ದು, ಹೊರಗಿನ ಪ್ರತಿಭಾವಂತರು ಬಾಲಿವುಡ್‌ಗೆ ಕಾಲಿಡುವುದೇ ಕಷ್ಟ ಎಂಬ ಪರಿಸ್ಥಿತಿ ಇದೆ. ಇದೀಗ ಇದಕ್ಕೆಲ್ಲ ಇತಿಶ್ರೀ ಹಾಡಲು, ಬಾಲಿವುಡ್‌ನಲ್ಲಿ ಹೊಸದೊಂದು ಪ್ರಯೋಗ ಶುರುವಾಗಿದೆ. ಬಾಲಿವುಡ್ ಚಿತ್ರರಂಗದ ಬಾಗಿಲು ಸದಾ 'ಇನ್ಸೈಡರ್' ಮಾತ್ರ ತೆರೆದಿರುತ್ತದೆ ಎನ್ನಲಾಗುತ್ತದೆ.

ಇದನ್ನು ಸುಳ್ಳು ಮಾಡಲೆಂದು ಹಾಗೂ ಹೊಸ ರೀತಿಯ ಕತೆಗಾರರನ್ನು, ನಿರ್ದೇಶಕರನ್ನು ಹುಟ್ಟುಹಾಕಲು ಸ್ಕ್ರೀನ್‌ರೈಟರ್ಸ್ ಅಸೋಸಿಯೇಷನ್ ಹಮ್ಮಿಕೊಂಡಿರುವ ಪ್ರಯತ್ನದಿಂದಾಗಿ, ಪ್ರತಿಭಾವಂತ ಕಥೆಗಾರರು ಮತ್ತು ಲೇಖಕರಿಗೆ ನೇರವಾಗಿ ದೊಡ್ಡ ನಿರ್ಮಾಣ ಸಂಸ್ಥೆಗಳನ್ನು ತಲುಪುವ ಅವಕಾಶ ಸಿಗುತ್ತದೆ.



ಮುಂಬೈನಲ್ಲಿ ನಡೆಯಲಿರುವ ಈ ಮೆಗಾ ಇವೆಂಟ್‌ನಲ್ಲಿ, ಬಾಲಿವುಡ್‌ನ ಸುಮಾರು 40 ಪ್ರಮುಖ ನಿರ್ಮಾಣ ಸಂಸ್ಥೆಗಳು ಭಾಗವಹಿಸಲಿವೆ. ಕೇವಲ ಎರಡು ದಿನಗಳ ಅವಧಿಯಲ್ಲಿ ಈ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಹೊಸ ಲೇಖಕರ ನಡುವೆ 1,000ಕ್ಕೂ ಹೆಚ್ಚು ಮುಖಾಮುಖಿ ಸಭೆಗಳು ನಡೆಯುತ್ತವೆ. ಇದು ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಮಟ್ಟದ 'ಕತೆ ಹೇಳುವಿಕೆ' ಎಂದು ಹೇಳಲಾಗುತ್ತಿದೆ. ಬಾಲಿವುಡ್‌ನಲ್ಲಿ ಗಾಡ್‌ಫಾದರ್ ಇಲ್ಲದ ಅಥವಾ ಯಾವುದೇ ಸಂಪರ್ಕವಿಲ್ಲದ ಲೇಖಕರಿಗೆ ತಮ್ಮ ಕಥೆಗಳನ್ನು ದೊಡ್ಡ ನಿರ್ಮಾಪಕರಿಗೆ ವಿವರಿಸಲು ಇದು ಸುವರ್ಣಾವಕಾಶವಾಗಿತ್ತು. ಧರ್ಮಾ ಪ್ರೊಡಕ್ಷನ್ಸ್, ಎಕ್ಸೆಲ್ ಎಂಟರ್ಟೈನ್‌ಮೆಂಟ್ ಮತ್ತು ನೆಟ್‌ಫ್ಲಿಕ್ಸ್‌ನಂತಹ ದೊಡ್ಡ ಸಂಸ್ಥೆಗಳ ಕ್ರಿಯೇಟಿವ್ ಹೆಡ್‌ಗಳು ಈ ಸಭೆಗಳಲ್ಲಿ ಭಾಗವಹಿಸಿ ಹೊಸ ಕಥೆಗಳನ್ನು ಆಲಿಸಿದ್ದಾರೆ. ಲೇಖಕರಿಗೆ ತಮ್ಮ ಕಥೆಯನ್ನು ಹೇಳಲು ನಿಗದಿತ ಸಮಯವನ್ನು ನೀಡಲಾಗಿತ್ತು . ಇದರಿಂದ ಪ್ರತಿ ಲೇಖಕರಿಗೂ ಸಮಾನ ಅವಕಾಶ ಸಿಕ್ಕಿತು.



ಸಿನಿ ವಾಹಿನಿ

# ನನ್ನನ್ನು ಕೆಟ್ಟದಾಗಿ ಮುಟ್ಟಿದರು

ಆಡಿಷನ್ ಮಾಡುವಾಗ ಬಾಲಿವುಡ್ ನಟಿ ಡೈಸಿ ಶಾ ಅವರಿಗೆ ಕೆಟ್ಟ ಅನುಭವ ಆಗಿತ್ತು. ಆ ಘಟನೆಯ ಬಗ್ಗೆ ಅವರು ಈಗ ಬಾಯಿ ಬಿಟ್ಟಿದ್ದಾರೆ. ದಕ್ಷಿಣ ಭಾರತದ ಸಿನಿಮಾಗಾಗಿ ಮುಂಬೈನಲ್ಲಿ ಆಡಿಷನ್ ನಡೆಸಿದ ನಿರ್ಮಾಪಕನೊಬ್ಬ ತಮ್ಮನ್ನು ಕೆಟ್ಟದಾಗಿ ಮುಟ್ಟಿದ್ದ ಎಂದು ಡೈಸಿ ಶಾ ಅವರು ಹೇಳಿದ್ದಾರೆ. ಕನ್ನಡದ 'ಭದ್ರ', 'ಬಾಡಿಗಾರ್ಡ್' ಹಾಗೂ ಹಿಂದಿಯ ಒಂದಷ್ಟು ಸಿನಿಮಾಗಳಲ್ಲಿ ನಟಿಸಿದ ಡೈಸಿ ಶಾ ಅವರು ಈಗ ಕೆಲವು ಗಂಭೀರ ಆರೋಪ ಮಾಡಿದ್ದಾರೆ. ಕನ್ನಡ ಮಾತ್ರವಲ್ಲದೇ ತಮಿಳು, ಮರಾಠಿ, ಮಲಯಾಳಂ ಸಿನಿಮಾಗಳಲ್ಲೂ ಅವರು ಅಭಿನಯಿಸಿದ್ದಾರೆ. ಸಲ್ಮಾನ್ ಖಾನ್ ಅಭಿನಯದ 'ಜೈ ಹೋ' ಚಿತ್ರದ ಮೂಲಕ ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದ್ದ ನಟಿ ಡೈಸಿ ಶಾ ಅವರು, ದಕ್ಷಿಣ ಭಾರತದ ನಿರ್ಮಾಪಕನಿಂದ ತಮಗೆ ಎದುರಾದ ಅತ್ಯಂತ ಮುಜುಗರದ ಮತ್ತು ಕಹಿ ಘಟನೆಯೊಂದನ್ನು ಇತ್ತೀಚಿನ ಸಂದರ್ಶನದಲ್ಲಿ ಹಂಚಿಕೊಂಡಿದ್ದಾರೆ. ಮುಂಬೈನಲ್ಲಿ ನಡೆದ ಆಡಿಷನ್ ವೇಳೆ ದಕ್ಷಿಣ ಭಾರತದ ಸಿನಿಮಾ ನಿರ್ಮಾಪಕರೊಬ್ಬ ತಮ್ಮೊಂದಿಗೆ ಅಸಭ್ಯವಾಗಿ ವರ್ತಿಸಿದ್ದ ಎಂದು ಡೈಸಿ ಶಾ ಅವರು ಬಹಿರಂಗಪಡಿಸಿದ್ದಾರೆ.

'ಫ್ರೀ ಪ್ರೆಸ್ ಜರ್ನಲ್'ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಡೈಸಿ ಶಾ ಅವರು ತಮಗಾದ ಕಹಿ ಅನುಭವವನ್ನು ತೆರೆದಿಟ್ಟಿದ್ದಾರೆ. ಆದರೆ, ಈ ಘಟನೆಗೆ ಕಾರಣವಾದ ಆ ದಕ್ಷಿಣದ ನಿರ್ಮಾಪಕ ಯಾರು ಎಂಬ ಹೆಸರನ್ನು ಮಾತ್ರ ಡೈಸಿ ಶಾ ಬಹಿರಂಗಪಡಿಸಿಲ್ಲ. 'ದಕ್ಷಿಣದ ಚಿತ್ರ ನಿರ್ಮಾಪಕರೊಬ್ಬರು ಕಾಸ್ಟಿಂಗ್‌ಗಾಗಿ ಮುಂಬೈಗೆ ಬಂದಿದ್ದರು. ಸುಮಾರು 6-7 ಹುಡುಗಿಯರು ಅವರನ್ನು ಭೇಟಿ ಮಾಡಲು ಹೋಗಿದ್ದೆವು. ಅವರು ಪ್ರತಿಯೊಬ್ಬರನ್ನು ವೈಯಕ್ತಿಕವಾಗಿ ಭೇಟಿ ಮಾಡುತ್ತಿದ್ದರು. ನಾನು ಅವರನ್ನು ಭೇಟಿಯಾದಾಗ ಅವರು ನನ್ನನ್ನು ಕೆಟ್ಟದಾಗಿ ಸ್ಪರ್ಶಿಸಿದರು ಮತ್ತು ನನ್ನ ಕೈ ಹಿಡಿದುಕೊಂಡರು. ಅವರ ಆ ವರ್ತನೆ ನನಗೆ ಅಸಮಾಧಾನ ತರಿಸಿತು' ಎಂದು ಡೈಸಿ ಶಾ ಹೇಳಿದ್ದಾರೆ. 'ಯಾರಾದರೂ ನನ್ನನ್ನು ಮುಟ್ಟಿದರೆ ನನಗೆ ಇಷ್ಟವಾಗುವುದಿಲ್ಲ. ಆ ಕಾರಣಕ್ಕಾಗಿಯೇ ನಾನು ಮಸಾಜ್ ಕೂಡ ಮಾಡಿಸಿಕೊಳ್ಳುವುದಿಲ್ಲ. ಒಬ್ಬ ಮಹಿಳೆ ಮುಟ್ಟುವುದೇ ನನಗೆ ಇಷ್ಟವಿಲ್ಲದಿರುವಾಗ, ಒಬ್ಬ ಪುರುಷ ಅಸಭ್ಯವಾಗಿ ವರ್ತಿಸುವುದನ್ನು ಸಹಿಸಲು ಸಾಧ್ಯವೇ ಇಲ್ಲ.

# ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲೂ ಚರಿತ್ರೆ ಸೃಷ್ಟಿಸಲು ಸಿದ್ಧರಾದ ವೈಭವ್!




ಸಚಿನ್ ಆಲ್ ಟೈಮ್ ರೆಕಾರ್ಡ್ ಬ್ರೇಕ್

ಕೇವಲ 15 ವರ್ಷಗಳಲ್ಲಿ ಕ್ರಿಕೆಟ್ ಜಗತ್ತಿನಲ್ಲಿ ಚಿರಪರಿಚಿತರಾಗಿರುವ ವೈಭವ್ ಸೂರ್ಯವಂಶಿ, ಇದೀಗ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲೂ ತಮ್ಮ ಸಾಮರ್ಥ್ಯವನ್ನ ಸಾಬೀತುಪಡಿಸಲು ಸಜ್ಜಾಗಿದ್ದಾರೆ. ರಾಜಸ್ಥಾನ್ ರಾಯಲ್ಸ್ ತಂಡದ 15 ವರ್ಷದ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಅವರು ಭಾರತೀಯ ಪುರುಷ ಕ್ರಿಕೆಟ್ ತಂಡಕ್ಕೆ ಅಂತರರಾಷ್ಟ್ರೀಯ ಪದಾರ್ಪಣೆ ಮಾಡುವ ಮೂಲಕ ಭಾರತದ ಲೆಜೆಂಡರಿ ಕ್ರಿಕೆಟರ್ ಸಚಿನ್ ತೆಂಡೂಲ್ಕರ್ ಅವರ ದಾಖಲೆಯನ್ನು ಮುರಿಯುವ ಸಿದ್ಧತೆಯಲ್ಲಿದ್ದಾರೆ. ಐಪಿಎಲ್‌ನಲ್ಲಿ ಧೂಳೆಬ್ಬರಿಸುತ್ತಿರುವ ವೈಭವ್‌ನನ್ನ ಬಿಸಿಸಿಐ ಐರ್ಲೆಂಡ್ ವಿರುದ್ಧ ನಡೆಯುವ ಟಿ20 ಸರಣಿಗೆ ಸಂಭಾವ್ಯ ಆಟಗಾರರ ಪಟ್ಟಿಯಲ್ಲಿ ಸೇರಿಸಿದೆ. ಒಂದು ವೇಳೆ ಅವರು ತಂಡಕ್ಕೆ ಸೇರಿದರೆ ವೈಭವ್ ಭಾರತದ ಪುರುಷ ತಂಡಕ್ಕೆ ಡೆಬ್ಯೂ ಮಾಡುವ ಅತ್ಯಂತ ಕಿರಿಯ ಆಟಗಾರ ಎಂಬ ದಾಖಲೆಗೆ ಪಾತ್ರರಾಗಲಿದ್ದಾರೆ.

ವೈಭವ್ ಸೂರ್ಯವಂಶಿ ಬಿಹಾರದವರಾಗಿದ್ದು, ಎಡಗೈ ಬ್ಯಾಟರ್ ಆಗಿದ್ದಾರೆ. ಅವರು ಐಪಿಎಲ್ 2026ರಲ್ಲಿ ರಾಜಸ್ಥಾನ್ ರಾಯಲ್ಸ್ ತಂಡಕ್ಕೆ ಸೇರಿ ಅದ್ಭುತ ಪ್ರದರ್ಶನ ನೀಡುತ್ತಿದ್ದಾರೆ. ಈ ಉತ್ತಮ ಫಾರ್ಮ್‌ನಿಂದಾಗಿ ಬಿಸಿಸಿಐ ಅವರನ್ನು ಐರ್ಲೆಂಡ್‌ನಲ್ಲಿ ನಡೆಯುವ ಟಿ20 ಸರಣಿಗೆ ಸಂಭಾವ್ಯ ಆಟಗಾರರ ಪಟ್ಟಿಯಲ್ಲಿ ಸೇರಿಸಿದೆ. ಈ ಸರಣಿಯಲ್ಲಿ ಅವರು ಆಡುವ ಅವಕಾಶ ಸಿಕ್ಕರೆ ಕೇವಲ 15 ವರ್ಷದವರಾಗಿ ಭಾರತದ ಪುರುಷ ತಂಡಕ್ಕೆ ಪದಾರ್ಪಣೆ ಮಾಡಿದ ಮೊದಲ ಆಟಗಾರರಾಗುತ್ತಾರೆ. ಸಚಿನ್ ತೆಂಡೂಲ್ಕರ್ ಅವರು ಇದುವರೆಗೆ ಭಾರತದ ಪುರುಷ ತಂಡಕ್ಕೆ ಅತ್ಯಂತ ಕಿರಿಯ ವಯಸ್ಸಿಗೆ ಪದಾರ್ಪಣೆ ಮಾಡಿದ ಆಟಗಾರರಾಗಿದ್ದಾರೆ. ಅವರು 16 ವರ್ಷ 205 ದಿನಗಳ ವಯಸ್ಸಿನಲ್ಲಿ ಪಾಕಿಸ್ತಾನ ವಿರುದ್ಧ ಟೆಸ್ಟ್ ಡೆಬ್ಯೂ ಮಾಡಿದ್ದರು.ಭಾರತದ ಪರ ಏಕದಿನ ಕ್ರಿಕೆಟ್‌ಗೂ ಪದಾರ್ಪಣೆ ಮಾಡಿದ ಅತ್ಯಂತ ಕಿರಿಯ ಆಟಗಾರ ಎಂಬ ದಾಖಲೆ ಇಂದಿಗೂ ಸಚಿನ್ ಹೆಸರಿನಲ್ಲಿದೆ. ಸಚಿನ್ 16 ವರ್ಷ 238 ದಿನಗಳ ವಯಸ್ಸಿನಲ್ಲಿ ಡೆಬ್ಯೂ ಮಾಡಿದ್ದರು. ವೈಭವ್ ಈಗ ಆ ದಾಖಲೆಯನ್ನು ಮುರಿಯುವ ಸಾಧ್ಯತೆಯಲ್ಲಿದ್ದಾರೆ. ಟಿ20ಯಲ್ಲಿ ಪದಾರ್ಪಣೆ ಮಾಡಿದ ಅತ್ಯಂತ ಕಿರಿಯ ಆಟಗಾರ ಎಂಬ ದಾಖಲೆ ವಾಷಿಂಗ್ಟನ್ ಸುಂದರ್ ಹೆಸರಿನಲ್ಲಿದೆ.

ಅವರು 18 ವರ್ಷ 80 ದಿನಗಳ ವಯಸ್ಸಿನಲ್ಲಿ 2017ರಲ್ಲಿ ಶ್ರೀಲಂಕಾ ವಿರುದ್ಧ ಪದಾರ್ಪಣೆ ಮಾಡಿದ್ದರು. ಪಾಕಿಸ್ತಾನದ ಹಸನ್ ರಜಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಅತ್ಯಂತ ಕಿರಿಯ ಆಟಗಾರ ಎಂಬ ವಿಶ್ವದಾಖಲೆಯನ್ನ ಹೊಂದಿದ್ದಾರೆ. ಅವರು 14 ವರ್ಷ 227 ದಿನಗಳ ವಯಸ್ಸಿನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. 14 ವರ್ಷ 233 ದಿನಗಳ ವಯಸ್ಸಿನಲ್ಲಿ ಒಡಿಐ ಡೆಬ್ಯೂ ಮಾಡಿದ್ದರು. ಫೆರಾಸಿಮ್ ಅವರು ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಅತ್ಯಂತ ಕಿರಿಯ ಆಟಗಾರರಾಗಿದ್ದಾರೆ. ಅವರು 14 ವರ್ಷ 16 ದಿನಗಳ ವಯಸ್ಸಿನಲ್ಲಿ ಡೆಬ್ಯೂ ಮಾಡಿದ್ದರು.ಮಹಿಳಾ ಕ್ರಿಕೆಟ್‌ನಲ್ಲಿ ಶಫಾಲಿ ವರ್ಮಾ 15 ವರ್ಷ 239 ದಿನಗಳ ವಯಸ್ಸಿನಲ್ಲಿ ಡೆಬ್ಯೂ ಮಾಡುವ ಮೂಲಕ ಮೂರು ಮಾದರಿಯಲ್ಲೂ ಭಾರತದ ಪರ ಪದಾರ್ಪಣೆ ಮಾಡಿದ ಅತ್ಯಂತ ಕಿರಿಯ ಕ್ರಿಕೆಟರ್ ಆಗಿದ್ದಾರೆ.

2019ರಲ್ಲಿ ಅವರು ದಕ್ಷಿಣ ಆಫ್ರಿಕಾ ವಿರುದ್ಧ ಪದಾರ್ಪಣೆ ಮಾಡಿದ್ದರು. ಆದರೆ ಪುರುಷ ತಂಡದಲ್ಲಿ ವೈಭವ್ ಸಚಿನ್ ದಾಖಲೆ ಮುರಿಯುವ ಸಿದ್ಧತೆಯಲ್ಲಿದ್ದಾರೆ.



# ಬಾಬರ್ ಐತಿಹಾಸಿಕ ಸಾಧನೆ

ಪಾಕಿಸ್ತಾನದ ಮಾಜಿ ನಾಯಕ ಬಾಬರ್ ಆಝಂ ಟಿ20 ಕ್ರಿಕೆಟ್‌ನಲ್ಲಿ ಐತಿಹಾಸಿಕ 100 ಅರ್ಧ ಶತಕಗಳನ್ನು ಪೂರೈಸಿದ್ದಾರೆ. ಪಿಎಸ್‌ಎಲ್‌ನಲ್ಲಿ ಈ ಸಾಧನೆ ಮಾಡಿದ ಅವರು, ಪಾಕಿಸ್ತಾನದ ಮೊದಲ ಆಟಗಾರ, ಏಷ್ಯಾದ ಎರಡನೇ ಹಾಗೂ ವಿಶ್ವದ ಮೂರನೇ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ವಿರಾಟ್ ಕೊಹ್ಲಿ ಮತ್ತು ಡೇವಿಡ್ ವಾರ್ನರ್ ನಂತರ ಈ ಮೈಲಿಗಲ್ಲು ತಲುಪಿದ ಬಾಬರ್, ತಮ್ಮ ಟಿ20 ವೃತ್ತಿಜೀವನದಲ್ಲಿ ಹೊಸ ಅಧ್ಯಾಯ ಬರೆದಿದ್ದಾರೆ. ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ನಾಯಕ ಬಾಬರ್ ಆಝಂ ಪ್ರಸ್ತುತ ತಮ್ಮ ದೇಶದಲ್ಲಿ ನಡೆಯುತ್ತಿರುವ ಟಿ20 ಲೀಗ್‌ನಲ್ಲಿ ಆಡುತ್ತಿದ್ದಾರೆ. ಈ ಲೀಗ್‌ನಲ್ಲಿ ಪೇಶಾವರ್ ಝುಲ್ಮಿ ತಂಡದ ಪರ ಆಡುತ್ತಿರುವ ಬಾಬರ್, ಕರಾಚಿಯಲ್ಲಿ ನಡೆದ ಪಿಎಸ್‌ಎಲ್ ಪಂದ್ಯದಲ್ಲಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.


ಇದರ ಜೊತೆಗೆ ಟಿ20 ಕ್ರಿಕೆಟ್‌ನಲ್ಲಿ ಈ ಸಾಧನೆ ಮಾಡಿದ ಪಾಕಿಸ್ತಾನದ ನಂಬರ್ 1, ಏಷ್ಯಾದ ನಂಬರ್ 2 ಮತ್ತು ವಿಶ್ವದ ನಂಬರ್ 3 ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ.

ವಾಸ್ತವವಾಗಿ ಪಿಎಸ್‌ಎಲ್ ಲೀಗ್‌ನಲ್ಲಿ ಪೇಶಾವರ್ ಝುಲ್ಮಿ ತಂಡದ ನಾಯಕನಾಗಿರುವ ಬಾಬರ್ ಆಝಂ ಕ್ವೆಟ್ಟಾ ಗ್ಲಾಡಿಯೇಟರ್ಸ್ ವಿರುದ್ಧದ ಪಂದ್ಯದಲ್ಲಿ 51 ಎಸೆತಗಳಲ್ಲಿ 71 ರನ್‌ಗಳ ಇನ್ನಿಂಗ್ಸ್ ಆಡಿದರು. ಇದು ಟಿ20 ಕ್ರಿಕೆಟ್‌ನಲ್ಲಿ ಬಾಬರ್ ಆಝಂ ಅವರ 100 ನೇ ಅರ್ಧಶತಕವಾಗಿತ್ತು. ಈ ಮೂಲಕ ಈ ಸಾಧನೆ ಮಾಡಿದ ಮೊದಲ ಪಾಕಿಸ್ತಾನಿ ಆಟಗಾರ ಎಂಬ ದಾಖಲೆ ಬರೆದ ಬಾಬರ್, 354 ಟಿ20 ಪಂದ್ಯಗಳ 341 ಇನ್ನಿಂಗ್ಸ್‌ಗಳಲ್ಲಿ 100 ಅರ್ಧಶತಕಗಳನ್ನು ಗಳಿಸಿದ್ದಾರೆ. ಬಾಬರ್ ಆಝಂಗಿಂತ ಮೊದಲು ವಿರಾಟ್ ಕೊಹ್ಲಿ ಟಿ20 ಕ್ರಿಕೆಟ್‌ನಲ್ಲಿ 100 ಅರ್ಧಶತಕಗಳ ಗಡಿ ದಾಟಿದ್ದರು. ವಿರಾಟ್ ಪ್ರಸ್ತುತ 419 ಟಿ20 ಪಂದ್ಯಗಳಲ್ಲಿ 402 ಇನ್ನಿಂಗ್ಸ್‌ಗಳಲ್ಲಿ 107 ಅರ್ಧಶತಕಗಳನ್ನು ಗಳಿಸಿದ್ದಾರೆ. ಹೀಗಾಗಿ ಟಿ20 ಕ್ರಿಕೆಟ್‌ನಲ್ಲಿ 100 ಅರ್ಧಶತಕ ಬಾರಿಸಿದ ಏಷ್ಯಾದ ಮೊದಲ ಬ್ಯಾಟರ್ ಎಂಬ ದಾಖಲೆ ಕೊಹ್ಲಿ ಪಾಲಾಗಿದ್ದರೆ, ಇದೀಗ ಟಿ20 ಕ್ರಿಕೆಟ್‌ನಲ್ಲಿ 100 ಅರ್ಧಶತಕಗಳನ್ನು ಬಾರಿಸಿದ ಏಷ್ಯಾದ ಎರಡನೇ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಬಾಬರ್ ಆಝಂ ಪಾತ್ರರಾಗಿದ್ದಾರೆ. ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ 116 ಅರ್ಧಶತಕಗಳೊಂದಿಗೆ ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಅರ್ಧಶತಕ ಗಳಿಸಿದ ದಾಖಲೆಯನ್ನು ಹೊಂದಿದ್ದಾರೆ. ವಾರ್ನರ್ 436 ಪಂದ್ಯಗಳಲ್ಲಿ ಅತಿ ಹೆಚ್ಚು ಅರ್ಧಶತಕ ಗಳಿಸಿದ ದಾಖಲೆಯನ್ನು ಹೊಂದಿದ್ದಾರೆ, 435 ಇನ್ನಿಂಗ್ಸ್‌ಗಳಲ್ಲಿ 116 ಅರ್ಧಶತಕ ಬಾರಿಸಿದ್ದಾರೆ. ಇದೀಗ ಬಾಬರ್ ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಅರ್ಧಶತಕ ಗಳಿಸಿದ ವಿಶ್ವದ ಮೂರನೇ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಉಳಿದಂತೆ ಈ ಪಟ್ಟಿಯಲ್ಲಿ ಡೇವಿಡ್ ವಾರ್ನರ್ ಮತ್ತು ವಿರಾಟ್ ಕೊಹ್ಲಿ ಮೊದಲೆರಡು ಸ್ಥಾನಗಳಲಿದ್ದಾರೆ. ತಮ್ಮ ಟಿ20 ವೃತ್ತಿಜೀವನದಲ್ಲಿ 100 ಅರ್ಧಶತಕಗಳನ್ನು ಬಾರಿಸಿರುವ ಬಾಬರ್ ಆಝಂ, ಇದರಲ್ಲಿ 39 ಅರ್ಧಶತಕಗಳನ್ನು ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಬಾರಿಸಿದ್ದರೆ, ಪಿಎಸ್‌ಎಲ್‌ನಲ್ಲಿ 38, ಬಿಬಿಎಲ್‌ನಲ್ಲಿ ಎರಡು, ಬಿಪಿಎಲ್‌ನಲ್ಲಿ ಮೂರು ಮತ್ತು ಎಲ್‌ಪಿಎಲ್‌ನಲ್ಲಿ ಒಂದು ಅರ್ಧ ಶತಕಗಳನ್ನು ಸಿಡಿಸಿದ್ದಾರೆ.

ಪಾಕಿಸ್ತಾನದ ನಂ.1, ಏಷ್ಯಾದ ನಂ.2, ವಿಶ್ವದ ನಂ.3..!

# ಸಿಎಸ್‌ಕೆ ಅಂಪೈರ್‌ಗಳೊಂದಿಗೆ ಫಿಕ್ಸಿಂಗ್ ಮಾಡ್ತಿದ್ರು

ಇಂಡಿಯನ್ ಪ್ರೀಮಿಯರ್ ಲೀಗ್‌ನ 5 ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ವಿರುದ್ಧದ ಗಂಭೀರ ಆರೋಪವೊಂದು ಮತ್ತೆ ಮುನ್ನಲೆಗೆ ಬಂದಿದೆ. ಅದು ಸಹ ಪಂದ್ಯ ಗೆಲ್ಲಲು ಅಂಪೈರ್‌ಗಳನ್ನ ಫಿಕ್ಸ್ ಮಾಡುತ್ತಿದ್ದರು ಎಂಬ ಪ್ರಬಲ ಆಪಾದನೆಯೊಂದಿಗೆ. ಈ ಆರೋಪ ಮಾಡಿದ್ದು ಮತ್ಯಾರೂ ಅಲ್ಲ, ಐಪಿಎಲ್‌ನ ಮಾಜಿ ಅಧ್ಯಕ್ಷ ಲಲಿತ್ ಮೋದಿ.



ಪೋಡ್‌ಕಾಸ್ಟ್‌ವೊಂದರಲ್ಲಿ ಮಾತನಾಡಿದ ಲಲಿತ್ ಮೋದಿ, ಚೆನ್ನೈ ಸೂಪರ್ ಕಿಂಗ್ಸ್ ಮಾಲೀಕ ಎನ್ ಶ್ರೀನಿವಾಸನ್ ಅವರು ಸಿಎಸ್‌ಕೆ ಪಂದ್ಯಗಳಿಗೆ ಚೆನ್ನೈ ಮೂಲದ ಅಂಪೈರ್‌ಗಳನ್ನು ನೇಮಿಸುತ್ತಿದ್ದರು. ಮೊದಲು ನಾನು ಈ ಬಗ್ಗೆ ಗಮನ ಹರಿಸಿರಲಿಲ್ಲ.

ಆದರೆ ಸಿಎಸ್‌ಕೆ ಪಂದ್ಯಗಳಿಗೆಲ್ಲಾ ಚೈನ್ನೈನ ಅಂಪೈರ್‌ಗಳೇ ಇರುತ್ತಿದ್ದರು. ಇದನ್ನು ಅಂಪೈರ್ ಫಿಕ್ಸಿಂಗ್ ಎಂದು ಕರೆಯಲಾಗುತ್ತದೆ.

ಸಿಎಸ್‌ಕೆ ಪರ ತೀರ್ಪು ಬರಲೆಂದು ತಮಗೆ ಬೇಕಾದ ಅಂಪೈರ್‌ಗಳನ್ನು ಅವರು ನೇಮಿಸುತ್ತಿದ್ದರು. ಈ ಮೂಲಕ ಫಿಕ್ಸಿಂಗ್ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂತು. ಈ ವಿಷಯವನ್ನು ಬಹಿರಂಗಪಡಿಸಲು ನಾನು ಪ್ರಯತ್ನಿಸಿದೆ. ಈ ವೇಳೆ ಚೆನ್ನೈ ಸೂಪರ್ ಕಿಂಗ್ಸ್ ಮಾಲೀಕ ಎನ್ ಶ್ರೀನಿವಾಸನ್ ನನ್ನ ವಿರುದ್ಧ ತಿರುಗಿ ನಿಂತರು. ಅಂದು ಎನ್ ಶ್ರೀನಿವಾಸನ್ ಅವರು ಬಿಸಿಸಿಐ ಕಾರ್ಯದರ್ಶಿ ಕೂಡ ಆಗಿದ್ದರು. ನಾನು ಸಿಎಸ್‌ಕೆ ಫ್ರಾಂಚೈಸಿಯ ಕಳ್ಳಾಟವನ್ನು ಬೆಳಕಿಗೆ ತಂದಿದ್ದರಿಂದ ಅವರು ನನ್ನ ಕಡು ವಿರೋಧಿಯಾದರು. ಹೀಗಾಗಿ ನನ್ನ ವಿರುದ್ಧ ಭ್ರಷ್ಟಚಾರದ ಆರೋಪಗಳನ್ನು ಹೊರಿಸಿದರು. ಈಗಲೂ ಖಚಿತವಾಗಿ ಹೇಳಬಲ್ಲೆ ಚೆನ್ನೈ ಸೂಪರ್ ಕಿಂಗ್ಸ್ ಅಂಪೈರ್‌ಗಳನ್ನೇ ಫಿಕ್ಸ್ ಮಾಡಿಕೊಳ್ಳುತ್ತಿದ್ದದ್ದು ನಿಜ ಎಂದು ಲಲಿತ್ ಮೋದಿ ಆರೋಪಿಸಿದ್ದಾರೆ.

ಇದೀಗ ಇಂಡಿಯನ್ ಪ್ರೀಮಿಯರ್ ಲೀಗ್‌ನ ಮಾಜಿ ಅಧ್ಯಕ್ಷರ ಆರೋಪವು ಭಾರೀ ಚರ್ಚೆಗೆ ಕಾರಣವಾಗಿದ್ದು, ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯ ಚಾಂಪಿಯನ್ ಪಟ್ಟದ ಮೇಲೆಯೇ ಪ್ರಶ್ನೆಗಳೆದ್ದಿವೆ. ಏಕೆಂದರೆ ಸಿಎಸ್‌ಕೆ ಫ್ರಾಂಚೈಸಿ ಈ ಹಿಂದೆ 2 ವರ್ಷಗಳ ಕಾಲ ನಿಷೇಧಕ್ಕೊಳಗಾಗಿತ್ತು. ಸ್ಪಾಟ್ ಫಿಕ್ಸಿಂಗ್ ಮತ್ತು ಬೆಟ್ಟಿಂಗ್ ಹಗರಣಗಳ ಕಾರಣದಿಂದಾಗಿ 2016 ಮತ್ತು 2017 ರ ಐಪಿಎಲ್‌ನಿಂದ ಸಿಎಸ್‌ಕೆ ಫ್ರಾಂಚೈಸಿಯನ್ನು ಬ್ಯಾನ್ ಮಾಡಲಾಗಿತ್ತು. ಇದೀಗ ಮತ್ತೆ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ಮೇಲೆ ಅಂಪೈರ್ ಫಿಕ್ಸಿಂಗ್ ಆರೋಪ ಕೇಳಿ ಬಂದಿದ್ದು, ಈ ಗಂಭೀರ ಆರೋಪದ ಬಗ್ಗೆ ಸಿಎಸ್‌ಕೆ ಏನು ಸ್ಪಷ್ಟನೆ ನೀಡಲಿದೆ ಎಂಬುದನ್ನು ಕಾದು ನೋಡಬೇಕಿದೆ.

# ಕೊಹ್ಲಿ ಆರ್ಭಟಕ್ಕೆ ವಿಶ್ವ ದಾಖಲೆಯೇ ಧೂಳೀಪಟ

ಇಂಡಿಯನ್ ಪ್ರೀಮಿಯರ್ ಲೀಗ್‌ನ 23ನೇ ಪಂದ್ಯದ ಮೂಲಕ ದಾಖಲೆಗಳ ಸರದಾರ ವಿರಾಟ್ ಕೊಹ್ಲಿ ಮತ್ತೊಂದು ವಿಶ್ವ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಅದು ಕೂಡ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಅತೀ ಹೆಚ್ಚು ರನ್ ಕಲೆಹಾಕುವ ಮೂಲಕ ಎಂಬುದು ವಿಶೇಷ. ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ ಪರ ಆರಂಭಿಕನಾಗಿ ಕಣಕ್ಕಿಳಿದ ವಿರಾಟ್ ಕೊಹ್ಲಿ 34 ಎಸೆತಗಳಲ್ಲಿ 1 ಸಿಕ್ಸ್ ಹಾಗೂ 6 ಫೋರ್‌ಗಳೊಂದಿಗೆ 49 ರನ್ ಬಾರಿಸಿದ್ದರು. ಈ 49 ರನ್‌ಗಳೊಂದಿಗೆ ಕಿಂಗ್ ಕೊಹ್ಲಿ ಟಿ20 ಇತಿಹಾಸದಲ್ಲೇ ಒಂದೇ ಮೈದಾನದಲ್ಲಿ ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್ ಎನಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಇಂತಹದೊಂದು ಭರ್ಜರಿ ದಾಖಲೆ ಇಂಗ್ಲೆಂಡ್‌ನ ಜೇಮ್ಸ್ ವಿನ್ಸ್ ಹೆಸರಿನಲ್ಲಿತ್ತು. ಸೌತಂಪ್ಟನ್‌ನ ರೋಸ್ ಬೌಲ್ ಮೈದಾನದಲ್ಲಿ 117 ಇನಿಂಗ್ಸ್ 3585 ರನ್ ಕಲೆಹಾಕುವ ಮೂಲಕ ಜೇಮ್ಸ್ ವಿನ್ಸ್, ಟಿ20 ಕ್ರಿಕೆಟ್ ಇತಿಹಾಸದಲ್ಲೇ ಒಂದೇ ಗ್ರೌಂಡ್‌ನಲ್ಲಿ ಅತೀ ಹೆಚ್ಚು ರನ್‌ಗಳಿಸಿದ ಬ್ಯಾಟರ್ ಎನಿಸಿಕೊಂಡಿದ್ದರು. ಇದೀಗ ಈ ದಾಖಲೆಯನ್ನು ವಿರಾಟ್ ಕೊಹ್ಲಿ ಅಳಿಸಿ ಹಾಕಿದ್ದಾರೆ. ಕಿಂಗ್ ಕೊಹ್ಲಿ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಈವರೆಗೆ 109 ಇನಿಂಗ್ಸ್ ಆಡಿದ್ದಾರೆ. ಈ ವೇಳೆ ಕೊಹ್ಲಿ ಬರೋಬ್ಬರಿ 3750+ ರನ್ ಗಳಿಸಿದ್ದಾರೆ. ಈ ಮೂಲಕ ಟಿ20 ಇತಿಹಾಸದಲ್ಲೇ ಒಂದೇ ಮೈದಾನದಲ್ಲಿ ಅತೀ ಹೆಚ್ಚು ರನ್ ಬಾರಿಸಿದ ಬ್ಯಾಟರ್ ಎಂಬ ವಿಶ್ವ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಅಷ್ಟೇ ಅಲ್ಲದೆ ಟಿ20 ಕ್ರಿಕೆಟ್ ಇತಿಹಾಸದಲ್ಲಿ ಒಂದೇ ತಂಡದ ಪರ ಕಣಕ್ಕಿಳಿದು 9 ಸಾವಿರಕ್ಕೂ ಅಧಿಕ ರನ್ ಕಲೆಹಾಕಿದ ವಿಶ್ವ ದಾಖಲೆ ಕೂಡ ಕಿಂಗ್ ಕೊಹ್ಲಿ ಹೆಸರಿನಲ್ಲಿದೆ. 2008 ರಿಂದ ಆರ್‌ಸಿಬಿ ಪರ ಕಣಕ್ಕಿಳಿಯುತ್ತಿರುವ ವಿರಾಟ್ 278 ಇನಿಂಗ್ಸ್‌ಗಳ ಮೂಲಕ ಈವರೆಗೆ 9313 ರನ್ ಗಳಿಸಿ ಈ ವಿಶೇಷ ದಾಖಲೆ ಬರೆದಿದ್ದಾರೆ. ಒಟ್ಟಿನಲ್ಲಿ ದಾಖಲೆಗಳ ಮೇಲೆ ದಾಖಲೆ ಬರೆಯುತ್ತಾ ಸಾಗುತ್ತಿರುವ ವಿರಾಟ್ ಕೊಹ್ಲಿ ಬ್ಯಾಟ್‌ನಿಂದ ಈ ಬಾರಿಯ ಐಪಿಎಲ್ ಮೂಲಕ ಮತ್ತಷ್ಟು ದಾಖಲೆಗಳನ್ನು ನಿರೀಕ್ಷಿಸಬಹುದು.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966